ಸಂಪುಟ: 04 ಸಂಚಿಕೆ: 266 ಪುಟಗಳು: 08 ಸೋಮವಾರ 09 ಡಿಸೆಂಬರ್ 2024 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಾವು ಮಾಡುವ ಕೆಲಸದಲ್ಲಿ ದೊಡ್ಡದು, ಚಿಕ್ಕದು ಎನ್ನುವ ವ್ಯತ್ಯಾಸವನ್ನು ಮಾಡಲು ಹೋಗಬಾರದು.

## 2028 ಸಿದ್ದರಾಮಯ್ಯ ನೇತೃತ್ವದಲ್ಲೆ ನಡೆಯಲಿದೆ : ಸಚಿವ

• ಉದಯವಾಹಿನಿ, ರಾಯಚೂರು

ಚಾಮರಾಜನಗರದಲ್ಲಿ ಶಾಲಾ ಕಟ್ಟಡವನ್ನು ಉದ್ಘಾಟಿಸಿ ಸಿಎಂ ಸಿದ್ದರಾಮಯ್ಯ ಅವರು ಮಾತನಾಡಿ, ನಾನು ರಾಜಕೀಯದಕೊನೆ ಗಾಲದಲ್ಲಿದ್ದೇನೆ ಎಂದು ಹೇಳಿಕೆ ನೀಡಿದ್ದರು. ಇದಕ್ಕೆ ಸಚಿವ ಎನ್.ಎಸ್ ಬೋಸರಾಜು, 78 ವರ್ಷ ವಯಸ್ಸಾಗುತ್ತಿದೆ ಎನ್ನುವ ಕಾರಣಕ್ಕೆ ರಾಜಕೀಯ ಕೊನೇ ಹಂತ ತಲುಪಿದ್ದೇನೆ ಎಂದು ಹೇಳಿದ್ದಾರೆ ಅಷ್ಟೇ. ಮುಂದಿನ ಚುನಾವಣೆ ಅವರ ನೇತೃತ್ವದಲ್ಲೇ ನಡೆಯುತ್ತದೆ ಎಂದು ತಿಳಿಸಿದರು. ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ರಾಜಕೀಯ ಬಿಡಲ್ಲ. 78 ವರ್ಷ ವಯಸ್ಸಾಗುತ್ತಿದೆ ಎನ್ನುವ ಕಾರಣಕ್ಕೆ ರಾಜಕೀಯ ಕೊನೇ ಹಂತ ತಲುಪಿದ್ದೇನೆ ಎಂದು ಹೇಳಿದ್ದಾರೆ ಅಷ್ಟೇ ಪವರ್ ಶೇರಿಂಗ್ ವಿಚಾರ ಆವತ್ತು ಇಲ್ಲ, ಇವತ್ತೂ ಬಂದಿಲ್ಲ.

ಮುಂದಿನ ಚುನಾವಣೆ ಅವರ ನೇತೃತ್ವದಲ್ಲೇ ನಡೆಯುತ್ತದೆ ಎಂದು ಹೇಳಿದರು. ಯಾರು ರಾಜಕಾರಣದಲ್ಲಿ ಜನರ ಪ್ರೀತಿ ವಿಶ್ವಾಸ ಹೊಂದಿರುತ್ತಾರೋ, ಪಕ್ಷ, ಜನರ ಅಭಿಪ್ರಾಯದ ಮೇಲೆ ಹಾಗೂ ಸರ್ವೇ ಮೇಲೆ ನಡೆಯುತ್ತದೆ. ಸಿಎಂ ಬದಲಾಗಲ್ಲ, ಎಲ್ಲಾರೂ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಅಂತಹ ಯಾವುದೇ ಪ್ರಸಂಗ ಬಂದಿಲ್ಲ. ಯಾವುದೇ ಸಮಸ್ಯೆಯಿಲ್ಲ, ಸಿಎಂ ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು

## ರಾಜ್ಯಾಧ್ಯಕ್ಷ ಸ್ಥಾನ ಸಿಎಂ ಆಗಲಿಕ್ಕೆ ಅಲ್ಲ : ಯತ್ನಾಳ್ ಗೆ ವಿಜಯೇಂದ್ರ

• ಉದಯವಾಹಿನಿ, ದಾವಣಗೆರೆ

ಬಿಜೆಪಿಯ ಬಣ ಬಡಿದಾಟಕ್ಕೆ ಸಂಬಂಧಿಸಿದಂತೆ ನಿನ್ನೆ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ರಾಜ್ಯಕ್ಕೆ ಭೇಟಿ ನೀಡಿ, ಕೋರ್ ಕಮಿಟಿ ಸಭೆಯಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾಗಿ ಬಿವೈ ವಿಜಯೇಂದ್ರ ಅವರೇ ಮುಂದುವರೆಯಲಿದ್ದಾರೆ ಎಂದು ಘೋಷಿಸಿದ್ದಾರೆ. ಇದೀಗ ರಾಜ್ಯಾಧ್ಯಕ್ಷ ಸ್ಥಾನ ಪಡೆದಿರುವುದು ಸಿಎಂ ಆಗಲಿಕ್ಕೆ ಅಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ, ಶಾಸಕ ಯತ್ನಾಳ ತಿರುಗೇಟು ನೀಡಿದರು. ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯಾಧ್ಯಕ್ಷ ಸ್ಥಾನ ಪಡೆದಿರುವುದು ಸಿಎಂ ಆಗಲಿಕ್ಕೆ ಅಲ್ಲ. ಜವಾಬ್ದಾರಿಯಿಂದ ಆ ಸ್ಥಾನವನ್ನು ನಿರ್ವಹಣೆ ಮಾಡುತ್ತಿದ್ದೇನೆ. ಅವರಿಗೆ ಹೋರಾಟ ಮಾಡಬೇಡಿ ಎಂದು ನಾವು ಯಾವತ್ತಿಗೂ ಹೇಳಿಲ್ಲ ಎಲ್ಲಾವನ್ನೂ ಪಕ್ಷದ ರಾಷ್ಟ್ರೀಯ ನಾಯಕರು ಗಮನಿಸುತ್ತಿದ್ದಾರೆ. ಅವರ ಅನುಮಾನಗಳಿಗೆ ಆಸೆಗಳಿಗೆ ಕಾಲವೇ ಉತ್ತರಿಸುತ್ತದೆ ಶಾಸಕ ಯತ್ನಾಳ್ ಅವರಿಗೆ ಒಳ್ಳೆಯದಾಗಲಿ ಎಂದರು.

## ಶೀಘ್ರವೇ 'ಗೃಹಲಕ್ಷ್ಮೀ ಸಂಘ'

• ಉದಯವಾಹಿನಿ, ಬೆಳಗಾವಿ

ರಾಜ್ಯದ ಮಹಿಳೆಯರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಿಹಿಸುದ್ದಿಯೊಂದನ್ನು ನೀಡಿದ್ದು ಶೀಘ್ರವೇ ಧರ್ಮಸ್ಥಳ ಸಂಘದ ಮಾದರಿಯಲ್ಲೇ ಮುಂದಿನ ದಿನಗಳಲ್ಲಿ ಗೃಹಲಕ್ಷ್ಮೀ ಸಂಘಗಳನ್ನು ಸ್ಥಾಪಿಸಿ ಮಹಿಳೆಯರ ಸ್ವಾವಲಂಬನೆಗೆ ಮತ್ತೊಂದು ಹೆಜ್ಜೆ ಮುಂದಿಡುವ ಉದ್ದೇಶವನ್ನು ಹೊಂದಿದ್ದೇವೆ ಎಂದು ತಿಳಿಸಿದ್ದಾರೆ. ಹಿರೇ ಬಾಗೇವಾಡಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ (ರಿ) ವತಿಯಿಂದ ನಡೆದ ತಾಲ್ಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಹಾಗೂ ಸಾಮಾನ್ಯ ಸಹಾಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಕಳೆದ ಹಲವು ವರ್ಷಗಳಿಂದ ಅತ್ಯಂತ ಕ್ರಿಯಾಶೀಲ ಕೆಲಸಗಳ ಮೂಲಕ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಲು, ಅವರಲ್ಲಿ ಆರ್ಥಿಕ ಬಲ ತುಂಬಲು ಪ್ರಯತ್ನಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದರು.



# ಇಂದಿನಿಂದ ಸದನ ಕದನ

## ಬೆಳಗಾವಿ ಅಧಿವೇಶನ

■ ವಾರದಲ್ಲಿ 2 ದಿನ ಕಿತ್ತೂರು ಕಲ್ಯಾಣ ಪ್ರಾಂತ್ಯ ಅಭಿವೃದ್ಧಿ ಕುರಿತ ಚರ್ಚೆಗೆ ಆದ್ಯತೆ ■ ಮಂಗಳವಾರ, ಬುಧವಾರ ಉ.ಕ.ಚರ್ಚೆಗೆ ಮೀಸಲು- ಸಭಾಪತಿ ಹೊರಟ್ಟಿ

■ ಚಳಿಗಾಲದ ಅಧಿವೇಶನಕ್ಕೆ ಕುಂದಾ ನಗರಿ ಸಜ್ಜು...

- ಅಧಿವೇಶನದಲ್ಲಿ ಹಲವು ಪ್ರಮುಖ ವಿಧೇಯಕಗಳನ್ನು ಮಂಡಿಸಲು ಸರಕಾರ ತಯಾರಿ
- ವಕ್ಫ್ ಆಸ್ತಿವಿವಾದ, ಇ-ಖಾತಾ ಗೊಂದಲ, ಬಿಪಿಎಲ್ ರೇಷನ್ ಕಾರ್ಡ್ ಗೊಂದಲ ಚರ್ಚೆಯ ವಸ್ತು
- ಮುಡಾ ಹಗರಣ, ಅಬಕಾರಿ ಲಂಚ ಮುಂತಾದವುಗಳು ಪ್ರತಿಪಕ್ಷಗಳಿಗೆ ಕಾಂಗ್ರೆಸ್ ವಿರುದ್ಧದ ಅಸ್ತ್ರ

### 15 ವಿಧೇಯಕಗಳ ಮಂಡನೆ

ರಾಜ್ಯ ಸರ್ಕಾರ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಕುಲಾಧಿಪತಿ ಸ್ಥಾನ ರಾಜ್ಯಪಾಲರಿಂದ ಕಿತ್ತು ಮುಖ್ಯಮಂತ್ರಿಗಳಿಗೆ ನೀಡುವ ವಿಧೇಯಕ ಮಂಡಿಸುತ್ತಿದ್ದು, ಇದು ರಾಜ್ಯಪಾಲರು, ಸರ್ಕಾರದ ನಡುವಿನ ಬಿರುಕು ತೀವ್ರಗೊಳಿಸುವ ಸಾಧ್ಯತೆಯಿದೆ.



11 ಸಾವಿರ ಕೋಟಿಗೂ ಹೆಚ್ಚು ಗಣಿ ಆದಾಯ ಸಂಗ್ರಹಿಸುವ ಮೂರು ಖನಿಜ ಮತ್ತು ಕಲ್ಲು ಗಣಿಗಾರಿಕೆ ತಿದ್ದುಪಡಿ ವಿಧೇಯಕಗಳು, ಅಲಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಉಳಿಸಲು ನಿರ್ದಿಷ್ಟ ಸಂಖ್ಯೆಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ದಾಖಲಾತಿ ಇರಬೇಕೆಂಬ ನಿಯಮ ಸಡಿಲಿಕೆ, ಠೇವಣಿದಾರರ ಹಿತರಕ್ಷಣೆ ತಿದ್ದುಪಡಿ ವಿಧೇಯಕ ಸೇರಿ 15 ವಿಧೇಯಕ ಹಾಗೂ ತಿದ್ದುಪಡಿ ವಿಧೇಯಕ ಮಂಡನೆಗೆ ರಾಜ್ಯ ಸರ್ಕಾರ ಮುಂದಾಗಿದೆ.

**ವಿಪಕ್ಷಗಳ ಬತ್ತಳಿಕೆಯಲ್ಲಿ ಸಾಲು ಸಾಲು ಅಸ್ತ್ರ**

• ಉದಯವಾಹಿನಿ, ಬೆಂಗಳೂರು

ಉಪ ಚುನಾವಣೆ ಭರ್ಜರಿ ಗೆಲುವು, ಜನ ಕಲ್ಯಾಣೋತ್ಸವ ಯಶಸ್ಸಿನ ಹುಮ್ಮಸ್ಸಿನಲ್ಲಿರುವ ರಾಜ್ಯ ಸರ್ಕಾರಕ್ಕೆ ಸೋಮವಾರದಿಂದ 10 ದಿನಗಳ ಕಾಲ ನಡೆಯಲಿರುವ ಬೆಳಗಾವಿ ಚಳಿಗಾಲದ ಅಧಿವೇಶನದ ರೂಪದಲ್ಲಿ ಅಗ್ನಿ ಪರೀಕೆ ಎದುರಾಗಿದೆ. ವಕ್ಫ್, ಮುಡಾ, ಬಾಣಂತಿಯರ ಸಾವಿ ನಂತಹ ವಿವಾದಗಳನ್ನು ಮುಂದಿಟ್ಟುಕೊಂಡು ಸರ್ಕಾರದ ಮೇಲೆ ಮುಗಿ ಬೀಳಲು ಪ್ರತಿಪಕ್ಷಗಳು ಸಜ್ಜಾಗಿದ್ದರೆ, ಕೊರೋನಾ ಹಗರಣ ಕುರಿತ ಕುನ್ಹಾ ವರದಿ, ಯಡಿಯೂರಪ್ಪ, ವಿಜಯೇಂದ್ರ ಮೇಲಿನ ಬಿಡಿಎ ಹಗರಣ ಆರೋಪ, ಲೈಂಗಿಕ ದೌರ್ಜನ್ಯ ಪ್ರಕರಣ, ಯತ್ನಾಳ್-ವಿಜಯೇಂದ್ರ ಕಚ್ಚಾಟ ಪ್ರಸ್ತಾಪಿಸಿ ಪ್ರತಿಪಕ್ಷಗಳನ್ನು ಕಟ್ಟಿ ಹಾಕಲು ಸರ್ಕಾರವೂ ಸಿದ್ಧತೆ ನಡೆಸಿದೆ. ಆಡಳಿತ ಮತ್ತು ಪ್ರತಿಪಕ್ಷ ನಡುವೆ ಜಟಾಪಟಿ ನಿರೀಕ್ಷಿಸಲಾಗಿದೆ. ಕುಂದಾ ನಗರಿಯ ಸುವರ್ಣಸೌಧದಲ್ಲಿ 11ನೇ ಚಳಿಗಾಲದ ಅಧಿವೇಶನ ನಡೆಯಲಿದೆ.

ರಾಜ್ಯ ಸರ್ಕಾರಕ್ಕೆ ಮುಡಾ ಪ್ರಕರಣದಲ್ಲಿ ಇ.ಡಿ ಹೊರಗೆಡವಿರುವ ತನಿಖಾ ವಿಚಾರಗಳನ್ನು ಮುಂದಿಟ್ಟುಕೊಂಡು ಮುಖಭಂಗ ಉಂಟು ಮಾಡಲು ಬಿಜೆಪಿ-ದಳ ಸಜ್ಜಾಗಿವೆ.


ವಕ್ಫ್ ಭೂ ವಿವಾದ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಮಾನ್ಯತೆಗಿದ್ದ ನಿಯಮ ಸಡಿಲ, ಗುತ್ತಿಗೆಯಲ್ಲೂ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಬೇಕೆಂಬ ಪ್ರಸ್ತಾವನೆ ಸೇರಿ ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ತುಷ್ಟೀಕರಣ ನಡೆಸುತ್ತಿದೆ ಎಂದು ಬಿಂಬಿಸುವುದು, ಜತೆಗೆ ಬಾಣಂತಿಯರ ಸರಣಿ ಸಾವು ಉಂಟಾಗಿದ್ದರೂ ಯಾರೊಬ್ಬರೂ ಬಳ್ಳಾರಿಗೆ ಭೇಟಿ ನೀಡಿ ಪರಿಹಾರ ನೀಡದಿರುವುದು ಹಾಗೂ ತಪ್ಪಿತಸ್ಥ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳದ ಬಗ್ಗೆ ಸದನದಲ್ಲಿ ಆಕ್ರೋಶ ವ್ಯಕ್ತಪಡಿಸಲೂ ಎನ್‌ಡಿಎ ಕೂಟ ಸಿದ್ಧತೆ ನಡೆಸಿದೆ. ಗ್ಯಾರಂಟಿಗಳ ಅನುಷ್ಠಾನದಲ್ಲಿನ ಲೋಪ, ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡದಿರುವುದು, ಅಧಿಕಾರ ಹಂಚಿಕೆಯಂಥ ಅಸ್ತ್ರಗಳೊಂದಿಗೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಮುಂದಾಗಿವೆ. ಉ-ಕ ಅಭಿವೃದ್ಧಿ ಬಗ್ಗೆ ಪ್ರತ್ಯೇಕ ಚರ್ಚೆ ಪ್ರತಿ ಬಾರಿಯ ಚಳಿಗಾಲದ ಅಧಿವೇಶನದ ಮಾದರಿಯಲ್ಲೇ ಉ.ಕ.ಭಾಗದ ಬಗ್ಗೆ ಪ್ರತ್ಯೇಕ ಚರ್ಚೆಗೆ ಉಭಯ ಸದನಗಳಲ್ಲಿ ಅವಕಾಶ ನೀಡುವ ಸಾಧ್ಯತೆಯಿದೆ. ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆ ಸೇರಿ ಉ.ಕ. ಭಾಗದ ನೀರಾವರಿ ಯೋಜನೆಗಳು, ಬೆಳಗಾವಿ ಸುವರ್ಣ ಸೌಧಕ್ಕೆ ಇಲಾಖೆಗಳು ಸ್ಥಳಾಂತರಗೊಳ್ಳದಿರುವುದು, ಅನುದಾನ ತಾರತಮ್ಯ ಸೇರಿ ಉ.ಕ. ಭಾಗದ ಅಭಿವೃದ್ಧಿ ಕುರಿತು ಚರ್ಚೆ ನಡೆಯುವ ಸಾಧ್ಯತೆಯಿದೆ. ಉ.ಕ. ಅಭಿವೃದ್ಧಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸುವ ನಿರೀಕ್ಷೆಯೂ ಇದೆ ಎಂದು ಮೂಲಗಳು ತಿಳಿಸಿವೆ.

**ಅನುಭವ ಮಂಟಪದ ಚಿತ್ರ ಅನಾವರಣ:** ಸುವರ್ಣಸೌಧದಲ್ಲಿ ಇಂದು ಅನಾವರಣವಾಗುತ್ತಿರುವ ಅನುಭವ ಮಂಟಪದ ತೈಲವರ್ಣದ ಚಿತ್ರ ಕೇವಲ ಚಿತ್ರವಲ್ಲ. ಇದಕ್ಕೆ ದೊಡ್ಡ ಇತಿಹಾಸ, ಪರಂಪರೆ ಇದೆ.


12ನೇ ಶತಮಾನದಲ್ಲಿ ಅಂದಿನ ಸಾಮಾಜಿಕ ಕಾಲಘಟ್ಟದಲ್ಲೇ ವಿಶ್ವಗುರು ಬಸವಣ್ಣನವರು ಪ್ರಜಾಪ್ರಭುತ್ವ ವ್ಯವಸ್ಥೆನ್ನು ಹುಟ್ಟು ಹಾಕಿದ್ದರು. ನಮ್ಮ ದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಉದ್ದೇಶದಿಂದಾಗಿ ಇಂದಿನ ಯುವಕರು ಮತ್ತು ವಿದ್ಯಾರ್ಥಿಗಳಿಗೆ ಸಂದೇಶ ನೀಡಲು ಭಾವಚಿತ್ರ ಅನಾವರಣಗೊಳಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖಾದರ್, ಡಿ.9ರಂದು ಮೊದಲ ದಿನ ಬೆಳಗ್ಗೆ 11ರಿಂದ ಅಧಿವೇಶನ ವಿಧ್ಯುಕ್ತವಾಗಿ ಆರಂಭವಾಗಲಿದೆ. ಇದಕ್ಕೂ ಮೊದಲು 10.30ಕ್ಕೆ ಐತಿಹಾಸಿಕ ಅನುಭವ ಮಂಟಪ ಸ್ಮರಣೆಯ ಬೃಹತ್ ತೈಲ ವರ್ಣ ಚಿತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸುವರು. ವಿಧಾನ ಪರಿಷತ್ ಸಭಾಪತಿಗಳು, ಉಪ ಸಭಾಪತಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿ ಹಲವು ಗಣ್ಯರು ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ ಎಂದು ಹೇಳಿದರು.

### ಪ್ರತಿದಾಳಿಗೆ ಕೈ ಸಜ್ಜು

ನ್ಯಾ.ಕುನ್ಹಾ ವರದಿ ಪ್ರಸ್ತಾಪಿಸುವ ಮೂಲಕ ಯಡಿಯೂರಪ್ಪ, ಬಿ.ಶ್ರೀರಾಮುಲು ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮಾಡಿರುವ ಶಿಫಾರಸನ್ನು ಎತ್ತಿ ತೋರಿಸಿ ಪ್ರತಿದಾಳಿ ನಡೆಸಲು ಕಾಂಗ್ರೆಸ್ ಸಜ್ಜಾಗಿದೆ. ಜತೆಗೆ ಯಡಿಯೂರಪ್ಪ, ಬಿ.ವೈ. ವಿಜಯೇಂದ್ರ ಮೇಲಿನ ಬಿಡಿಎ ಹಗರಣ ಆರೋಪ, ಯಡಿಯೂರಪ್ಪ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ, ಗಣಿ ಅಕ್ರಮ ಸೇರಿ ವಿವಿಧ ಹಗರಣ, ಕೇಂದ್ರದ ಅನುದಾನ ತಾರತಮ್ಯ, ಮುನಿರತ್ನ ಪ್ರಕರಣ, ಯತ್ನಾಳ್-ವಿಜಯೇಂದ್ರ ಕಚ್ಚಾಟ ಪ್ರಸ್ತಾಪಿಸಿ ಪ್ರತಿಪಕ್ಷಗಳನ್ನು ಕಟ್ಟಿ ಹಾಕಲು ಸರ್ಕಾರವೂ ಸರ್ವ ಸಿದ್ಧತೆ ನಡೆಸಿದೆ.







**ಸರ್ಕಾರ ಕಟ್ಟಿ ಹಾಕಲು ಸಿದ್ಧತೆ**



## ಕೆಲಸವಿಲ್ಲದ ಸರ್ಕಾರ ಕೋವಿಡ್ ತನಿಖೆ ಮಾಡಿಸುತ್ತಿದೆ

• ಉದಯವಾಹಿನಿ, ಮೈಸೂರು

ರಾಜ್ಯಸರ್ಕಾರ ಬೇರೆ ಕೆಲಸ ಇಲ್ಲದೆ ಕೋವಿಡ್ ತನಿಖೆ ನಡೆಸಲು ಮುಂದಾಗಿದೆ. ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿರುಗೇಟು ನೀಡಿದ್ದಾರೆ.

ಆದರೆ ಸರ್ಕಾರಕ್ಕೆ ಬೇರೆ ಕೆಲಸ ಇಲ್ಲ. ಹತ್ತಾರು ವರ್ಷಗಳ ಹಿಂದಿನ ಕತೆಗಳನ್ನು ತೆಗೆದುಕೊಂಡು ತನಿಖೆ ಮಾಡಿಸುವುದರಿಂದ ಏನು ಪ್ರಯೋಜನವಾಗಲಿದೆ?, ಇದ್ಯಾವುದಕ್ಕೂ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ ಎಂದರು. 2019ರ ನಂತರ ಆರಂಭವಾದ ಕೋವಿಡ್ ವೇಳೆ ನಡೆದಿದ್ದ ವೈದ್ಯಕೀಯ ಸಲಕರಣೆಗಳ ಖರೀದಿ, ಚಿಕಿತ್ಸೆ, ತಪಾಸಣೆ ಹಾಗೂ ಇತರ ವೈದ್ಯಕೀಯ ಸೌಲಭ್ಯಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಾ ಬಂದಿದ್ದು, ಇದರ ವಿಚಾರಣೆಗಾಗಿ ರಾಜ್ಯಸರ್ಕಾರ ನ್ಯಾಯಮೂರ್ತಿ ಮೈಕಲ್ ಕುನ್ಹಾ ಅವರ ನೇತೃತ್ವದಲ್ಲಿ ವಿಚಾರಣಾ ಆಯೋಗವೊಂದನ್ನು ರಚನೆ ಮಾಡಿತ್ತು. ವಿಚಾರಣೆಯ ನಂತರ ಆಯೋಗ ಮಧ್ಯಂತರ ವರದಿ ನೀಡಿದ್ದು, ಅದರ ಆಧಾರದಲ್ಲಿ ರಾಜ್ಯಸರ್ಕಾರ ಎಸ್‌ಐಟಿ ತನಿಖೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಂಡಿದೆ

ವಿಚಾರಣಾ ವರದಿಯ ಕುರಿತು ಅನುಪಾಲನೆ ಮೇಲೆ ನಿಗಾ ವಹಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸಚಿವ ಸಂಪುಟದ ಉಪಸಮಿತಿ ರಚಿಸಲಾಗಿದೆ. ಈ ಸಮಿತಿ ನಿನ್ನೆ ಸಭೆ ನಡೆಸಿದ್ದು, ಕೋವಿಡ್ ಟೆಸ್ಟ್ ಮಾಡುವುದರಲ್ಲಿ ನೂರಾರು ಕೋಟಿ ರೂ.ಗಳ ಅಕ್ರಮವಾಗಿದೆ ಎಂದು ಆರೋಪಿಸಿದೆ. ಇದರ ತನಿಖೆಗೆ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ತಂಡ ರಚಿಸಲು ನಿರ್ಧರಿಸಲಾಗಿದೆ.

## 5 ಲಕ್ಷ ಪರಿಹಾರ

• ಉದಯವಾಹಿನಿ, ಬಳ್ಳಾರಿ

ಇತ್ತೀಚಿಗೆ ಬಳ್ಳಾರಿಯಲಿ ಬಾಣಂತಿಯರ ಸಾವು ಪ್ರಕರಣಕ್ಕೆ ಸಂಬಂಧಪಟ್ಟಂತೆ ಇದೀಗ ಮೃತರ ಕುಟುಂಬಸ್ಥರಿಗೆ ಸಿಎಂ ಸಿದ್ದರಾಮಯ್ಯ ಅವರು 5 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಸಿಎಂ ಸಿದ್ದರಾಮಯ್ಯ ಮೃತರ ಕುಟುಂಬಗಳಿಗೆ ಘೋಷಣೆ ಮಾಡಿದ್ದಾರೆ. ಪ್ರಕರಣದ ಕುರಿತು ಮಾತನಾಡಿದ ಅವರು ಬಳ್ಳಾರಿಯಲ್ಲಿ ಕಳೆದ ಒಂದು ತಿಂಗಳಲ್ಲಿ ಐದು ಬಾಣಂತಿಯರ ಸಾವಾಗಿದೆ. ಈ ಕುರಿತಂತೆ ಕ್ಯಾಬಿನೆಟ್ ಸಭೆಯಲ್ಲಿ ಕಳಪೆ ಔಷಧ ನೀಡಿದ್ದರಿಂದ ಸಾವನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಮೊದಲು ಎರಡು ಲಕ್ಷ ಪರಿಹಾರ ಘೋಷಿಸಿದ್ದ. ಈಗ ಪರಿಹಾರದ ಮೊತ್ತ ಹೆಚ್ಚಿಸಿದ್ದು ಮೃತ ಕುಟುಂಬಸ್ಥರಿಗೆ 5 ಲಕ್ಷ ರೂಪಾಯಿ ನೀಡಲಾಗುತ್ತೆ ಅಂತ ಸಿಎಂ ಸಿದ್ದರಾಮಯ್ಯ ಘೋಷಿಸಿದರು.

## ವಕ್ಫ್ ಬೋರ್ಡ್ ರದ್ದಾಗಲೇಬೇಕು: ಛಲವಾದಿ ನಾರಾಯಣಸ್ವಾಮಿ

### ಬಿಜೆಪಿ ನಿಯೋಗದೊಂದಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರ

• ಉದಯವಾಹಿನಿ, ಶಿಡ್ಲಘಟ್ಟ



ಸ್ವಾತಂತ್ರ್ಯ ಪೂರ್ವದಲ್ಲಿದ್ದ ವಕ್ಫ್ ಬೋರ್ಡನ್ನು ಕೂಡಲೇ ನಿಷೇಧಿಸಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು. ತಾಲ್ಲೂಕಿನ ಬೆಳ್ಳೂಟಿ ಗ್ರಾಮದ ಬಳಿಯಿರುವ ಪುರಾತನ ಕಾಲದ ಆಂಜನೇಯ ಸ್ವಾಮಿ ದೇವಾಲಯಕ್ಕೆ ಶನಿವಾರ ಬಿಜೆಪಿ ನಿಯೋಗದೊಂದಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

1947ರಲ್ಲಿ ದೇಶ ಸ್ವಾತಂತ್ರ್ಯಗೊಂಡ ನಂತರ ಹಿಂದೂಸ್ಥಾನದಿಂದ ಪಾಕಿಸ್ತಾನ ಬೇರ್ಪಟ್ಟಿತು. ನಂತರ 1971ರಲ್ಲಿ ಬಾಂಗ್ಲಾದೇಶ ರೂಪುಗೊಂಡಿತು. ಹಿಂದೆ ಒಂದಾಗಿದ್ದ ದೇಶದಲ್ಲಿದ್ದ ವಕ್ಫ್ ಕಾಯಿದೆ ಭಾರತದಲ್ಲಿತ್ತು. ಆದರೆ ನೆರೆಯ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದಲ್ಲಿ ಇಲ್ಲ. ಆ ದೇಶಗಳಿಲ್ಲದಿದ್ದ ಕಾಯಿದೆಗಳು ನಮಗೇಕೆ ಎಂದು ಪ್ರಶ್ನಿಸಿದರು. ಕೂಡಲೇ ವಕ್ಫ್ ರದ್ದುಗೊಳಿಸಬೇಕು. ಇದು ನಮ್ಮ ಪಕ್ಷದ ಮೂಲ ಉದ್ದೇಶ. ಈ ನಿಟ್ಟಿನಲ್ಲಿ ರಾಜ್ಯದಾದ್ಯಂತ ಮೂರು ತಂಡಗಳಾಗಿ ಪ್ರವಾಸ ಕೈಗೊಂಡು ವಕ್ಫ್ ನೋಟಿಸ್‌ನಿಂದ ಗೊಂದಲಕ್ಕೆ ಸಿಲುಕಿರುವವರ ಅಹವಾಲು ಸ್ವೀಕರಿಸುತ್ತಿದ್ದೇವೆ. ಜೊತೆಗೆ ಮುಂಬರುವ ಸದನದಲ್ಲಿ ಈ ಬಗ್ಗೆ ಗಟ್ಟಿ ಧ್ವನಿ ಎತ್ತುತ್ತೇವೆ ಎಂದರು. ತಾಲ್ಲೂಕಿನ ಬೆಳ್ಳೂಟಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯ ಪುರಾತನ ಕಾಲದಿಂದ ಇದೆ. ಇದೀಗ ದೇವಾಲಯ ಜಾಗ ವಕ್ಫ್‌ಗೆ ಸೇರಿಸಿರುವುದು ಖಂಡನೀಯ ವಿಶೇಷವೆಂದರೆ ಇಡೀ ಗ್ರಾಮದಲ್ಲಿ ಒಂದೇ ಒಂದು ಮುಸ್ಲಿಂ ಕುಟುಂಬವಿಲ್ಲ. ಆದರೂ ಗ್ರಾಮದ ದೇವಾಲಯ ಜಾಗ ವಕ್ಫ್‌ಗೆ ಸೇರಿಸಿರುವುದು ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣಕ್ಕೆ ನಿದರ್ಶನವಾಗಿದೆ ಎಂದರು. 2019ರಲ್ಲಿ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ದೇವಾಲಯದ ಜಾಗದ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದೆ. ಈ ಬಗ್ಗೆ ನಿಮ್ಮ ನಿಲುವೇನು ಎಂಬ ಮಾಧ್ಯಮದವರ ಪ್ರಶ್ನೆಗೆ ಪಹಣಿಯಲ್ಲಿ ವಕ್ಫ್ ಹೆಸರು ನಮೂದಿಸಿರುವುದು ಅಧಿಕಾರ ಯಾವುದೇ ಸರ್ಕಾರದ ಅವಧಿಯಲ್ಲಿ ಆಗಿದ್ದರೂ ಸರಿಯೇ ಅಂತಹ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಲಿ ಎಂದರು.

ಮಾಜಿ ಸಂಸದ ಎಸ್.ಮುನಿಸ್ವಾಮಿ, ಮಾಜಿ ಶಾಸಕ ವೈ.ಎ.ನಾರಾಯಣಸ್ವಾಮಿ, ಮುಖಂಡರಾದ ದೇವನಹಳ್ಳಿ ಗೋಪಿ, ಸುರೇಂದ್ರಗೌಡ, ಸೀಕಲ್ ಆನಂದಗೌಡ ಮತ್ತಿತರರು ನಿಯೋಗದಲ್ಲಿ ಇದ್ದರು.

# ಅಧಿಕಾರ ಒಪ್ಪಂದ ಚರ್ಚೆಗೆ ತೆರೆ : ಸಿದ್ದು ಬಣದಲ್ಲಿ ಸಂಭ್ರಮ, ಮೂಲ ನಿವಾಸಿಗಳು ಸಿಡಿಮಿಡಿ


● ಸರ್ಕಾರದಲ್ಲಿ ಮುಂಚೂಣಿ ಹುದ್ದೆಯಲ್ಲಿದ್ದಾರೆ ಎಂಬ ಕಾರಣಕ್ಕೆ ಉಳಿದೆಲ್ಲಾ ಪ್ರಮುಖ ನಾಯಕರನ್ನು ಮೂಲೆ ಗುಂಪು ಮಾಡಿ ಮೇಳೈಸುತ್ತಿದ್ದಾರೆ

• ಉದಯವಾಹಿನಿ, ಬೆಂಗಳೂರು



ಅಧಿಕಾರ ಹಂಚಿಕೆ ಸೂತ್ರವಾಗಿ ಪದೇ ಪದೇ ಕೇಳಿ ಬರುತ್ತಿದ್ದ ಗೊಂದಲಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೆರೆ ಎಳೆದ ಬಳಿಕ, ಈಗಿರುವ ಮುಖ್ಯಮಂತ್ರಿ ಅಧಿಕಾರಾವಧಿ ಐದು ವರ್ಷ ಪಕ್ಕಾ ಎಂಬಂತಾಗಿದ್ದು, ಸಿದ್ದರಾಮಯ್ಯ ಅವರ ಬೆಂಬಲಿಗರು ನಿಟ್ಟುಸಿರು ಬಿಟ್ಟು, ಒಳಗೊಳಗೆ ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ 136 ಸ್ಥಾನ ಗಳಿಸಿ ಭರ್ಜರಿ ಬಹುಮತದೊಂದಿಗೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ಮುಖ್ಯಮಂತ್ರಿ ಆಯ್ಕೆ ದೊಡ್ಡ ತಲೆನೋವಾಗಿತ್ತು. ಕಾಂಗ್ರೆಸ್ನಲ್ಲಿ ಹಲವು ಮುಖಂಡರು ನಾನು, ನೀನು ಎಂದು ಗದ್ದುಗೆಗಾಗಿ ಮುಗಿ ಬಿದ್ದಿದ್ದರು. ಅಂತಿಮ ರೇಸ್ ನಲ್ಲಿ ಆಗಿನ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಉಳಿದುಕೊಂಡರು. ಇಬ್ಬರ ನಡುವೆ ದೆಹಲಿಯಲ್ಲಿ ಒಂದು ವಾರ ಕಾಲ ಸಂಧಾನ ನಡೆದಿತ್ತು. ಅಳೆದುತೂಗಿ ರಾಜಿ ಸೂತ್ರ ರೂಪಿಸುವಲ್ಲಿ ಹೈಕಮಾಂಡ್ ನಾಯಕರು ಯಶಸ್ವಿಯಾದರು.

ಸಿದ್ದರಾಮಯ್ಯರಿಗೆ ಮುಖ್ಯಮಂತ್ರಿ ಪಟ್ಟ ನೀಡಿ, ಡಿ.ಕೆ.ಶಿವಕುಮಾರ್ ಅವರಿಗೆ ಉಪಮುಖ್ಯಮಂತ್ರಿ ಹುದ್ದೆಯ ಜೊತೆಗೆ ಪಕ್ಷದ ಅಧ್ಯಕ್ಷ ಸ್ಥಾನದಲ್ಲೂ ಮುಂದುವರೆಸಿದರು. ಆದರೆ ಈ ವ್ಯವಸ್ಥೆ ಲೋಕಸಭೆ ಚುನಾವಣೆವರೆಗೂ ಇರಲಿದೆ ಎಂದು ಖುದ್ದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು. ಲೋಕಸಭೆ ಚುನಾವಣೆ ಮುಗಿದು, ನಂತರ ವಿಧಾನಸಭೆ ಉಪ ಚುನಾವಣೆಯಾಗಿ ಕಾಂಗ್ರೆಸ್ ಎಲ್ಲಾ ಮೂರು ಕ್ಷೇತ್ರಗಳನ್ನು ಗೆದ್ದರೂ, ಹೈಕಮಾಂಡ್ನಿಂದ ಬದಲಾವಣೆಯ ಸುಳಿವು ಸಿಗಲಿಲ್ಲ. ಈ ನಡುವೆ ಮುಡಾ ಹಗರಣಕ್ಕೆ ಸಿದ್ದರಾಮಯ್ಯ ಹುದ್ದೆ ತ್ಯಾಗ ಮಾಡಬೇಕಾಗಬಹುದು ಎಂಬ ಲೆಕ್ಕಾಚಾರಗಳು ನಡೆದವು. ಆದರೆ ಡಿ.ಕೆ.ಬಣ ನಿರೀಕ್ಷೆಯಂತೆ ಯಾವ ಬದಲಾವಣೆಯೂ ನಡೆಯದೇ, ಇದ್ದಾಗ ಖಾಸಗಿ ಚಾನೆಲ್ ನ ಸಂದರ್ಶನದಲ್ಲಿ ಕುಳಿತ ಡಿ.ಕೆ.ಶಿವಕುಮಾರ್ ಅಧಿಕಾರ ಹಂಚಿಕೆ



### ಅವರಿಬ್ಬರೇ ಎಲ್ಲವನ್ನೂ ಮಾಡುವುದಾದರೆ ಉಳಿದವರು ಎಲ್ಲಿ ಹೋಗಬೇಕು

ಅಧಿಕಾರ ಹಂಚಿಕೆ ಒಪ್ಪಂದ ಕುರಿತು ಡಿ.ಕೆ.ಶಿವಕುಮಾರ್ ಹೇಳಿಕೆ ಸಹಜವಾಗಿ ಈಗಲೂ ಉಪಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿರುವ ಪರಮೇಶ್ವರ್ ಅವರಂಥ ಹಲವು ನಾಯಕರ ಬಿಪಿಯನ್ನು ಹೆಚ್ಚಿಸಿತ್ತು. ಅವರಿಬ್ಬರೇ ಎಲ್ಲವನ್ನೂ ಮಾಡುವುದಾದರೆ ಉಳಿದವರು ಎಲ್ಲಿ ಹೋಗಬೇಕು ಎಂದು ನೇರವಾಗಿ ಪ್ರಶ್ನಿಸುವ ಮೂಲಕ ಪರಮೇಶ್ವರ್ ತಮ್ಮ ಅಸಹನೆಯನ್ನು ಹೊರ ಹಾಕಿದರು. ಬಳಿಕ ಕೋವಿಡ್ ಹಗರಣದ ಪರಿಶೀಲನೆಗಾಗಿ ರಚಿಸಲಾಗಿರುವ ಸಚಿವ ಸಂಪುಟ ಸಭೆಯಲ್ಲಿ ನಿನ್ನೆ ಡಿ.ಕೆ.ಶಿವಕುಮಾರ್, ಪರಮೇಶ್ವರ್ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳಬೇಕಾಯಿತು. ನಂತರದ ಪತ್ರಿಕಾಗೋಷ್ಠಿಯಲ್ಲಿ ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಪತ್ರಕರ್ತರು ಪ್ರಶ್ನೆ ಕೇಳಿದಾಗ ಡಿ.ಕೆ. ಶಿವಕುಮಾರ್ ಅವರಿಗೆ ಮುಜುಗರವಾಗಿತ್ತು. ಯಾವ ಒಪ್ಪಂದವೂ ಇಲ್ಲ. ಹೈಕಮಾಂಡ್ ನನಗೆ ಮತ್ತು ಸಿದ್ದರಾಮಯ್ಯ ಅವರಿಗೆ ಕೆಲವು ಜವಾಬ್ದಾರಿಗಳನ್ನು ನೀಡಿದೆ.

ಒಪ್ಪಂದದ ಬಗ್ಗೆ ತಾವೇ ಹೇಳಿಕೆ ನೀಡಿ, ವಿವಾದ ಹುಟ್ಟು ಹಾಕಿದರು. ಇದು ಕಾಂಗ್ರೆಸ್‌ನಲ್ಲಿ ಭಾರೀ ಸಂಚಲನ ಮೂಡಿಸಿದ್ದಲ್ಲದೆ, ವಿರೋಧ ಪಕ್ಷಗಳಿಗೂ ಹೊಸ ಅಸ್ತ್ರ ನೀಡಿದಂತಾಗಿತ್ತು.

ಬಳ್ಳಾರಿಯಲ್ಲಿ ಬಾಣಂತಿಯರ ಸಾವು ಸೇರಿದಂತೆ ಹಲವು ಸಂಕಷ್ಟ ಸಂದರ್ಭಗಳಿರುವಾಗ, ಆಡಳಿತ ನಡೆಸುವವರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾರೆ ಎಂಬ ಭಾವನೆಯನ್ನು ಜನ ಸಾಮಾನ್ಯರಲ್ಲಿ ಮೂಡಿಸುವಲ್ಲಿ ವಿರೋಧ ಪಕ್ಷಗಳು ಯಶಸ್ವಿಯಾದವು. ಬುದ್ದಿ ಕಲಿತು 2023ರಲ್ಲಿ ಮೊದಲಿನ ಸಂಪ್ರದಾಯದಂತೆ ಸಾಮೂಹಿಕ ನಾಯಕತ್ವದ ಮೊರೆ ಹೋಗಿತ್ತು. ಪರಿಣಾಮ ಕಾಂಗ್ರೆಸ್ ತನ್ನ ವೈಭೋಗಕ್ಕೆ ಮರಳಿತ್ತು. ಸರ್ಕಾರದಲ್ಲಿ ಮುಂಚೂಣಿ ಹುದ್ದೆಯಲ್ಲಿದ್ದಾರೆ ಎಂಬ ಕಾರಣಕ್ಕೆ ಉಳಿದೆಲ್ಲಾ ಪ್ರಮುಖ ನಾಯಕರನ್ನು ಮೂಲೆ ಗುಂಪು ಮಾಡಿ, ಇಬ್ಬರೇ ಮೇಳೈಸುತ್ತಿದ್ದಾರೆ ಎಂಬ ಸಿಡಿಮಿಡಿ ಪಕ್ಷದ ಒಳಗೊಳಗೆ ಕುದಿಯುತ್ತಿದೆ. ಇದೇ ವೇಳೆ ಡಿ.ಕೆ.ಶಿವಕುಮಾರ್ ಅಧಿಕಾರ ಹಂಚಿಕೆಯ ಒಪ್ಪಂದದ ಬಗ್ಗೆ ಹೇಳಿಕೆ ನೀಡಿದ್ದು ಹಿರಿಯ ನಾಯಕರ ಅಸಮಾಧಾನ ಸ್ಫೋಟಗೊಳ್ಳಲು ಕಾರಣವಾಗಿತ್ತು.

ಕಾಂಗ್ರೆಸ್‌ನಲ್ಲಿ ಮೇಲ್ನೋಟಕ್ಕೆ ಒಗ್ಗಟ್ಟಿನ ಮಂತ್ರ ಜಪವಾಗುತ್ತಿದ್ದರೂ, ಒಳಗೊಳಗೆ ಅಸಮಾಧಾನದ ಜ್ವಾಲಾಗ್ನಿ ಕುದಿಯುತ್ತಿದೆ. ಹೊರಗಿನಿಂದ ಬಂದ ಸಿದ್ದರಾಮಯ್ಯ ನಿರಾಯಾಸವಾಗಿ ಏಳು ವರ್ಷ ಮುಖ್ಯಮಂತ್ರಿ ಹುದ್ದೆಯನ್ನು ಅನುಭವಿಸುತ್ತಿದ್ದಾರೆ ಎಂಬ ಅಸಹನೆ ಬಹಳಷ್ಟು ನಾಯಕರನ್ನು ಕಾಡುತ್ತಿದೆ. ಮುಂದಿನ ಐದು ವರ್ಷವೂ ಅವರೇ ಮುಂದುವರೆದು ಬಿಡುತ್ತಾರೇನೋ ಎಂಬ ದುಗುಡ ಬಹಳಷ್ಟು ನಾಯಕರಲ್ಲಿದೆ. ಅದಕ್ಕಾಗಿಯೇ ಆಗಾಗ್ಗೆ ಮುಖ್ಯಮಂತ್ರಿ ಬದಲಾವಣೆ, ಅಧಿಕಾರ ಹಂಚಿಕೆಯ ಸೂತ್ರ ಸೇರಿದಂತೆ ನಾನಾ ರೀತಿಯ ಹೇಳಿಕೆಗಳ ಮೂಲಕ ಗೊಂದಲ ಮೂಡಿಸುವ ಯತ್ನ ನಡೆಸುತ್ತಲೇ ಇರುತ್ತಾರೆ.

ಇದಕ್ಕೆ ಎದಿರೇಟು ಎಂಬಂತೆ ಸಿದ್ದರಾಮಯ್ಯ ಬಣ ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳ ಬೇಡಿಕೆಯನ್ನು ಮುಂದಿಟ್ಟು ಟಾಂಗ್ ನೀಡುತ್ತಿರುತ್ತದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹7,762/Gram24ct ₹7,115/Gram22ct | ಬೆಳ್ಳಿ: ₹92.00/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಅರಿವು ಸಂಸ್ಕಾರಗಳ ಕೊರತೆ

ಲೂಟಿ ಧ್ವಂಸ ಬೆಂಕಿಯಂಥ ಅಮಾನವೀಯ ಘಟನೆಗಳು ಎಲ್ಲೆಡೆ ನಿರಂತರ ನಡೆಯುತ್ತಿವೆ. ಇದಕ್ಕೆ ಕೋಮು ಮತೀಯತೆಗಳೇ ಕಾರಣ ಎನ್ನಬೇಕಿಲ್ಲ. ವೈಯಕ್ತಿಕ ಹಿತಾಸಕ್ತಿ, ಅರಿವು ಸಂಸ್ಕಾರಗಳ ಕೊರತೆಯೂ ಕಾರಣ. ಕಳೆದ ಆಗಸ್ಟ್ ನಲ್ಲಿ ಬಾಂಗ್ಲಾದಲ್ಲಿ ದಂಗೆ ಎದ್ದವರೂ ಪದಚ್ಯುತಗೊಂಡವರೂ ಮುಸ್ಲಿಮರೇ. ದಂಗೆ ಎಷ್ಟು ಅನಾಗರಿಕವಾಗಿತ್ತೆಂದರೆ ಅಧ್ಯಕ್ಷೆ ಹಸೀನಾರ ನಿವಾಸಕ್ಕೆ ನುಗ್ಗಿದ ಗುಂಪು ಅವರ ಒಳ ಉಡುಪುಗಳೊಂದಿಗೆ ವಿಕೃತಿ ಮೆರೆದಿತ್ತು ಇದೇ 2024 ರ ಡಿಸೆಂಬರ್ 7 ರಂದು ಬಾಂಗ್ಲಾದ ಡಾಕಾದ ಇಸ್ಕಾನ್ ದೇಗುಲಕ್ಕೆ ಬೆಂಕಿ ಇಡಲಾಯಿತು. ರಾಧಾ ಕೃಷ್ಣ ದೇವದೇವಿಯರ ವಿಗ್ರಹ ಮುಂತಾದದ್ದು ಸುಟ್ಟು ಕರಕಲ. ಇಂಥದ್ದು ಕೇವಲ ಬಾಂಗ್ಲಾದ್ದು ಇಂದಿನದ್ದು ಮಾತ್ರವಲ್ಲ. ಭಾರತವನ್ನೊಳಗೊಂಡು ವಿಶ್ವದಾದ್ಯಂತ ಅಂದು ಇಂದು ಮುಂದು ಎಂದೆಂದಿನದು. ಸಾತ್ತ್ವಿಕತೆಯ ಮೇಲೆ ಅಸಾತ್ತ್ವಿಕತೆಯ ದೌರ್ಜನ್ಯ ನಿರಂತರ. ಸಾತ್ತ್ವಿಕರೇ ದೇವತೆಗಳು, ಅಸಾತ್ತ್ವಿಕರೇ ರಾಕ್ಷಸರು. ಇತ್ತೀಚೆಗೆ ಸಂಕೇಶ್ವರ – ಗೋಕಾಕ್ ಬಸ್‌ನಲ್ಲಿ ಸೀಟಿಗಾಗಿ ಹಿಂದೂ ದಂಪತಿ ಹಾಗೂ ಇಬ್ಬರು ಮುಸ್ಲಿಂ ಮಹಿಳೆಯರ ಮಧ್ಯೆ ಜಗಳ ನಡೆದು ಮುಸ್ಲಿಂ ಮಹಿಳೆಯರು ತಮ್ಮ ಕುಟುಂಬದವರಿಗೆ ದೂರವಾಣಿ ಕರೆ ಮಾಡಿದ್ದರಿಂದ ಅಂದಾಜು ಹತ್ತು ಮುಸ್ಲಿಂ ಯುವಕರು ಬೈಕ್‌ಗಳಲ್ಲಿ ಬಸ್ ಹಿಂಬಾಲಿಸಿ ಅಡ್ಡ ಹಾಕಿ ದಂಪತಿಯನ್ನು ಹೊರಗೆಳೆದು ಜನರ ವಿನಂತಿ ವಿರೋಧ ಲೆಕ್ಕಿಸದೆ ಮಹಿಳೆ ಗರ್ಭಿಣಿ ಎಂಬುದನ್ನೂ ಪರಿಗಣಿಸದೇ ಮನಬಂದಂತೆ ಥಳಿಸಿದ ವರದಿ! 2015 ರಲ್ಲಿ ದೆಹಲಿಯಲ್ಲಿ ಹೆಲ್ಮೆಟ್ ಧರಿಸಿಲ್ಲದ್ದಕ್ಕೆ ಚಲನ್ ಜಾರಿ ಮಾಡಿದ್ದರಿಂದ ಶಹನವಾಜ್ ಹಾಗೂ ಕುಟುಂಬಸ್ಥರು ಇಬ್ಬರು ಟ್ರಾಫಿಕ್ ಪೊಲೀಸ್ ಅಧಿಕಾರಿಗಳನ್ನು ಥಳಿಸಿದರು ಇವು ಉದಾಹರಣೆ ಮಾತ್ರ. ನಿತ್ಯ ಊಹಿಸಲಾಗದ ಅಮಾನುಷ ಕೃತ್ಯಗಳು ನಡೆಯುತ್ತಿವೆ. ಇವೆಲ್ಲಕ್ಕೂ ಅರಿವು ಸಂಸ್ಕಾರಗಳ ಕೊರತೆಯೇ ಮುಖ್ಯ ಕಾರಣ. ಅರಿವು ಸಂಸ್ಕಾರವಂತರಾಗದಿದ್ದರೆ ಸಾತ್ತ್ವಿಕತೆಗೆ ಉಳಿವಿಲ್ಲ.

# ಸುವರ್ಣಸೌಧಕ್ಕೆ ರಾಜಕಳೆ, ಬೆಳಗಾವಿಗೆ ಸರ್ಕಾರವೇ ಶಿಫ್ಟ್

## ಬೆಂಗಳೂರಿನ ವಿಧಾನಸೌಧದ ಮಾದರಿಯಲ್ಲೇ ಬೆಳಗಾವಿ ಸುವರ್ಣಸೌಧದ ಸಭಾಧ್ಯಕ್ಷರ ಆಸನವನ್ನು ರೋಸ್ವುಡ್‌ನಲ್ಲಿ ಪುನರ್ ರಚನೆ

• **ಉದಯವಾಹಿನಿ, ಬೆಂಗಳೂರು**

ಬೆಳಗಾವಿಯಲ್ಲಿ ಶಾಶ್ವತವಾದ ಶಾಸಕರ ಭವನ ನಿರ್ಮಾಣಕ್ಕೆ ಪರಿಶಿಲನೆ ನಡೆಯುತ್ತಿದ್ದು, ನಾನಾ ಆಯಾಮಗಳಿಂದ ಚರ್ಚೆಗಳಾಗುತ್ತಿವೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಮಾದರಿಯಲ್ಲೇ ಹಿಮಾಚಲ ಪ್ರದೇಶ ಹಾಗೂ ನಾಗ್ಪುರದಲ್ಲೂ 2 ವಿಧಾನಸೌಧಗಳಿವೆ. ಅಲ್ಲಿಯೂ ಕಾಲಕಾಲಕ್ಕೆ ಅಧಿವೇಶನಗಳು ನಡೆಯುತ್ತಿವೆ. ಬೆಳಗಾವಿಯ ಸುವರ್ಣಸೌಧ ಎಲ್ಲಾ ಕಡೆಗಿಂತಲೂ ಹೆಚ್ಚು ಸಕ್ರಿಯವಾಗಿದ್ದು, ಉತ್ತಮ ಸ್ಥಿತಿಯಲ್ಲಿದೆ ಎಂದು ತಿಳಿಸಿದರು.

ನಮ್ಮಲ್ಲಿರುವ ಜಾಗದಲ್ಲಿ ನಾವೇ ಕಟ್ಟಡ ನಿರ್ಮಿಸಿ ಪ್ರವಾಸೋದ್ಯಮ ಇಲಾಖೆಯಿಂದ ಬೆಂಗಳೂರಿನ ಕುಮಾರಕೃಪ ಅತಿಥಿ ಗೃಹದ ಮಾದರಿಯಲ್ಲೇ ನಿರ್ಮಾಣ ಮಾಡುವುದು, ಅಧಿವೇಶನ ಸಮಯದಲ್ಲಿ ಶಾಸಕರಿಗಾಗಿ ಮೀಸಲಿಡುವ ವಿಚಾರವಿದೆ. ಉಳಿದಂತೆ ಪಿಪಿಪಿ ಮಾದರಿಯಲ್ಲಿ ನಿರ್ಮಾಣ ಮಾಡುವುದು ಅಥವಾ ಸರ್ಕಾರದಿಂದ ಕಟ್ಟಡ ನಿರ್ಮಿಸಿ ಆದಾಯ ಹಂಚಿಕೆ ಮಾದರಿಯಲ್ಲಿ ಖಾಸಗಿಯವರ ನಿರ್ವಹಣೆಗೆ ನೀಡುವ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು. 9 ರಂದು ಬೆಳಿಗ್ಗೆ 11 ಗಂಟೆಗೆ ವಿಧಾನ



☛ ಉದಯವಾಹಿನಿ ಚಿತ್ರ

ಮಂಡಲದ ಅಧಿವೇಶನ ಆರಂಭ ಗೊಳ್ಳುತ್ತದೆ. ಅಂದು 10.30 ಕ್ಕೆ ಅನುಭವ ಮಂಟಪದ ಭಾವಚಿತ್ರ ಅನಾವರಣಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟದ ಸಚಿವರು ಹಾಗೂ ಎಲ್ಲಾ ಪಕ್ಷದ ಸದನದ ನಾಯಕರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಅದರ ನಂತರ ಸಂತಾಪ ಸೂಚನೆ ಹಾಗೂ ಕಾರ್ಯಕಲಾಪಗಳು ಮುಂದುವರೆಯಲಿವೆ. ಮಧ್ಯಾಹ್ನ 1 ಗಂಟೆಗೆ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ನಡೆಯಲಿದ್ದು, ಸದನದ ಪ್ರತ್ಯಯಗಳ ಬಗ್ಗೆ ಚರ್ಚೆ ನಡೆಯಲಿದೆ. ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಚರ್ಚೆಯ ಕುರಿತು ಸಮಾಲೋಚನೆ ನಡೆಸಲಾಗುವುದು. ಸುವರ್ಣಸೌಧ ರಾಜ್ಯದ ಅಸಿತೆಯಾಗಿದ್ದು, ಇಲ್ಲಿ ಕರ್ನಾಟಕದ ಒಟ್ಟಾರೆ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿವೆ.

ಕರ್ನಾಟಕ ವಿಶ್ವವಿದ್ಯಾಲಯ, ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ, ಕಾರ್ಮಿಕ, ಪಂಚಾಯತ್ರಾಜ್, ಪ್ರವಾಸೋದ್ಯಮ ಸೇರಿದಂತೆ ಐದು ವಿಧೇಯಕಗಳು ಮಂಡನೆಯಾಗಲಿವೆ.

> **ಅಧಿವೇಶನದಲ್ಲಿ ಹೆಚ್ಚಿನ ಶಾಸಕರು ಭಾಗವಹಿಸಬೇಕು. ಕೃತಕ ಬುದ್ಧಿಮತ್ತೆ ಆಧರಿತ ಮುಖ ಗುರುತಿಸುವಿಕೆ ತಂತ್ರಜ್ಞಾನದಿಂದಾಗಿ ಶಾಸಕರ ಹಾಜರಾತಿ ಸ್ಪಷ್ಟವಾಗಿ ಲಭ್ಯವಾಗುತ್ತದೆ.ಶಾಸಕರು ಸದನಕ್ಕೆ ಗೈರು ಹಾಜರಾಗುವುದನ್ನು ಜನ ಗಮನಿಸುತ್ತಾರೆ. ಹಾಗಾಗಿ ಎಲ್ಲರೂ ಭಾಗವಹಿಸಿ, ಚರ್ಚೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.**

ಬೆಂಗಳೂರಿನ ವಿಧಾನಸೌಧದ ಮಾದರಿಯಲ್ಲೇ ಬೆಳಗಾವಿ ಸುವರ್ಣಸೌಧದ ಸಭಾಧ್ಯಕ್ಷರ ಆಸನವನ್ನು ರೋಸ್ವುಡ್‌ನಲ್ಲಿ ಪುನರ್ ರಚಿಸಲಾಗಿದೆ.

ಅಧಿವೇಶನದಲ್ಲಿ ಸುವ್ಯವಸ್ಥೆಗಳಿಗಾಗಿ ಜಿಲ್ಲಾಡಳಿತ ಅಗತ್ಯವಾದ ಕ್ರಮಗಳನ್ನು ಕೈಗೊಂಡಿದ್ದು, 6 ಸಾವಿರ ಪೊಲೀಸರು ಸೇರಿದಂತೆ ಒಟ್ಟು 8 ಸಾವಿರ ಸಿಬ್ಬಂದಿಯನ್ನು ಅಧಿವೇಶನಕ್ಕಾಗಿ ನಿಯೋಜಿಸಲಾಗಿದೆ. ಸಾರಿಗೆ, ವಸತಿ, ಊಟೋಪಚಾರ, ತಾಂತ್ರಿಕತೆ ಸೇರಿದಂತೆ ಹಲವು ವಿಚಾರಗಳ ಕುರಿತು 10 ಸಮಿತಿಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾಗಿದೆ. ಹೆದ್ದಾರಿ ಸಮೀಪದ ಮುಂಬಾಗಿಲಿನಿಂದ ಸುವರ್ಣಸೌಧದವರೆಗೆ ಸಂಚಾರಕ್ಕಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಹಾತಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಮಹಾ ಅಧಿವೇಶನದಲ್ಲಿ ಭಾಗವಹಿಸಿ 100 ವರ್ಷಗಳಾದ ಹಿನ್ನೆಲೆಯಲ್ಲಿ 100 ಭಾವಚಿತ್ರಗಳ ಪ್ರದರ್ಶನವನ್ನು ಸುವರ್ಣಸೌಧದ ಎಲ್ಲಾ ಪಿಲ್ಲರ್ಗಳಿಗೂ ಅಳವಡಿಸಲಾಗಿದೆ. ದರ್ಶನ್ ಪುಟ್ಟಣ್ಣಯ್ಯ ಮಂಡಿಸಿರುವ ಹಮಾಮಾನ ಬದಲಾವಣೆ, ಎಂ.ವೈ.ಪಾಟೀಲ್ ಮಂಡಿಸಿರುವ ದತ್ತಾತ್ರೇಯ ದೇವಸ್ಥಾನ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಎಚ್.ಕೆ.ಸುರೇಶ್ ಮಂಡಿಸಿರುವ ಬೇಲೂರು-ಹಳೇಬೀಡು ವಿಶ್ವಪರಂಪರೆ ಪ್ರದೇಶ ನಿರ್ವಹಣೆ ಪ್ರಾಧಿಕಾರ, ಖಾಸಗಿ ವಿಧೇಯಕಗಳು ಸ್ವೀಕಾರವಾಗಿವೆ ಎಂದರು.

> ### ಅಧಿವೇಶನ ಮತ್ತಷ್ಟು ರಂಗು
> **ಈ ಬಾರಿಯ ವಿಶೇಷ ಎಂದರೆ ಬೆಳಗಾವಿಯಲ್ಲಿ ಕಾಂಗ್ರೆಸ್‌ನ ಮಹಾ ಅಧಿವೇಶನಕ್ಕೆ 100 ವರ್ಷ ತುಂಬಿದ ಸಂಭ್ರಮವಾಗಿದೆ. ಇದರ ಅಂಗವಾಗಿ ರಾಜ್ಯಸರ್ಕಾರ ಮೂರು ದಿನಗಳ ವಿಶೇಷ ಕಾರ್ಯಕ್ರಮಗಳನ್ನು ಪಕ್ಷದ ಸಹಯೋಗದಲ್ಲಿ ಆಯೋಜಿಸಿದೆ. ಹೀಗಾಗಿ ಸುವರ್ಣಸೌಧದ ಚಳಿಗಾಲದ ಅಧಿವೇಶನ ಮತ್ತಷ್ಟು ರಂಗು ಪಡೆದಿದೆ. ಸ್ವಚ್ಛತೆ ಹಾಗೂ ಸುವ್ಯವಸ್ಥೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.**

ಕುಂದಾನಗರಿಯ ಊರಾಚೆಯ ಎತ್ತರದ ಸ್ಥಳದಲ್ಲಿ ನಿಂತಿರುವ ಸುವರ್ಣಸೌಧಕ್ಕೆ ಮತ್ತೆ ರಾಜಕಳೆ ಬಂದಿದೆ. ಪ್ರತಿವರ್ಷದ ಚಳಿಗಾಲದ ಅಧಿವೇಶನಕ್ಕೆ ಬೆಳಗಾವಿಯ ಸುವರ್ಣಸೌಧ ಸಾಕ್ಷಿಯಾ ಗಲಿದೆ. ಅದರಂತೆ indhininda ಆರಂಭವಾಗುತ್ತಿರುವ ಅಧಿವೇಶನದಲ್ಲಿ 224 ಶಾಸಕರು, 75 ವಿಧಾನಪರಿಷತ್ ಸದಸ್ಯರು, ಸಾವಿರಾರು ಅಧಿಕಾರಿಗಳು, ಪತ್ರಕರ್ತರು ಭಾಗವಹಿಸಲಿದ್ದಾರೆ.

ವಿಧಾನಮಂಡಲದ ಅಧಿವೇಶನ ನೋಡುವ ಸಲುವಾಗಿಯೇ ದೂರದೂರು ಗಳಿಂದ ಅದರಲ್ಲೂ ಉತ್ತರ ಕರ್ನಾಟಕ ಭಾಗದ ಜನಸಾಮಾನ್ಯರು ಜಾತ್ರೆಗೆ ಬರುವಂತೆ ಭೇಟಿ ನೀಡುತ್ತಾರೆ. ವರ್ಷಪೂರ್ತಿ ಜನರಿಲ್ಲದೇ ಬಿಕೋ ಎನ್ನುವ ಸುವರ್ಣಸೌಧ ಚಳಿಗಾಲದ ಅಧಿವೇಶನ ಬರುತ್ತಿದ್ದಂತೆ ಕಳೆಗಟ್ಟಲಾರಂಭಿಸುತ್ತದೆ.

# ಶ್ರೀಮದ್ಭಗವದ್ಗೀತಾ ಸಂದೇಶ



• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನ ರಾಜರಾಜೇಶ್ವರಿನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಡಿಸೆಂಬರ್ 10 ರಿಂದ 12ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಶ್ರೀಮದ್ಭಗವದ್ಗೀತಾ ಸಂದೇಶ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

# ನಾಗೇನಹಳ್ಳಿ ವಾರ್ಷಿಕೋತ್ಸವ

• **ಉದಯವಾಹಿನಿ, ಬೆಂಗಳೂರು**



☛ ಉದಯವಾಹಿನಿ ಚಿತ್ರ

ಭಾನುವಾರ ಯೂರೋಕಿಡ್ಸ್ ನಾಗೇನಹಳ್ಳಯ ಪುಟಾಣಿಗಳಿಂದ ರಂಗು ರಂಗಿನ ಮನೋರಂಜನೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕೆಂಪಾಪುರದ ಸಿಂಧಿ ಸ್ಕೂಲಿನ ರಂಗ ಮಂದಿರದಲ್ಲಿ ಕಾರ್ಯಕ್ರಮ ಬಹಳ ಉತ್ಸಾಹದಿಂದ ನೆರವೇರಿತು. ಚಿಣ್ಣರು ವಿವಿಧ ಮನೋರಂಜನೆಯ ರಸದೌತಣ ನೀಡುವಲ್ಲಿ ಯಶಸ್ವಿಯಾದರು. ಯುರೋಕಿಡ್ಸ್‌ನ, ಶಿಕ್ಷಕಿಯರ ಪರಿಶ್ರಮದಫಲವಾಗಿ ಪ್ರತಿಯೊಂದು ಚಿಣ್ಣರೂ ಅತ್ಯದ್ಭುತ ಪ್ರದರ್ಶನ ನೀಡಿದರು.

# ಗಂಡಸರಿಗೂ ಫ್ರೀ ಬಸ್ ಸಿಎಂ ಮಹತ್ವದ ಘೋಷಣೆ

• **ಉದಯವಾಹಿನಿ, ಬೆಂಗಳೂರು**

ಗಂಡಸರಿಗೂ ಫ್ರೀ ಬಸ್ ಕೊಟ್ರೆ, ಕೊಟ್ರೆ ಕೆಎಸ್‌ಆರ್‌ಟಿಸಿ ಮುಚ್ಚಬೇಕಾಗುತ್ತೆ ಅಂತ ಸಿಎಂ ಸಿದ್ದರಾಮಯ್ಯ ಅವರು ಹೇಳಿದ್ದಾರೆ. ಯಳಂದೂರಲ್ಲಿ 100 ಹಾಸಿಗೆಗಳ ಆಸ್ಪತ್ರೆ ಕಟ್ಟಡ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡುವಾಗ ಗ್ಯಾರಂಟಿ ಯೋಜನೆ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರು ಜನತೆಗೆ ಮಾಹಿತಿ ನೀಡಿ ದರು. ಈ ವೇಳೆ ಅಲ್ಲೇ ಇದ್ದ ಪುರು ಷರು ನಮಗೂ ಫ್ರೀ ಬಸ್ ಕೊಡಿ ಎಂದು ಆಗ್ರಹಿಸಿದರು, ಇದಕ್ಕೆ ಪ್ರತಿಕ್ರಿಯಿಸಿದ ಸಿದ್ಧರಾಮಯ್ಯ ಅವರು ಗಂಡಸರಿಗೂ ಫ್ರೀ ಬಸ್ ಕೊಟ್ರೆ, ಕೊಟ್ರೆ ಕೆಎಸ್‌ಆರ್‌ಟಿಸಿ ಮುಚ್ಚಬೇಕಾಗುತ್ತೆ ಅಂತ ಹೇಳಿದರು. ಇನ್ನೂ ಬಳ್ಳಾರಿ ಆಸ್ಪತ್ರೆಗೆ ಭಾನುವಾರ ಆರೋಗ್ಯ ಸಚಿವರು ಹಾಗೂ ಇಲಾಖೆ ಅಧಿಕಾರಿಗಳು ಕೂಡ ಭೇಟಿ ನೀಡಿ ಬಾಣಂತಿ ಸಾವಿನ ಕುರಿತು ಪರಿಶೀಲನೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

# ಕೆಎಸ್‌ಆರ್‌ಟಿಸಿಗೆ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ರೋಲಿಂಗ್ ಶೀಲ್ಡ್ ಪ್ರಶಸ್ತಿ



• **ಉದಯವಾಹಿನಿ, ಬೆಂಗಳೂರು**

ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯ ಸಮಾರಂಭದಲ್ಲಿ ರಾಜ್ಯದ ಸರ್ಕಾರಿ ಸಂಸ್ಥೆಗಳ ಪೈಕಿ ಅತೀ ಹೆಚ್ಚು ಸಶಸ್ತ್ರ ಪಡೆಗಳ ಧ್ವಜ ನಿಧಿ ಸಂಗ್ರಹಣಾ ಮಾಡಿರುವ ಸಂಸ್ಥೆಯ ಪ್ರಶಸ್ತಿಯು ಕೆಎಸ್‌ಆರ್‌ಟಿಸಿಗೆ ಲಭಿಸಿರುತ್ತದೆ. ನಿಗಮವು ಸತತ 10ನೇ ಬಾರಿಗೆ ರೋಲಿಂಗ್ ಶೀಲ್ಡ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಈ ಪ್ರಶಸ್ತಿಯನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹೋಟ್, ಡಾ. ಶಾಲಿನಿ ರಜನೀಶ ಭಾಆಸೇ., ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಎಸ್.ಆರ್. ಉಮಾಶಂಕರ್ ಭಾಆಸೇ., ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಮೇಜರ್ ಜನರಲ್ ಬಿಜಿ ಗಿಲಗಂಚಿ, ಎವಿಎಎಮ್ (ನಿವೃತ್ತ), ಅವರು, ಕೆಎಸ್‌ಆರ್‌ಟಿಸಿಯ ಅಧಿಕಾರಿಗಳಾದ ಡಾ. ಲತಾ ಟಿ.ಎಸ್. ಮಂಡಳಿ ಕಾರ್ಯದರ್ಶಿ/ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಮಂಜುಳಾ ಎಸ್. ನಾಯಕ್, ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಹೆಚ್.ಡಿ. ಗೌರಾಂಭ, ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ ರವರುಗಳಿಗೆ ಪ್ರದಾನ ಮಾಡಿದರು. ಈ ಸಮಾರಂಭದಲ್ಲಿ ಬ್ರಿಗೇಡಿಯರ್ ಎಮ್. ಬಿ. ಶಶಿಧರ್ (ನಿವೃತ್ತ) ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಅವರು ಉಪಸ್ಥಿತರಿದ್ದರು.

# ಕರ್ನಾಟಕದಲ್ಲಿ 14ರಿಂದ ಮತ್ತೆ ಮಳೆ ಸಾಧ್ಯತೆ

• **ಉದಯವಾಹಿನಿ, ಬೆಂಗಳೂರು**

ಮುಂದಿನ 10 ದಿನದಲ್ಲಿ ಬಂಗಾಳಕೊಲ್ಲಿಯಲ್ಲಿ ಎರಡು ವಾಯುಭಾರ ಕುಸಿತ ಉಂಟಾಗುವ ಸಾಧ್ಯತೆ ಇದ್ದು ಇದರ ಪ್ರಭಾವದಿಂದ ರಾಜ್ಯದಲ್ಲಿ ಡಿ.14ರಿಂದ 18ರವರೆಗೂ ರಾಜ್ಯದಲ್ಲಿ ಮಳೆಯಾಗುವ ಸಂಭವವಿದೆ ಅಂತ ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಫೆಂಗಲ್ ಚಂಡಮಾರುತದ ಹಾನಿಯಿಂದ ಇದೀಗ ಸುಧಾರಿಸಿಕೊಳ್ಳುತ್ತಿರುವಾಗಲೇ ಮತ್ತೆರಡು ವಾಯುಭಾರ ಕುಸಿತ ಸೃಷ್ಟಿಯಾಗುವ ಲಕ್ಷಣ ಬಂಗಾಳಕೊಲ್ಲಿ ಸಾಗರ ದಲ್ಲಿ ಕಂಡು ಬರುತ್ತಿದೆ. ಇದರ ಪ್ರಭಾವದಿಂದ ದಕ್ಷಿಣ ಒಳನಾಡಿನ ಬಹುತೇಕ ಎಲ್ಲಾ ಜಿಲ್ಲೆಗಳು ಹಾಗೂ ಕರಾವಳಿ ಜಿಲ್ಲೆಗಳಲ್ಲಿಡಿ. 14-15ಕ್ಕೆ ಮಳೆಯಾಗಲಿದೆ. 2ನೇ ವಾಯುಭಾರ ಕುಸಿತ ಡಿ.16ರ ಬಳಿಕ ರೂಪುಗೊಳ್ಳಲಿದ್ದು, ಇದರಿಂದ ಡಿ.17-18ಕ್ಕೆ ರಾಜ್ಯದಲ್ಲಿ ಮಳೆಯಾಗಲಿದೆ. ರಾಜ್ಯದಲ್ಲಿ ಬಹುತೇಕ ಬೆಳೆಗಳು ಕಟಾವಿಗೆ ಬಂದಿದ್ದು, ರೈತರು ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ ಎಂದು ಹವಾಮಾನ ತಜ್ಞಶ್ರೀನಿವಾಸ್ ರೆಡ್ಡಿ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

# ಯುವತಿ ಜತೆ ಅಸಭ್ಯವಾಗಿ ವರ್ತಿಸಿದ ಅಪಾರ್ಟ್ಮೆಂಟ್ ಮಾಲೀಕನ ಪುತ್ರ ಬಂಧನ

• **ಉದಯವಾಹಿನಿ, ಬೆಂಗಳೂರು**

ಕುಡಿದು ಬಂದು ಯುವತಿ ಜತೆ ಅಸಭ್ಯ ವರ್ತನೆ ತೋರಿದ ಆರೋಪದ ಮೇಲೆ ಅಪಾರ್ಟ್ ಮೆಂಟ್ವೊಂದರ ಮಾಲೀಕರ ಮಗನನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.ಸಂಜಯನಗರದ ಪ್ಲಾನೆಟ್ ವಿಸ್ತಾ ಅಪಾರ್ಟ್ಮೆಂಟ್ನ ಮಾಲೀಕರ ಮಗ ಮಂಜು ನಾಥ್ ಬಂಧಿತ ಆರೋಪಿ.


ಹೊಟೇಲ್ವೊಂದನ್ನು ನಡೆಸುತ್ತಿರುವ ಪಶ್ಚಿಮ ಬಂಗಾಳದ ಯುವತಿ ಪ್ಲಾನೆಟ್ ವಿಸ್ತಾ ಅಪಾರ್ಟ್ಮೆಂಟ್ ನಲ್ಲಿ ವಾಸವಾಗಿದ್ದಾರೆ. ಕಳೆದ 3ರಂದು ರಾತ್ರಿ 10.30ರ ಸಮಯದಲ್ಲಿ ಯುವತಿ ಪಾರ್ಸಲ್ ತೆಗೆದುಕೊಳ್ಳಲು ಗೇಟ್ ಬಳಿ ಬಂದಾಗ ಆರೋಪಿ ಮಂಜುನಾಥ್ ಯುವತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಆತ ಕುಡಿದಿದ್ದಾನೆ ಎಂದು ಏನೂ ಮಾತನಾಡದೆ ಯುವತಿ ಸುಮನಾಗಿದ್ದಾಳೆ. ಮತ್ತೆ ಆರೋಪಿ ಬಯ್ಯುತ್ತಾ ಯುವತಿಯ ಕಪಾಳಕ್ಕೆ ಹೊಡೆದಿದ್ದಾನೆ. ಅಲ್ಲದೆ, ಬಿಗಿಯಾಗಿ ಕುತ್ತಿಗೆ ಹಿಡಿದಿದ್ದಾನೆ. ತಪ್ಪಿಸಿಕೊಳ್ಳಲು ಹೋದಾಗ ಬೆರಳು ಕಚ್ಚಿ ಗಾಯಗೊಳಿಸಿದ್ದಾನೆ. ನಂತರ ಯುವತಿಯನ್ನು ಮನೆಯೊಳಗೆ ಎಳೆದುಕೊಂಡು ಹೋಗಲು ಪ್ರಯತ್ನಿಸಿ ದ್ದಾನೆ. ತಕ್ಷಣ ಯುವತಿ ಆತನಿಂದ ತಪ್ಪಿಸಿಕೊಂಡು ಮನೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದಾಳೆ. ಬೆಳಗ್ಗೆ ಆರೋಪಿ ಮಂಜುನಾಥ್ ಯುವತಿ ಮನೆಯ ಕಿಟಕಿಯಲ್ಲಿ ಇಣುಕಿ ಒಳಗೆ ಬರುತ್ತೇನೆ ಬಾಗಿಲು ತೆಗಿ ಎಂದು ಹೇಳಿದ್ದಾನೆ. ಆಗ ಯುವತಿ ಬಾಗಿಲು ತೆಗೆದಿಲ್ಲ. ಇದರಿಂದ ಕೋಪಗೊಂಡು ಮತ್ತೆ ನಿಂದಿಸಿ ಗಲಾಟೆ ಮಾಡಿ ಹೋಗಿದ್ದಾನೆ. ಇದರಿಂದ ಮನನೊಂದ ಯುವತಿ ಸಂಜಯನಗರ ಠಾಣೆ ಪೊಲೀಸರಿಗೆ ಈ ಬಗ್ಗೆ ದೂರು ನೀಡಿದರು. ತನಿಖೆ ಕೈಗೊಂಡ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

# ಕೆಎಸ್‌ಆರ್‌ಟಿಸಿ ನಗದು ರಹಿತ ಆರೋಗ್ಯ ಸೇವೆಗೆ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಸಾರಿಗೆ ಸಿಬ್ಬಂದಿಗಳ ಬಗ್ಗೆ ಅಪಾರವಾದ ಕಾಳಜಿಯಿದ್ದು, ಅವರ ಹಲವು ವರ್ಷಗಳ ಬೇಡಿಕೆಯಾದ ನಗದು ರಹಿತ ಆರೋಗ್ಯ ಸೇವೆಗೂ ಶೀಘ್ರದಲ್ಲಿಯೇ ಚಾಲನೆ ನೀಡಲಾಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಅವರು ತಿಳಿಸಿದ್ದಾರೆ. ಈಗಾಗಲೇ ಸಾರಿಗೆ ಸಚಿವರು ನೌಕರರ ಸಂಘಟನೆಗಳೊಂದಿಗೆ ಅವರ ಬೇಡಿಕೆಗಳಿಗೆ ಸಂಬಂಧಿಸಿ ದಂತೆ ಮಾತುಕತೆ ನಡೆಸಿದ್ದು, ಅವುಗಳಲ್ಲಿ ಕೆಲವೊಂದು ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಈಗಾಗಲೇ ಕ್ರಮ ಜರುಗಿದೆ.

ಅದರಲ್ಲಿ ಪ್ರಮುಖವಾಗಿ 1. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸೇವಾ ವಿಮುಕ್ತಿ ಹೊಂ ದಿದ ನೌಕರರ ಉಪಧನ, ಗಳಿಕೆ ರಜೆ ನಗದೀಕರಣ ವ್ಯತ್ಯಾಸದ ಮೊತ್ತ ಪಾವತಿಸಲು ರೂ.224 ಕೋಟಿ ಗಳನ್ನು ನೀಡಲು ಸರ್ಕಾರವು ದಿನಾಂಕ: 07.12 2024 ರಂದು ಸರ್ಕಾರಿ ಆದೇಶ ಹೊರಡಿಸಿದೆ. ಅಧಿವೇಶನದ ನಂತರ ಹಣ ಬಿಡುಗಡೆಯಾಗಲಿದೆ 2. ಸಿಬ್ಬಂದಿಗಳ ಅಂತರ ನಿಗಮ ವರ್ಗಾವಣೆಯ ಪಟ್ಟಿ ಬಿಡುಗಡೆ ಮಾಡಲಾಗಿದೆ. ಭವಿಷ್ಯ ನಿಧಿ ಮತ್ತು ಡೀಸೆಲ್ ಬಾಕಿ ಹಣ ಪಾವತಿ ಗಾಗಿ ಸರ್ಕಾರವೇ ಗ್ಯಾರೆಂಟಿ ನೀಡಿ ರೂ. 2000 ಕೋಟಿ ಲೋನ್ ನೀಡಿದೆ.ಮಾನ್ಯ ಸಚಿವರ ಆರೋಗ್ಯದ ಕಾರಣದಿಂದಾಗಿ ವೈಯ ಕ್ತಿಕವಾಗಿ ಸಭೆ ನಡೆಸಲು ಸಾಧ್ಯವಾಗದೆ, ಈ ಎಲ್ಲಾ ವಿಷಯಗಳನ್ನು ಕಾರ್ಮಿಕ ಸಂಘಟನೆಗಳಿಗೆ ತಿಳಿಸಲು ವ್ಯವಸ್ಥಾಪಕ ನಿರ್ದೇಶಕರು ಕೆ ಸ್ ಆರ್ ಟಿ ಸಿ ರವರಿಗೆ ಸೂಚಿಸಿದ್ದು ಅದರಂತೆ ಅವರು ಸಭೆ ನಡೆಸಿ ಮಾಹಿತಿ ನೀಡಿರುತ್ತಾರೆ ಮುಂದುವರೆದು, ಸಾರಿಗೆ ಸಂಸ್ಥೆ ಮತ್ತು ಬಸ್ಸುಗಳು ಜನರ ಜೀವನಾಡಿ. ಇತ್ತೀಚಿನ ದಿನಗಳಲ್ಲಿ 5800 ಹೊಸ ಬಸ್ಸುಗಳ ಸೇರ್ಪಡೆ, 10000 ಹೊಸ ನೇಮಕಾತಿಗಳು ಹಾಗೂ ಹತ್ತು ಹಲವು ಕಾರ್ಮಿಕ ಕಲ್ಯಾಣ ಉಪಕ್ರಮಗಳು



ಸಂಸ್ಥೆಗಳಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗುತ್ತಿದೆ. ಸಾರಿಗೆ ಸಿಬ್ಬಂದಿಗಳ ಬಗ್ಗೆ ಅಪಾರವಾದ ಕಾಳಜಿಯಿದ್ದು ಅವರ ಹಲವು ವರ್ಷಗಳ ಬೇಡಿಕೆಯಾದ ನಗದು ರಹಿತ ಆರೋಗ್ಯ ಸೇವೆಗೂ ಶೀಘ್ರದಲ್ಲಿಯೇ ಚಾಲನೆ ನೀಡಲಾಗುತ್ತಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಭವಿಷ್ಯನಿಧಿ, ಡೀಸೆಲ್ ಬಾಕಿ, ಉಪಧನ, ನಿವೃತ್ತ ನೌಕರರ ಬಾಕಿ ಎಲ್ಲಾ ಸೇರಿ ರೂ5900 ಕೋಟಿ ಸಾಲ ಬಾಕಿ ಉಳಿದಿರುವ ಕಾರಣ ಸಾರಿಗೆ ಸಂಸ್ಥೆಗಳನ್ನು ಸಹಜ ಸ್ಥಿತಿಗೆ ತರಲು ಕಾಲಾವಕಾಶದ ಅಗತ್ಯವಿದೆ ಇವೆಲ್ಲವುಗಳ ಬಗ್ಗೆ ಕಾರ್ಮಿಕ ಮುಖಂಡರುಗಳಿಗೆ, ಸಂಘಟನೆಗಳಿಗೆ ಸಂಪೂರ್ಣ ಮಾಹಿತಿಯಿದೆ. ಸಾರಿಗೆ ಸಂಸ್ಥೆಗಳು ಯಾವ ಸ್ಥಿತಿಯಲ್ಲಿವೆ, ಹಿಂದಿನಿಂದಲೂ ಎಷ್ಟು ನಷ್ಟದಲ್ಲಿವೆ, ಬಾಕಿ ಹಣ ಎಷ್ಟು ಕೊಡಬೇಕಾಗಿದೆ ಎಂಬುದು ತಿಳಿದಿದೆ.

# ಫೆಂಗಲ್ ಎಫೆಕ್ಟ್: ರಾಜ್ಯದಲ್ಲಿ ಗಗನಕ್ಕೇರಿದ ತರಕಾರಿ ಬೆಲೆ

• **ಉದಯವಾಹಿನಿ, ಬೆಂಗಳೂರು**



ಫೆಂಗಲ್ ಚಂಡಮಾರುತದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಿದ್ದು, ಕಟಾವಿಗೆ ಬಂದಿದ್ದ ತರಕಾರಿ ಬೆಳೆಗಳು ನಾಶವಾಗಿ ಬೆಲೆಗಳು ಗಗನಕ್ಕೇರಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬೀಳುತ್ತಿದೆ.

ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ದಾವಣಗೆರೆ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಮತ್ತಿತರೆಡೆ ಚಂಡಮಾರುತರ ಪ್ರಭಾವದಿಂದ ಮಳೆಯಾಗಿದ್ದು, ಕೈಗೆ ಬಂದ ಫಸಲು ನಾಶವಾದ ಹಿನ್ನೆಲೆಯಲ್ಲಿ ಉತ್ಪಾದನೆ ಕುಂಠಿತವಾಗಿ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.

ಮಾರುಕಟ್ಟೆಗೆ ಈಗಾಗಲೇ ಅವರೆಕಾಯಿ, ತೊಗರಿಕಾಯಿ ಬಂದಿದ್ದು, ಈ ಸಮಯದಲ್ಲಿ ತರಕಾರಿ ಬೆಲೆ ಸಾಮಾನ್ಯವಾಗಿ ಕಡಿಮೆಯಾಗಬೇಕಾಗಿತ್ತು.

> **ಕಳೆದ ಕೆಲ ತಿಂಗಳುಗಳಿಂದ ಸ್ಥಿರತೆ ಕಾಯ್ದುಕೊಂಡಿರುವ ಈರುಳ್ಳಿ ಕೆಜಿಗೆ 80 ರೂ., ತಲುಪಿದೆ. ಸಾಮಾನ್ಯವಾಗಿ ಇತ್ತೀಚೆಗೆ ಬೆಂಗಳೂರಿನಲ್ಲಿ 100 ರೂ.,ಗೆ 2 ಕೆಜಿ, 3 ಕೆಜಿ ಅಂತಾ ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತದಲ್ಲಿ ನೂರು ರೂ.ಗೆ ಒಂದು ಕಾಲು ಕೆಜಿ ಮಾತ್ರ ಮಾರಾಟ ಮಾಡಲಾಗುತ್ತಿದ್ದು, ಗ್ರಾಹಕರ ಕಣ್ಣಲ್ಲಿ ನೀರು ತರಿಸುತ್ತಿದೆ.**

ಆದರೆ ಮಳೆ ಪರಿಣಾಮದಿಂದ ಬೆಳೆ ನಾಶವಾಗಿ ಬೇಡಿಕೆ ಹೆಚ್ಚಾಗಿದ್ದರಿಂದ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.ಈ ಸಮಯದಲ್ಲಿ ಮದುವೆ, ದೇವರಕಾರ್ಯ ಸೇರಿದಂತೆ ಮತ್ತಿತರ ಶುಭಕಾರ್ಯಗಳು ಹೆಚ್ಚಾಗಿ ನಡೆಯುತ್ತವೆ. ಆದ್ದರಿಂದ ಬೆಲೆಯೂ ಕೂಡ ಹೆಚ್ಚಾಗಿದೆ.

ಆದರಲ್ಲೂ ನುಗ್ಗೆಕಾಯಿಯಂತೂ ಕೆಜಿಗೆ 500 ರೂ. ತಲುಪಿದೆ ತರಕಾರಿಗಳು ಅಂಗಡಿಗಳಲ್ಲಿ ಕಾಣುತ್ತಲೆ ಇಲ್ಲ.

ಹಾವು-ಏಣಿ ಆಟವಾಡುವ ಟೊಮ್ಯಾಟೋ ಅಂತೂ ಕಳೆದ ಕೆಲ ದಿನಗಳಿಂದ ಸ್ಥಿರವಾಗಿದ್ದು, 50 ರಿಂದ 60 ರೂ.ಗೆ ಮಾರಾಟವಾಗುತ್ತಿದೆ. ಬೆಳ್ಳುಳ್ಳಿ 500ರೂ., ಹಸಿಬಟಾಣಿ 200ರೂ., ಆಲೂಗೆಡ್ಡೆ 50ರೂ., ಬೀನ್ಸ 70ರೂ., ಬಿಟ್ರೂಟ್ 60ರೂ., ತೊಂಡೆಕಾಯಿ 80ರೂ., ಸೌತೆಕಾಯಿ 30ರೂ., ಕ್ಯಾರೆಟ್ 80ರೂ., ಮೂಲಂಗಿ 50ರೂ., ಹಸಿಮೆಣಸಿನಕಾಯಿ 80ರೂ., ಬೆಂಡೆಕಾಯಿ 60ರೂರೂ.,ಗೆ ಬೆಂಗಳೂರಲ್ಲಿ ಮಾರಾಟ ಮಾಡಲಾಗುತ್ತಿದೆ. ಹೆಚ್ಚಾಗಿ ಈರುಳ್ಳಿ ಬೆಳೆಯುವ ಬಳ್ಳಾರಿ, ರಾಯಚೂರು, ದಾವಣಗೆರೆ, ಚಿತ್ರದುರ್ಗ, ಹುಬ್ಬಳ್ಳಿ, ಧಾರವಾಡ ಹಾಗೂ ನೆರೆಯ ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿ ಬೆಳೆ ನಾಶವಾಗಿದ್ದು, ಉತ್ಪಾದನೆ ಕುಂಠಿತವಾಗಿ ಬೆಲೆ ಹೆಚ್ಚಳವಾಗಿದೆ.

# ರಾಜ್ಯ ಸರ್ಕಾರದಿಂದ ವಸತಿ ಯೋಜನೆ ಫಲಾನುಭವಿಗಳಿಗೆ ಗುಡ್ ನ್ಯೂಸ್: 5 ಲಕ್ಷರೂ. ವರೆಗೆ ಸಾಲಕ್ಕೆ ಗ್ರೀನ್ ಸಿಗ್ನಲ್

• **ಉದಯವಾಹಿನಿ, ಬೆಂಗಳೂರು**



ವಸತಿ ಯೋಜನೆ ಫಲಾನುಭವಿಗಳಿಗೆ ಸಿಹಿಸುದ್ದಿ ಯೊಂದು ಸಿಕ್ಕಿದ್ದು, ಮುಖ್ಯಮಂತ್ರಿಯವರ 1 ಲಕ್ಷ ಮನೆ ಯೋಜನೆ ಫಲಾನುಭವಿಗಳಿಗೆ ಬ್ಯಾಂಕ್ ಸಾಲ ನೀಡುವ ಬಗ್ಗೆ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಬ್ಯಾಂಕ್ ಮುಖ್ಯಸ್ಥರೊಂದಿಗೆ ನಡೆಸಿದ ಸಭೆ ಫಲಪ್ರದವಾಗಿದೆ.

ಈ ಕುರಿತು ಮಾಹಿತಿ ನೀಡಿರುವ ಸಚಿವ ಜಮೀರ್ ಅಹ್ಮದ್ ಖಾನ್, ಮೊದಲ ಹಂತದಲ್ಲಿ 3000 ಫ ಲಾನುಭವಿಗಳಿಗೆ ತಲಾ 5 ಲಕ್ಷ ರೂ. ನೀಡಲು ಬ್ಯಾಂಕುಗಳ ಮುಖ್ಯಸ್ಥರು ಸಮ್ಮತಿ ಸೂಚಿಸಿದ್ದಾರೆ. ಮೊದಲ ಹಂತದಲ್ಲಿ ಸಾಲಕ್ಕಾಗಿ 3 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು, 316 ಮಂದಿಗೆ ಸಾಲ ಮಂಜೂರಾಗಿದೆ.

ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್, ಎಸ್ ಬ್ಯಾಂಕ್, ಇಂಡಿಯನ್ ಓವರ್ಸೀಸ್ ಬ್ಯಾಂಕ್, ಐಐಎಫ್‌ಎಲ್ ಬ್ಯಾಂಕ್ ವ ತಿಯಿಂದ 15.80 ಕೋಟಿ ರೂಪಾ ಯಿ ಮೊತ್ತದ ಚೆಕ್ ಗಳನ್ನು ಹಸ್ತಾಂತರ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಇನ್ನು 1 ಲಕ್ಷ ಮನೆ ಯೋಜನೆ ಯಡಿ ಹಂತ ಹಂತವಾಗಿ 45,125 ಫಲಾನುಭವಿ ಗಳಿಗೆ ಸಾಲ ಮಂಜೂರಾದಲ್ಲಿ ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಮನೆಗಳ ಹಂಚಿಕೆ ಮಾಡಲಾಗುವುದು, ಮೊದಲ ಹಂತದಲ್ಲಿ 3000 ಫಲಾನುಭವಿಗಳಿಗೆ ತಲಾ 5 ಲಕ್ಷ ರೂ. ನೀಡಲು ಬ್ಯಾಂಕುಗಳ ಮುಖ್ಯಸ್ಥರು ಸಮ್ಮತಿ ಸೂಚಿಸಿದ್ದಾರೆ ಎಂದು ಹೇಳಿದ್ದಾರೆ.

# ಬಿಜೆಪಿ-ಜೆಡಿಎಸ್ ಮೈತ್ರಿ ಕುರಿತು ಸ್ಫೋಟಕ ಹೇಳಿಕೆ

• **ಉದಯವಾಹಿನಿ ಬೆಂಗಳೂರು**

ಕರ್ನಾಟಕದ ರಾಜಕೀಯದಲ್ಲಿ 2023ರ ವಿಧಾನಸಭೆ ಚುನಾವಣೆ ಬಳಿಕ ಮಹತ್ವದ ಬೆಳವಣಿಗೆ ನಡೆಯಿತು. ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ವಿರೋಧ ಪಕ್ಷಗಳಾದ ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿಕೊಂಡವು. ಲೋಕಸಭೆ ಚುನಾವಣೆ, ವಿಧಾನ ಪರಿಷತ್ ಉಪ ಚುನಾವಣೆ, ವಿಧಾನಸಭೆ ಉಪ ಚುನಾವಣೆಯನ್ನು ಸೀಟು ಹಂಚಿಕೆ ಮಾಡಿಕೊಂಡು ಈ ಮೈತ್ರಿಕೂಟಗಳು ಎದುರಿಸುತ್ತಿವೆ. ರಾಜ್ಯದ ಆಡಳಿತ ಪಕ್ಷ ಕಾಂಗ್ರೆಸ್ ವಿರುದ್ಧ ಒಟ್ಟಾಗಿ ಬಿಜೆಪಿ-ಜೆಡಿಎಸ್ ಹೋರಾಟವನ್ನು ಮಾಡುತ್ತಿವೆ. ಈ ಮೈತ್ರಿಕೂಟ ರಚನೆಯಿಂದ ಹೆಚ್ಚು ಲಾಭವಾಗಿದ್ದು, ಆಗುತ್ತಿರು ವುದು ಯಾರಿಗೆ?. ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆ ಯಲ್ಲಿ ಮೈತ್ರಿಕೂಟದ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಸೋತಿದ್ದು ಏಕೆ? ಎಂಬ ಚರ್ಚೆಗಳು ನಡೆಯುತ್ತಿವೆ.

ಇಂತಹ ಹೊತ್ತಿನಲ್ಲಿಯೇ ಕಾಂಗ್ರೆಸ್ ನಾಯಕ, ಕಂದಾಯ ಸಚಿವ ಕೃಷ್ಣಬೈರೇಗೌಡ ಬಿಜೆಪಿ-ಜೆಡಿಎಸ್ ಮೈತ್ರಿಯ ಕುರಿತು ಸ್ಫೋಟಕ ಹೇಳಿಕೆಯೊಂದನ್ನು ನೀಡಿದ್ದಾರೆ.

ಜೆಡಿಎಸ್ ಪಕ್ಷವನ್ನು ವ್ಯವಸ್ಥಿತವಾಗಿ ಮುಗಿಸಲು ಬಿಜೆಪಿ ಸ್ಕೆಚ್ ಹಾಕಿದೆ ಎಂದು ಹೇಳುವ ಮೂಲಕ ರಾಜಕೀಯ ಚರ್ಚೆಯನ್ನು ಹುಟ್ಟು ಹಾಕಿದ್ದಾರೆ. ಸಚಿವರು ಹೇಳಿದ್ದೇನು, ಭಾನವಾರ ಬೆಂಗಳೂರಿನಲ್ಲಿ ಮಾತನಾಡಿದ ಸಚಿವ ಕೃಷ್ಣಬೈರೇಗೌಡ, ಮಂಡ್ಯದಲ್ಲಿ ಜೆಡಿಎಸ್ ಪಕ್ಷ ಸಮಾವೇಶ ನಡೆಸಲು ತಯಾರಿ ನಡೆಸಿರುವ ಕುರಿತು ಪ್ರತಿಕ್ರಿಯೆ ನೀಡಿದರು.

ಸಮಾವೇಶವನ್ನು ರಾಜಕೀಯ ಪಕವಾಗಿ ಮಾಡಲಿ ಅವರಿಗೆ ಒಳ್ಳೆಯದಾಗಲಿ ಜೆಡಿಎಸ್ ಪಕ್ಷ ಉಳಿಯಲಿ. ಜನತಾದಳ ಉಳಿಯಬೇಕು ಎಂದು ಆಸೆ ಪಡುತ್ತೇನೆ ಎಂದು ಹೇಳಿದರು.

# ಸರ್ಕಾರಿ ಸೇವೆ ಸಲ್ಲಿಸಿದ ಎಂಬಿಬಿಎಸ್ ಅಭ್ಯರ್ಥಿಗಳು ಪುನಃ ಕರ್ತವ್ಯಕ್ಕೆ

• **ಉದಯವಾಹಿನಿ, ಬೆಂಗಳೂರು**

**ರಾಜ್ಯ ಸರ್ಕಾರದಿಂದ ಮಹತ್ವದ ಆದೇಶ**

ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸುವ ಅಭ್ಯರ್ಥಿಗಳು ಪುನಃ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರ ಮಹತ್ವದ ಆದೇಶ ಹೊರಡಿಸಿದೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿಂತೆ, 2023ನೇ ಸಾಲಿನಲ್ಲಿ ಎಂಬಿಬಿಎಸ್ ವ್ಯಾಸಂಗ ಪೂರೈಸಿದ ಅಭ್ಯರ್ಥಿ ಗಳಿಗೆ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ಮೇಲಿನ ಉಲ್ಲೇಖದನ್ವಯ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಅವರುಗಳಲ್ಲಿ ಕೆಲವು ಅಭ್ಯರ್ಥಿಗಳು ಉನ್ನತ ವ್ಯಾಸಂಗದ ಪರೀಕ್ಷಾ ಪೂರ್ವ ತಯಾರಿ ಹಾಗೂ ಇತರೆ ಕಾರಣಗಳಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ಗೈರು ಹಾಜರಿಯ ನಂತರ ಪುನಃ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಅಭ್ಯರ್ಥಿಗಳು ಅನುಮತಿ ನೀಡುವಂತೆ ಕೋರಿ ಈ ಆಯುಕ್ತಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ, ಅನುಬಂಧದಲ್ಲಿ ನಮೂದಿಸಿರುವ 45 ಅಭ್ಯರ್ಥಿಗಳಿಗೆ ಅವರು ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳದಲ್ಲಿಯೇ ಪುನಃ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಮತಿಸಿದ.

> **ತಮ್ಮ ಅಧೀನ ಸಂಸ್ಥೆಗಳಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ಸ್ಥಳ ನಿಯುಕ್ತಿಗೊಂಡು ಕರ್ತವ್ಯ ಕ್ಕೆ ವರದಿ ಮಾಕೊಂಡ, ಮಾಡಿಕೊಳ್ಳದ ಅಭ್ಯರ್ಥಿ ಗಳ ವಿವರವನ್ನು ಈ ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಿದೆ.**

ಸದರಿ ಪಟ್ಟಿಯಲ್ಲಿರುವ ಅಭ್ಯ ರ್ಥಿಗಳ ವಿವರಗಳನ್ನು ಉಲ್ಲೇಖದನ್ವಯ ಪರಿಶೀಲಿಸಿ ಅವರುಗಳ ಹೆಸರು, ನೋಂದಣಿ ಸಂಖ್ಯೆ, ನಿಯುಕ್ತಿಗೊಂಡ ಸ್ಥಳಗಳನ್ನು ಖಚಿತ ಪಡಿಸಿಕೊಂಡು ಈ ಅಧಿಕೃತ ಜ್ಞಾಪನಾ ಪತ್ರದ ದಿನಾಂಕದಿಂದ 10 ದಿನಗಳೊಳಗೆ ಕರ್ತವ್ಯಕ್ಕೆ ಪುನಃ ವರದಿ ಮಾಡಿಕೊಳ್ಳಲು ಸೂಚಿಸಿದೆ.


# ಜನ ಕಲ್ಯಾಣ ಸಮಾವೇಶ ಅಲ್ಲ, ಸ್ವಾರ್ಥ ಸಮಾವೇಶ: ಜೆಡಿಎಸ್ ವ್ಯಂಗ್ಯ

## ಮೂರು ಉಪಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಲ್ಲ ಸರ್ಕಾರದ ಪರ ಒಲವು ತೋರುವುದು

• **ಉದಯವಾಹಿನಿ, ಹಾಸನ**

ನಗರದಲ್ಲಿ ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿದ್ದು ಜನ ಕಲ್ಯಾಣ ಸಮಾವೇಶ ಅಲ್ಲ, ಸ್ವಾರ್ಥ ಸಮಾವೇಶ. ದೇವೇಗೌಡರ ಕುಟುಂಬವನ್ನು ಗುರಿಯಾಗಿಸಿಕೊಂಡು ಆಯೋಜಿಸಿದ್ದ ಕಾರ್ಯಕ್ರಮ ಎಂದು ಜೆಡಿಎಸ್‌ನ ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜನ ಕಲ್ಯಾಣ ಸಮಾವೇಶದಲ್ಲಿ ಮಾತ ನಾಡಿದ ಅವರು, ಜೆಡಿಎಸ್‌ನ ನಾಯಕರನ್ನು ನಿಂಧಿಸುವ ಕೆಲಸ ಸಮಾವೇಶದ ಭಾಗವಾಗಿತ್ತು. ನಮ ಕಾರ್ಯಕರ್ತರನ್ನು ಆಮಿಷ ತೋರಿಸಿ ಸೆಳೆಯುವ ಕೆಲಸ ನಡೆಯುತ್ತಿದೆ. ಇದು ಜನಪ್ರತಿನಿಧಿ ಧರ್ಮಕ್ಕೆ ವಿರುದ್ಧವಾದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಮ್ಮ ನಾಯಕರನ್ನು ನಿಂದಿಸುವುದನ್ನು ಕಾಂಗ್ರೆಸ್ ನಾಯಕರು ನಿಲ್ಲಿಸದಿದ್ದರೆ ಜನರ ಸಹನೆ ಗೂ ಒಂದು ಮಿತಿ ಇರುತ್ತದೆ ಇನ್ನು ಮುಂದೆ ನಾವು ಹೋರಾಟಕ್ಕೆ ಮುಂದಾಗ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಜನಕಲ್ಯಾಣ ಸಮಾವೇಶ



☛ ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವಾಗಿದೆ.

ಇಂತಹ ಸಂದರ್ಭದಲ್ಲಿ ಡಿಸಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಸಮಾವೇಶದ ವೇ ದಿಕೆ ನಿರ್ಮಾಣ ಸಂದರ್ಭದಲ್ಲಿ ಸಚಿವ ರೊಂದಿಗೆ ಕಾಣಿಸಿಕೊಂಡಿರುವುದು ಕಾನೂನುಬಾಹಿರ ಎಂದು ಹೇಳಿದರು. ಇಡೀ ರಾಜ್ಯದಲ್ಲಿ ಮೂರು ಉಪಚು ನಾವಣೆ ಮುಂದಿನ ವಿಧಾನಸಭೆ ಚುನಾ ವಣೆಗೆ ದಿಕ್ಸೂಚಿಯಲ್ಲ ಸರ್ಕಾರದ ಪರ ಒಲವು ತೋರುವುದು ಎಲ್ಲಾ ಉಪಚುನಾವಣೆಗಳಲ್ಲಿಯೂ ಸಾಬೀತಾಗಿದೆ. ಈ ಮೂರು ಚುನಾವಣೆಗಳಲ್ಲಿ ಗೆದ್ದ ಮಾತ್ರಕ್ಕೆ ಕಾಂಗ್ರೆಸ್ ನವರು ಬೀಗುವುದು ಬೇಡ ಎಂದರು. ಕೇಂದ್ರ ಸಚಿವರಾದ ಎಚ್ ಡಿ ಕುಮಾರಸ್ವಾಮಿ ಅವರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಮಂಡ್ಯದಲ್ಲಿ ಬೃಹತ್ ಕಾರ್ಯಕ್ರಮ ಹಮಿಕೊಂಡಿದ್ದು. ಜನವರಿ ತಿಂಗಳಿನಲ್ಲಿ ಹಾಸನದಲ್ಲಿಯೂ ಬೃ ಹತ್ ಸಮಾವೇಶ ಆಯೋಜನೆ ಕುರಿ ತು ಚಿಂತಿಸಲಾಗಿದೆ . ಸಮಾವೇಶ ವನ್ನು ಜೆಡಿಎಸ್ ವತಿಯಿಂದಲೂ ಅಥವಾ ಎನ್‌ಡಿಎ ಮೈತ್ರಿಯೊಂದಿಗೆ ಆಯೋಜನೆ ಕುರಿತು ಎರಡು ಪಕ್ಷದ ನಾಯಕರು ಚರ್ಚಿಸಿ ಅಂತಿಮ ಗೊಳಿಸಲಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದರು. ಶಾಸಕ ಸಿ.ಎನ್ ಬಾಲಕೃಷ್ಣ ಅವರು ಮಾತನಾಡಿ, ಅಂಬೇಡ್ಕರ್ ನಿಗಮ ಎಸ್‌ಸಿಪಿ,ಟಿಎಸ್ಪಿ ಸೇರಿದಂತೆ ನಾನಾ ಯೋಜನೆಗಳ ಹಣವನ್ನು ಸಮರ್ಪಕವಾಗಿ ಸರ್ಕಾರ ಬಿಡುಗಡೆ ಮಾಡುತ್ತಿಲ್ಲ. ಕೇವಲ ಹೆಚ್.ಡಿ. ದೇವೇಗೌಡ ಕುಟುಂಬದ ವಿರುದ್ಧ ಮಾತನಾಡಲು ಸಮಾವೇಶವನ್ನು ಬಳಸಿಕೊಳ್ಳಲಾಗಿದೆ ಎಂದು ದೂರಿದರು. ದೇವೇಗೌಡರು ತಮ ರಾಜಕೀಯ ಜೀವನದಲ್ಲಿ ಯಾವುದೇ ನಾಯಕರನ್ನು ಹಿಮೆಟ್ಟಿಸುವ ಕೆಲಸ ಮಾಡಿಲ್ಲ ಜಾತ್ಯತೀತ ನಿಲುವಿನೊಂದಿಗೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಅವರ ವಿರುದ್ಧ ಮಾತನಾಡುವುದು ಕಾಂಗ್ರೆಸ್ ನಾಯ ಕರಿಗೆ ಶೋಭೆ ತರುವುದಿಲ್ಲ ಎಂದರು.

> **ಹಣವನ್ನು ಸಮರ್ಪಕವಾಗಿ ಸರ್ಕಾರ ಬಿಡುಗಡೆ ಮಾಡುತ್ತಿಲ್ಲ**

> **ಕಾಂಗ್ರೆಸ್ ಪಕ್ಷ ಹಿಂದುಳಿದವರ ಬಲಪಡಿಸುತ್ತಿರುವುದಾಗಿ ಜನ ಕಲ್ಯಾಣ ಸಮಾವೇಶದಲ್ಲಿ ಹೇಳುತ್ತಾರೆ ಆದರೆ ಯಾವುದೇ ಹಿಂದುಳಿದ ವರ್ಗದವರಿಗೆ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುತ್ತಿಲ್ಲ. 1.05 ಲಕ್ಷ ಕೋಟಿ ಸಾಲ ಮಾಡುವುದರೊಂದಿಗೆ ಜನರ ಮೇಲೆ ಸಾಲದ ಹೊರೆಯನ್ನು ಹೊರಿಸಿದ್ದಾರೆ ಎಂದು ದೂರಿದರು**
>
> **-ಕೆ.ಎಸ್. ಲಿಂಗೇಶ್**
> **ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ**

ಕುಮಾರಸ್ವಾಮಿ ಅವರು ಬಿಜೆಪಿ ಮೈತ್ರಿಯೊಂದಿಗೆ ಸಂಸದರಾಗಿ, ಉತ್ತಮ ಕೆಲಸ ಮಾಡುತ್ತಿದ್ದಾರೆ.ರಾಜ್ಯದಲ್ಲಿನ ರೋಗಗ್ರಸ್ತ ಕಾರ್ಖಾನೆಗಳಿಗೆ ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಎಚ್‌ಎಂಟಿ ಸೇರಿದಂತೆ ಆಂಧ್ರ ರಾಜ್ಯದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಉದ್ಯೋಗ ಸೃಷ್ಟಿಗೆ ನಾನಾ ಯೋಜನೆಗಳನ್ನು ರೂಪಿಸುತ್ತಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಶಾಸಕ ಸ್ವರೂಪ್ ಪ್ರಕಾಶ್, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಎಸ್. ದ್ಯಾವೇಗೌಡ, ಪಕ್ಷದ ವಕ್ತಾರ ಹೊಂಗೆರೆ ರಘು ಇದ್ದರು.

# ಎಕ್ಸ್‌ಪ್ರೆಸ್ ಕೆನಾಲ್ ವಿರುದ್ಧ ಪಾದಯಾತ್ರೆ ಶುರು

## ನಮ್ಮ ನೀರು– ನಮ್ಮ ಹಕ್ಕು ಹೆಸರಿನಲ್ಲಿ ಹೋರಾಟ ಆರಂಭಿಸಿದ್ದು, ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಒತ್ತಾಯ

• ಉದಯವಾಹಿನಿ, ಗುಬ್ಬಿ

ಕುಣಿಗಲ್ ಭಾಗಕ್ಕೆ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಮೂಲಕ ಹೇಮಾವತಿ ನೀರು ಹರಿಸುವ ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಬಿಜೆಪಿ, ಜೆಡಿಎಸ್ ನೇತೃತ್ವದಲ್ಲಿ ಪಾದಯಾತ್ರೆ ಆರಂಭಿಸಲಾಯಿತು. ತಾಲ್ಲೂಕಿನ ಸಾಗರನಹಳ್ಳಿ ಬಳಿಯ ಹೇಮಾವತಿ ನಾಲೆಯ ಗೇಟ್ ಬಳಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಈ ಪಾದ ಯಾತ್ರೆ ಜಿಲ್ಲಾಧಿಕಾರಿ ಕಚೇರಿ ವರೆಗೆ ಸಾಗಲಿದೆ. ನಮ್ಮ ನೀರು– ನಮ್ಮ ಹಕ್ಕು ಹೆಸರಿನಲ್ಲಿ ಹೋರಾಟ ಆರಂಭಿಸಿದ್ದು, ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ಹೋರಾಟಗಾರರು ಒತ್ತಾಯಿಸಿದರು. ಹೆದ್ದಾರಿಯಲ್ಲಿ ಸಾಗಿಬಂದ ಪಾದಯಾತ್ರೆ, ನಿಟ್ಟೂರು ಮೂಲಕ ಗುಬ್ಬಿ ಪಟ್ಟಣ ತಲುಪಿತು. ಪಟ್ಟಣದಲ್ಲಿ ಪ್ರತಿಭಟನಾ ಸಭೆ ನಡೆಯಿತು. ಕೊಳವೆ ಮಾರ್ಗದ ಮೂಲಕ ಕುಣಿಗಲ್‌ಗೆ ಹೇಮಾವತಿ ನೀರು ಹರಿಸಿ, ಅಲ್ಲಿಂದ ರಾಮನಗರ ಭಾಗಕ್ಕೆ ನೀರು ತೆಗೆದುಕೊಂಡು ಹೋಗುವ ಹುನ್ನಾರ ನಡೆದಿದೆ. ಕುಣಿಗಲ್‌ಗೆ ಈಗಿರುವ ನಾಲೆಯ ಮೂಲಕ ನೀರು ತಗೆದುಕೊಂಡು ಹೋಗಲು


ಉದಯವಾಹಿನಿ ಚಿತ್ರ

ಕೊಳವೆ ಮೂಲಕ ನೀರು ಹರಿಸಲು ಬಿಡುವುದಿಲ್ಲ

ಅಭ್ಯಂತರವಿಲ್ಲ, ಆದರೆ ಕೊಳವೆ ಮೂಲಕ ನೀರು ಹರಿಸಲು ಬಿಡುವುದಿಲ್ಲ ಎಂದು ಹೋರಾಟಗಾರರು ಎಚ್ಚರಿಸಿದರು. ಈ ಯೋಜನೆ ಪೂರ್ಣಗೊಂಡರೆ ಜಿಲ್ಲೆಯ ರೈತರ ಬದುಕಿಗೆ ಮರಣ ಶಾಸನವಾಗಲಿದೆ. ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ.

ಕಾಂಗ್ರೆಸ್ ಸರ್ಕಾರ ಹಟಮಾರಿ ಧೋರಣೆ ಕೈ ಬಿಡಬೇಕು ಎಂದು ಆಗ್ರಹಿಸಿದರು. ಡಿ.ಕೆ.ಶಿವ ಕುಮಾರ್ ಅವರ ಪ್ರತಿಷ್ಠೆ ಮುಖ್ಯವೋ, ಇಲ್ಲವೆ ಜಿಲ್ಲೆಯ ಜನರ ಹಿತ ಮುಖ್ಯವೋ ಎಂಬುದು ನಿರ್ಧಾರವಾಗಬೇಕಿದೆ. ನೀರಿನ ರಾಜಕಾರಣ ಮಾಡಿ ರೈತರ ಹಿತ ಬಲಿಕೊಡಲು ಬಿಡುವುದಿಲ್ಲ. 'ಯಾರ ತಾಕತ್ತು ದೊಡ್ಡದು' ಎಂಬುದನ್ನು ನೋಡುತ್ತೇವೆ ಎಂದು ಹೋರಾಟಗಾರರು ಗುಡುಗಿದರು. ಕಳೆದ 25 ವರ್ಷಗಳಿಂದ ಗುಬ್ಬಿ ಕ್ಷೇತ್ರದ ಶಾಸಕ

> ಜೈಲಿಗೆ ಹೋಗಲು ಸಿದ್ಧ ರಾಜ್ಯ ಸರ್ಕಾರ ಅಧಿಕಾರ ದುರ್ಬಳಕೆ ಮಾಡಿಕೊಂಡು ಕೊಳವೆ ಮಾರ್ಗ ನಿರ್ಮಿಸಲು ಮುಂದಾಗಿದೆ. ಜಿಲ್ಲೆಯ ಜನರ ಹಿತ ಕಾಪಾಡಲು ಜೈಲಿಗೆ ಹೋಗಲು ಸಿದ್ಧರಿದ್ದೇವೆ. ಮುಂದಿನ ಆಗು ಹೋಗುಗಳಿಗೆ ಸರ್ಕಾರವೇ ಹೊಣೆಯಾಗಬೇಕಿದೆ. ತಾಕತ್ತಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಯೋಜನೆ ಜಾರಿ ಮಾಡಲಿ
>
> –ಎಂ.ಟಿ.ಕೃಷ್ಣಪ್ಪ, ಶಾಸಕ

ರಾಗಿ ಆಯ್ಕೆಯಾಗುತ್ತಾ ಬಂದಿರುವ ಎಸ್.ಆರ್. ಶ್ರೀನಿವಾಸ್ ತಾಲ್ಲೂಕಿಗೆ ಅನ್ಯಾಯವಾಗುತ್ತಿದ್ದರೂ ಬಾಯಿ ಬಿಡುತ್ತಿಲ್ಲ. ತಾಲ್ಲೂಕಿನ ಜನತೆಗೆ ದ್ರೋಹ ಬಗೆಯುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಎಸ್. ಡಿ.ದಿಲೀಪ್ ಕುಮಾರ್ ಆರೋಪಿಸಿದರು. ಹೋರಾಟಕ್ಕೆ ಇಳಿದು, ನಮ್ಮ ಜತೆಗೆ ಕೈ ಜೋಡಿಸಿದರೆ, ಮುಂದಿನ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸುತ್ತೇವೆ ಎಂದು ಆಹ್ವಾನ ನೀಡಿದರು. ಪಾದಯಾತ್ರೆ ಕಳ್ಳಿಪಾಳ್ಯ ಗೇಟ್ ಬಳಿಯ ಓಂ ಪ್ಯಾಲೇಸ್ ಭವನದಲ್ಲಿ ಶನಿವಾರ ರಾತ್ರಿ ತಂಗಿದೆ. ಭಾನುವಾರ ಮತ್ತೆ ಆರಂಭವಾಗಲಿದ್ದು, ಸಂಜೆ ವೇಳೆಗೆ ಜಿಲ್ಲಾಧಿಕಾರಿ ಕಚೇರಿ ತಲುಪಲಿದೆ. ಸೋಮವಾರದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ಮುಂದುವರಿಯಲಿದೆ.

ಕಾಂಗ್ರೆಸ್ ಸರ್ಕಾರ ಎಂದಿಗೂ ರೈತರ ಪರವಾಗಿ ಕೆಲಸ ಮಾಡುವುದಿಲ್ಲ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅನುದಾನ ನೀಡಿ ವಿಪಕ್ಷಗಳ ಶಾಸಕರ ಕ್ಷೇತ್ರಗಳಿಗೆ ಹಣ ನೀಡದೆ ಸಿದ್ದರಾಮಯ್ಯ ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು. ಸದನದಲ್ಲಿ ಹೋರಾಟ ಕೊಳವೆ ನಿರ್ಮಾಣ ಕೆಲಸ ನಿಲ್ಲಿಸುವವರೆಗೂ ಸದನದ ಒಳಗೆ ಹೊರಗೆ ಹೋರಾಟ ನಿಲ್ಲಿಸುವುದಿಲ್ಲ ಬೆಳಗಾವಿ ಅಧಿವೇಶನದ ಮೊದಲ ದಿನವೇ ಎನ್‌ಡಿಎ ಶಾಸಕರು ಈ ವಿಚಾರ ಪ್ರಸ್ತಾಪಿಸಿ ಸರ್ಕಾರದ ಮೇಲೆ ಒತ್ತಡ ತರಲಿದ್ದೇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು ಹೇಳಿದರು. ಪೈಪ್ ಲೈನ್ ಮೂಲಕ ರಾಮನಗರಕ್ಕೆ ನೀರು ತೆಗೆದುಕೊಂಡು ಹೋಗುವ ಹುನ್ನಾರ ನಡೆದಿದೆ. ಅದಕ್ಕೆ ಜಿಲ್ಲೆಯ ಜನರು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು.

### ಜಿಲ್ಲೆಯ ರೈತರ ಹಿತ ಕಾಯಬೇಕು ಎಂದು ಆಗ್ರಹ


ಯಾವುದೇ ಕಾರಣಕ್ಕೂ ಪೈಪ್‌ಲೈನ್ ಮೂಲಕ ನೀರು ತೆಗೆದುಕೊಂಡು ಹೋಗಲು ಬಿಡುವುದಿಲ್ಲ. ಒಂದು ವೇಳೆ ಯೋಜನೆ ಜಾರಿಯಾದರೆ ಜಿಲ್ಲೆಯಲ್ಲಿ ರಕ್ತಪಾತವಾಗುತ್ತದೆ. ನಮ್ಮ ಹೆಣಗಳ ಮೇಲೆ ನೀರು ಹರಿಸಬೇಕಾಗುತ್ತದೆ ಎಂದು ಗ್ರಾಮಾಂತರ ಶಾಸಕ ಬಿ.ಸುರೇಶ್ ಗೌಡ ಎಚ್ಚರಿಸಿದರು. ಶಾಸಕ ಸ್ಥಾನ ಹೋದರು ಹೋರಾಟ ನಿಲ್ಲುವುದಿಲ್ಲ. ಯಾವ ತ್ಯಾಗಕ್ಕಾದರೂ ಸಿದ್ಧ. ನೀರಿಗಾಗಿ ಪ್ರಾಣ ಕೊಡಲು ಸಿದ್ಧರಿದ್ದೇವೆ. ಪ್ರತಿಷ್ಠೆಯಿಂದ ಸಿಎಂ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜಿಲ್ಲೆಯ ಜನತೆಗೆ ಅನ್ಯಾಯ ಮಾಡಲು ಮುಂದಾಗಿದ್ದಾರೆ. ಜಿಲ್ಲೆಯ ರೈತರ ಹಿತ ಕಾಯಬೇಕು ಎಂದು ಆಗ್ರಹಿಸಿದರು.

# ಜ್ವರ, ಕೆಮ್ಮು, ನೆಗಡಿಗೆ ಚಿಕನ್ ಬಿರಿಯಾನಿ, ಮಟನ್ ತಿನ್ನುತ್ತಿದ್ದೆ: ಸಿಎಂ

• ಉದಯವಾಹಿನಿ, ಯಳಂದೂರು

ಶಾಲೆಯಲ್ಲಿ ಓದುವಾಗ ಜ್ವರ, ಕೆಮ್ಮು, ನೆಗಡಿ ಬಂದರೆ ವೈದ್ಯರ ಬಳಿ ಹೋಗುತ್ತಿರಲಿಲ್ಲ; ಬದಲಾಗಿ ಚಿಕನ್ ಬಿರಿಯಾನಿ, ಮಟನ್ ಫ್ರೈ ತಿನ್ನುತ್ತಿದೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿದರು. ಯಳಂದೂರು ತಾಲ್ಲೂಕಿನಲ್ಲಿ 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿ 'ಈಗ ನನಗೆ ವಯಸ್ಸಾಗಿರುವುದರಿಂದ ಜ್ವರ, ನೆಗಡಿ, ಕೆಮ್ಮಿಗೆ ಚಿಕನ್, ಮಟನ್ ತಿಂದರೆ ವಾಸಿಯಾಗುವ ಬದಲು ಉಲ್ಬಣವಾಗುತ್ತದೆ' ಎಂದು ನಗೆ ಚಟಾಕಿ ಹಾರಿಸಿದರು. ಹಿಂದೆ ಹಳ್ಳಿಗಳಲ್ಲಿ ಸಕ್ಕರೆ ಕಾಯಿಲೆ, ರಕ್ತದೊತ್ತಡ ರೋಗಗಳು ಇರಲಿಲ್ಲ. ಈಗ ಹಳ್ಳಿಗಳಿಗೂ ಬಿಪಿ ಶುಗರ್ ವ್ಯಾಪಿಸಿದ್ದು ಪೌಷ್ಟಿಕ ಹಾಗೂ ಸಾವಯವ ಆಹಾರ ಪದ್ಧತಿಯಿಂದ ಹಳ್ಳಿ ಜನರು ವಿಮುಖರಾಗುತ್ತಿದ್ದು ರೋಗ ನಿರೋಧಕ ಶಕ್ತಿ ಕುಂದಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಗ್ರಾಮಗಳಲ್ಲಿ ಶ್ರಮ ಸಂಸ್ಕೃತಿ ಮರೆಯಾಗಿದೆ. ಎತ್ತುಗಳನ್ನು ಬಳಸಿ ಹೊಲ ಹೂಳುತ್ತಿದ್ದ ರೈತನ ಕೈಗೆ ಪವರ್ ಟಿಲ್ಲರ್, ಟ್ರ್ಯಾಕ್ಟರ್,

> ಮದ್ಯ ಬಿಟ್ಟರೆ ಮಾರಾಟವೂ ಬಂದ್ ಮದ್ಯ ಸೇವಿಸಬೇಡಿ, ದುಶ್ಚಟಗಳಿಂದ ದೂರವಿರಿ ಎಂದು ಹೇಳುವ ಸರ್ಕಾರವೇ ಮದ್ಯ ಮಾರಾಟ ಮಾಡುವುದು ಸರಿಯೇ ಎಂದು ಕೆಲವರು ಪ್ರಶ್ನೆ ಮಾಡುತ್ತಾರೆ. ಮದ್ಯಸೇವನೆ ಮಾಡುವವರ ಸಂಖ್ಯೆ ಹೆಚ್ಚಾಗಿರುವುದರಿಂದ ಅನಿವಾರ್ಯವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಜನರು ಮದ್ಯ ಸೇವಿಸುವುದನ್ನು ಬಿಟ್ಟರೆ ಸರ್ಕಾರವೂ ಮಾರಾಟ ನಿಲ್ಲಿಸಲಿದೆ
>
> –ಸಿದ್ದರಾಮಯ್ಯ, ಸಿಎಂ



ಕಳೆ ತೆಗೆಯುವ ಯಂತ್ರಗಳು ಬಂದಿವೆ. ವಿಜ್ಞಾನ ಬೆಳೆದಂತೆಯಲ್ಲ ಜೊತೆಯಲ್ಲಿಯೇ ಕಾಯಿಲೆಗಳೂ ಬೆಳೆಯುತ್ತಿವೆ ಎಂದು ಸಿದ್ದರಾಮಯ್ಯ ವಿಶ್ಲೇಷಿಸಿದರು. ರಾಜ್ಯದಲ್ಲಿ ಮದ್ಯಸೇವಿಸುವವರ ಸಂಖ್ಯೆ ದಿನೇದಿನೇ ಹೆಚ್ಚಾಗುತ್ತಿರುವುದರಿಂದ ಅಬಕಾರಿ ಆದಾಯ ಗುರಿಮೀರಿ ಸಂಗ್ರಹವಾಗುತ್ತಿದೆ. ಸಾರ್ವಜನಿಕರು ದಯವಿಟ್ಟು ಮದ್ಯ ಸೇವಿಸಬೇಡಿ, ಆರೋಗ್ಯಯುತ ಜೀವನಶೈಲಿ ರೂಢಿಸಿಕೊಳ್ಳಿ ಎಂದು ಮುಖ್ಯಮಂತ್ರಿ ಮನವಿ ಮಾಡಿದರು. ಹಸಿವು, ಬಡತನ ಅನ್ನಭಾಗ್ಯ ಯೋಜ ನೆಗೆ ಕಾರಣ ಹಿಂದೆ ಹಳ್ಳಿಗಳಲ್ಲಿ ಮಕ್ಕಳಿಗೆ ಜ್ವರ, ಬೇಧಿಯಾದರೆ ಅನ್ನ ಮಾಡುವ ಮನೆಗಳ ಮುಂದೆ ಒಂದು ಮೀಸಲು ಅನ್ನಕ್ಕಾಗಿ ಕಾಯಬೇಕಾದ ಪರಿಸ್ಥಿತಿ ಇತ್ತು ಅನ್ನಕ್ಕಾಗಿ ಯಾರೂ ಕೈಒಡ್ಡಬಾರದು ಎಂಬ ಉದ್ದೇಶದಿಂದ ಮುಖ್ಯಮಂತ್ರಿಯಾದ ಕೂಡಲೇ ಅನ್ನಭಾಗ್ಯ ಯೋಜನೆ ಜಾರಿಗೆ ತಂದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಯಳಂದೂರು ತಾಲ್ಲೂಕಿನಲ್ಲಿ 100 ಹಾಸಿಗೆಗಳ ಸರ್ಕಾರಿ ತಾಲ್ಲೂಕು ಆಸ್ಪತ್ರೆಯ ಕಟ್ಟಡಕ್ಕೆ ಶುಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ವಿದ್ಯಾರ್ಥಿಯಾಗಿದ್ದಾಗ ಇಡ್ಲಿ, ದೋಸೆಯಂತಹ ಉಪಾಹಾರ ಸಿಗುತ್ತಿರಲಿಲ್ಲ. ರಾಗಿ, ಜೋಳದ ಮುದ್ದೆಗೆ ಮಜ್ಜಿಗೆ ಕಲಸಿ ತಿನ್ನುತ್ತಿದ್ದ, ಹಬ್ಬ ಹರಿದಿನಗಳಲ್ಲಿ ಮಾತ್ರ ಅನ್ನ ಉಣ್ಣುತ್ತಿದ್ದ ದಿನಗಳನ್ನು ಮರೆತಿಲ್ಲ. ಬಾಲ್ಯದಲ್ಲಿ ಹಸಿವು ಹಾಗೂ ಬಡತನವನ್ನು ತೀರಾ ಹತ್ತಿರದಿಂದ ನೋಡಿದ್ದರಿಂದ ಮುಖ್ಯಮಂತ್ರಿಯಾದ ಕೂಡಲೇ ಅನ್ನಭಾಗ್ಯ ಯೋಜನೆ ಜಾರಿಗೆ ತಂದೆ.

ಕರ್ನಾಟಕ ಹಸಿವು ಮುಕ್ತ ರಾಜ್ಯವಾಗಬೇಕು, ಯಾರೂ ಹಸಿವಿನಿಂದ ಮಲಗಬಾರದು ಎಂಬುದು ಯೋಜನೆಯ ಉದ್ದೇಶ ಎಂದರು.

# ರೈತರ ಜಾಗ ಕಬಳಿಸಲು ಬಿಡುವುದಿಲ್ಲ: ನಾರಾಯಣಸ್ವಾಮಿ

• ಉದಯವಾಹಿನಿ, ಚಿಂತಾಮಣಿ

ರಾಜ್ಯ ಸರ್ಕಾರ ವಕ್ಫ್ ವಿಚಾರದಲ್ಲಿ ಗೊಂದಲದ ವಾತಾವರಣ ಸೃಷ್ಟಿಸಿದೆ. ಇದ್ದಕ್ಕಿದ್ದಂತೆ ರೈತರ ಜಮೀನುಗಳ ಪಹಣಿಗಳಲ್ಲಿ ವಕ್ಸ್ ಉದ್ಭವಿಸಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು. ವಕ್ಫ್ ವಿಚಾರದ ಬಗ್ಗೆ ಸತ್ಯಶೋಧನೆ ನಡೆಸಲು ಬಿಜೆಪಿ ರಚಿಸಿರುವ ಮೂರನೇ ತಂಡ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದ ವಿವಾದಿತ ಜಮೀನಿಗೆ ಭೇಟಿ ನೀಡಿತು.

ರೈತರು ಬೆಳೆಗಳನ್ನು ಬೆಳೆಯುತ್ತಿದ್ದ ಜಮೀನುಗಳ ಪಹಣಿಯಲ್ಲಿ ಈಗ ವಕ್ಫ್ ನಮೂದಾಗಿರುವುದು ಸಂಶಯಕ್ಕೆ ಕಾರಣವಾಗಿದೆ. ಸದನ ಪ್ರಾರಂಭವಾಗುತ್ತಿದೆ. ಸದನದಲ್ಲಿ ವಾದ ಮಂಡನೆ ಮಾಡಬೇಕಾಗಿರುವ ಕಾರಣ ಬಿಜೆಪಿ ತಂಡ ಪ್ರವಾಸ ಮಾಡುತ್ತಿವೆ. ರೈತರ ಜಮೀನು ರೈತರಿಗೆ ವಾಪಸ್ ಕೊಡಿಸುವುದು ಪಕ್ಷದ ಉದ್ದೇಶವಾಗಿದೆ ಎಂದರು. ರೈತರ ಪಹಣಿಗಳ 11ನೇ ಕಲಂನಲ್ಲಿ ನಮೂದಾಗಿರುವ ವಕ್ಫ್ ಹೆಸರನ್ನು ವಾಪಸ್ ತೆಗೆದುಕೊಳ್ಳುವುದಾಗಿ ಸರ್ಕಾರ ಆದೇಶ ಮಾಡಿದೆ. ಅಂದರೆ ರೈತರ ಜಮೀನು ಅವರಿಗೆ ವಾಪಸ್ ನೀಡಬೇಕಲ್ಲವೆ ಸರ್ಕಾರ ನಾಟಕವಾಡುತ್ತಿದೆ. ವಕ್ಫ್ ಆಸ್ತಿಗಳು ಇದ್ದರೆ ಇರಲಿ. ನಾವು ಅದರ ತಂಟೆಗೆ ಹೋಗುವುದಿಲ್ಲ, ಕಿತ್ತುಕೊಳ್ಳುವುದಿಲ್ಲ.


ಉದಯವಾಹಿನಿ ಚಿತ್ರ

ಆದರೆ ರೈತರ ಬೆಳೆಗಳಿರುವ ಜಮೀನುಗಳಿಂದ ರೈತರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ' ಎಂದರು. ರೈತರ ಒಂದು ಇಂಚು ಜಾಗವನ್ನು ಕಿತ್ತುಕೊಳ್ಳು ಸರ್ಕಾರ ಅಥವಾ ವಕ್ಫ್ ಬೋರ್ಡ್‌ಗೆ ಅವಕಾಶ ನೀಡುವುದಿಲ್ಲ. ಕಾನೂನು ವ್ಯಾಪ್ತಿಯಲ್ಲೇ ಹೋರಾಟ ಮಾಡುತ್ತೇವೆ. ದೇಶದೆಲ್ಲೆಡೆ ಇಂತಹ ಸಮಸ್ಯೆಗಳ ಪರಿಹಾರಕ್ಕಾಗಿಯೇ ಕೇಂದ್ರ ಸರ್ಕಾರ ಜೆಪಿಸಿ ರಚನೆ ಮಾಡಿದೆ. ನಾವು ಜೆಪಿಸಿಗೆ ವರದಿ ನೀಡುತ್ತೇವೆ' ಎಂದರು. ತಿಮ್ಮಸಂದ್ರ ವಿವಾದಿತ ಜಮೀನಿನಲ್ಲಿ ನೂರಾರು ವರ್ಷಗಳ ಆಲದ ಮರವಿದೆ. ರಸ್ತೆಯ ಪಕ್ಕದಲ್ಲೇ ಅಶ್ವತ್ಥಕಟ್ಟೆ ಇದೆ. ಸ್ವಂತ ಜಮೀನುಗಳಲ್ಲಿ ಸ್ಮಶಾನವಿದೆ. ವಕ್ಫ್ ಹೆಸರು ಎಲ್ಲಿಂದ ಉದ್ಭವವಾಯಿತು. ಸರ್ಕಾರದ ಗಮನ ಸೆಳೆಯುತ್ತೇವೆ ಎಂದು ತಿಳಿಸಿದರು. ಮಾಜಿ ಸಂಸದ ಎಸ್ ಮುನಿಸ್ವಾಮಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯ ವೈ. ಎ.ನಾರಾಯಣಸ್ವಾಮಿ ಉಪಸ್ಥಿತರಿದ್ದರು.

# ಹಸಿರು ಸೇನೆ ರೈತ ಸಂಘ ಪ್ರತಿಭಟನೆ

• ಉದಯವಾಹಿನಿ, ಗೌರಿಬಿದನೂರು

ತಾಲ್ಲೂಕಿನ ಕೃಷಿ ಇಲಾಖೆಯ ಮುಂಭಾಗದಲ್ಲಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರೈತರು ಪ್ರತಿ ಭಟನೆ ನಡೆಸಿದರು. ಹಸಿರು ಸೇನೆಯ ಜಿಲ್ಲಾಧ್ಯಕ್ಷ ಲಕ್ಷ್ಮಿ ನಾರಾಯಣ ಮಾತನಾಡಿ, ತಾಲ್ಲೂಕಿನಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ಕೃಷಿಕ ಸಮಾಜದ ಮತದಾರರಿದ್ದು 2009ರಲ್ಲಿ ಪಟ್ಟಿ ಮಾಡಿದ ಮತದಾರರ ಪಟ್ಟಿ ಅನ್ವಯ ಚುನಾವಣೆ ನಡೆಸುತ್ತಿರುವುದು ರೈತರಿಗೆ ಮಾಡಿದ ಮೋಸ. ತಾಲ್ಲೂಕಿನಲ್ಲಿ ಈಗಾಗಲೇ ಸಣ್ಣ ಪುಟ್ಟ ರೈತರು ಕೃಷಿಯಿಂದ ದೂರ ಸರಿಯುತ್ತಿದ್ದಾರೆ. ಸರ್ಕಾರಗಳ ಇಂತಹ ನೀತಿಗಳಿಂದ ದೇಶದ ಬೆನ್ನಲುಬಾದ ರೈತರು ಮೂಲೆ ಗುಂಪಾಗುತ್ತಿದ್ದಾರೆ. ರಾಜಕಾರಣಿಗಳ ಕೈ ಗೊಂಬೆಯಂತೆ ವರ್ತಿಸುವ ಅಧಿಕಾರಿಗಳು ನಮಗೆ ಬೇಕಾಗಿಲ್ಲ ಎಂದರು.

ತಾಲ್ಲೂಕು ಅಧ್ಯಕ್ಷ ಲೋಕೇಶ್ ಗೌಡ ಮಾತನಾಡಿ, 'ತಾಲ್ಲೂಕಿನಲ್ಲಿ 40 ಸಾವಿರಕ್ಕೂ ಹೆಚ್ಚು ಅರ್ಹ ರೈತರು ಸದಸ್ಯತ್ವ ಪಡೆಯಲು ಸಿದ್ಧರಿದ್ದಾರೆ. ಆದರೆ 2009ರ


ಉದಯವಾಹಿನಿ ಚಿತ್ರ

ಮತದಾರರ ಪಟ್ಟಿ ಅನ್ವಯ ಕೇವಲ 468 ಮಂದಿ ಮತದಾರರೊಂದಿಗೆ ಚುನಾವಣೆ ನಡೆಸುತ್ತಿರುವುದು ರೈತರಿಗೆ ಮಾಡಿದ ಅನ್ಯಾಯವಾಗಿದೆ. ಅಂದು ಕೇವಲ 100 ಕಟ್ಟಿ ಮತದಾನದ ಹಕ್ಕನ್ನು ಪಡೆದಿದ್ದರು. ಇಂದು 1000 ನೀಡಲು ರೈತರು ಸಿದ್ಧರಿದ್ದಾರೆ.

ಆದರೆ ಅಧಿಕಾರಿಗಳು ಅವರಿಗೆ ಅವಕಾಶ ನೀಡದೆ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸನತ್ ಕುಮಾರ್, ರಾಜಣ್ಣ ಮುದ್ದರಂಗಪ್ಪ ನರಸಾರೆಡ್ಡಿ. ಸುರೇಶ ಕುಮಾರ್ ಬಾಬು, ಗೋಪಿ, ಮುನಿವೆಂಕಟಪ್ಪ, ನಂಜರೆಡ್ಡಿ, ಅಶ್ವಥ್ ಗೌಡ, ಅದಿನಾರಾಯಣಪ್ಪ, ಶಶಿಕುಮಾರ್ ಪಾಲ್ಗೊಂಡಿದ್ದರು.

# ಅಭಿವೃದ್ಧಿ ಯೋಜನೆಗೆ ಹಣವಿಲ್ಲ ಎಂಬುದು ವಿರೋಧ ಪಕ್ಷಗಳ ಅಪಪ್ರಚಾರ

• ಉದಯವಾಹಿನಿ, ಚಿಂತಾಮಣಿ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳಿಂದಾಗಿ ಅಭಿವೃದ್ಧಿ ಯೋಜನೆಗಳಿಗೆ ಹಣ ನೀಡುತ್ತಿಲ್ಲ ಎಂಬುದು ವಿರೋಧಪಕ್ಷಗಳ ಸುಳ್ಳು ಆರೋಪ. ಮಾಮೂಲಿನಂತೆ ಎಲ್ಲಾ ಇಲಾಖೆಗಳ ಅಭಿವೃದ್ಧಿ ಯೋಜನೆಗಳಿಗೂ ಹಣ ಬಿಡುಗಡೆಯಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು. ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಾರ್ಮಿಕರಿಗೆ ಸಲಕರಣೆ ವಿತರಿಸಿ ಮಾತನಾಡಿದರು. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಗಾಗುವಷ್ಟು ಸಂಪನ್ಮೂಲವನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿದೆ.

ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಯೋಜನೆಗಳಿಗೆ ತೊಡಕಾಗಿದೆ ಅಥವಾ ಸ್ಥಗಿತಗೊಂಡಿವೆ ಎಂಬುದು ವಿರೋಧಪಕ್ಷಗಳ ಅಪಪ್ರಚಾರ. ಅವರಿಗೆ ಗ್ಯಾರಂಟಿ ಯೋಜನೆಗಳಿಂದ ಜನರು ಕಾಂಗ್ರೆಸ್


ಉದಯವಾಹಿನಿ ಚಿತ್ರ

ಕಡೆಗೆ ವಾಲಿದ್ದಾರೆ ಎನ್ನುವುದು ಅರಿವಾಗಿದೆ. ಹೀಗಾಗಿ ಅದನ್ನು ಸಹಿಸಿಕೊಳ್ಳಲಾರದೆ ಆರೋಪ ಮಾಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾರ್ಮಿಕರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಸರ್ಕಾರ ರೂಪಿಸಿ ಅನುಷ್ಠಾನಗೊಳಿಸಿದೆ.

ಕಾರ್ಮಿಕರ ಮನೆ ಬಾಗಿಲಿಗೆ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದೆ. ಅವರವರ ವೃತ್ತಿಗೆ ಸಹಾಯಕವಾಗುವ ಸಲಕರಣೆಗಳ ವಿತರಣೆಯು ಸಹ ಒಂದು ಭಾಗವಾಗಿದೆ. ಸೌಲಭ್ಯಗಳನ್ನು ಪಡೆದುಕೊಂಡವರು ದುರುಪಯೋಗ ಪಡಿಸಿಕೊ ಳ್ಳಬಾರದು. ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಸಲಹೆ ನೀಡಿದರು.


> ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ 13 ಬಜೆಟ್‌ಗಳನ್ನು ಮಂಡನೆ ಮಾಡಿ ಆರ್ಥಿಕ ತಜ್ಞರು ಆಗಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿ ಸದೃಢವಾಗಿರುವಂತೆ ಜಾಣ್ಮೆಯಿಂದ ಜನರಿಗೂ ಯಾವುದೇ ತೊಂದರೆ ಆಗದಂತೆ ಗ್ಯಾರಂಟಿ ಯೋಜನೆಗಳು ಹಾಗೂ ಅಭಿವೃದ್ಧಿ ಯೋಜನೆಗಳನ್ನು ಒಟ್ಟಾಗಿ ನಿಭಾಯಿಸುತ್ತಿದ್ದಾರೆ. ಯಾವುದೇ ಹಂತದಲ್ಲಿ ಸೋರಿಕೆ ಆಗಬಾರದು ಎಂದು ಫಲಾನುಭವಿಗಳ ಮನೆ ಬಾಗಿಲಿಗೆ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ ಎಂದರು. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಭಿನ್ನರಾಗವಿಲ್ಲ, ಸಿಎಂ, ಡಿಸಿಎಂಗಳು ಒಂದಾಗಿ ಸರ್ಕಾರ ಮತ್ತು ಪಕ್ಷವನ್ನು ಮುನ್ನಡೆಸುತ್ತಿದ್ದಾರೆ.

# ಕಾಲದ ದೂಳಿನಲ್ಲಿ ಕರಗಿದ ಜಾನಪದ

• ಉದಯವಾಹಿನಿ, ತುಮಕೂರು

ಜಾನಪದವು ಆಧುನಿಕತೆಯ ಹಾವಳಿ, ಜಾಗತೀಕರಣದ ಜೂಜಿಗೆ ಸಿಲುಕಿ ನಲುಗಿದೆ. ಕಾಲದ ದೂಳಿನಲ್ಲಿ ಕರಗಿ ಹೋಗುತ್ತಿರುವುದು ದುರಾದೃಷ್ಟಕರ ಎಂದು ಸಾಹಿತಿ, ಮಂಡ್ಯದಲ್ಲಿ ನಡೆಯಲಿರುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಗೊ.ರು.ಚನ್ನಬಸಪ್ಪ ವಿಷಾದಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದಿಂದ ಹಮ್ಮಿಕೊಂಡಿದ್ದ 'ಚಕೋರ' ಸಾಹಿತ್ಯ ವಿಚಾರ ವೇದಿಕೆ ಉದ್ಘಾಟನಾ ಸಮಾರಂಭದಲ್ಲಿ 'ಕನ್ನಡ ಜಾನಪದ ಸಂಸ್ಕೃತಿ' ಕುರಿತು ಮಾತನಾಡಿದರು. ಹಳ್ಳಿಗಳ, ಗುಡ್ಡಗಾಡಿನ ಜನರ ಬದುಕು, ಆಚಾರ–ವಿಚಾರ, ನಡೆ–ನುಡಿ, ಜಾತ್ರೆ–ಮದುವೆ, ವ್ಯವಹಾರ, ಸಮಾಧಿ ಎಲ್ಲವುಗಳ


ಉದಯವಾಹಿನಿ ಚಿತ್ರ

ಮೊತ್ತವೇ ಜಾನಪದ. ಅದರ ಸಂಪತ್ತು, ಸೊಗಡು, ಸೌಂದರ್ಯ ಅನುಭವಿಸಲು, ಬೆಡಗು– ಬಿನ್ನಾಣ ನೋಡಲು, ಸಾಹಿತ್ಯದ ಸೊಬಗು ಸವಿಯಲು ಜಾನಪದದ ಅಂಗಳಕ್ಕೆ ಹೋಗಬೇಕು. ನಗರದಲ್ಲಿ ಕುಳಿತು ನೋಡಿದರೆ ಗೊತ್ತಾಗುವುದಿಲ್ಲ ಎಂದರು. ಶ್ರಮ ಜೀವಿಗಳ, ಹೊಲಗದ್ದೆಗಳಲ್ಲಿ ದುಡಿಯುವ ಜನರ ಒಳದನಿಯ ಅಭಿವ್ಯಕ್ತಿಯೇ ಜಾನಪದ ಸಾಹಿತ್ಯ. ಬೇರು ಗಿಡಕ್ಕೆ ಅಗತ್ಯ ಸಾರ ಒದಗಿಸುವಂತೆ ಜಾನಪದವು ಜನಪದರ ಬದುಕಿಗೆ ಸತ್ಯ, ಶಕ್ತಿ, ಸಾಮರ್ಥ್ಯ ತುಂಬಿದೆ. ಸಹಜವಾಗಿ ಅರಳಿದ ಹೂವು ಇದ್ದಂತೆ ಮುಗಿಲಿನಿಂದ ಸುರಿಯುವ ಮಳೆಯಂತೆ, ತೆಂಗಿನ ತಿಳಿ ನೀರಿನಷ್ಟು ಪರಿಶುಭ್ರ, ನಿರ್ಮಲ ಎಂದು ವರ್ಣಿಸಿದರು.

ಜನಪದರಲ್ಲಿ ದೈವಭಕ್ತಿ, ಜೀವನ ಪ್ರೀತಿ, ನೆರೆಹೊರೆ ಸಂಬಂಧ, ಗುಣ ದೋಷಗಳ ವಿಮರ್ಶೆ, ತಪ್ಪು ತಿದ್ದಿಕೊಳ್ಳುವ ಮನಸು, ಸಂಸಾರ ಸಹಜ ಪ್ರೀತಿ, ಜೀವ ಕಾರುಣ್ಯ ಎಲ್ಲವೂ ಮೊತ್ತವಾಗಿ ಸುತ್ತಿಕೊಂಡಿವೆ. ಅವರ ನಿತ್ಯ ಜೀವನದಲ್ಲಿ ಮೌಲ್ಯಗಳು ಉಸಿರಾಡುತ್ತವೆ. ಅವರ ದೃಷ್ಟಿಯಲ್ಲಿ ಸಂಸ್ಕೃತಿ ಎನ್ನುವುದು ತೊಟ್ಟು ಬಿಡುವಂತದ್ದಲ್ಲ. ಹೆತ್ತ ತಾಯಿ ಇದ್ದಂತೆ ಎಂದು ಅಭಿಪ್ರಾಯಪಟ್ಟರು.

# ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮ

• ಉದಯವಾಹಿನಿ, ಗೌರಿಬಿದನೂರು

ತಾಲ್ಲೂಕಿನ ಮಿನಿ ವಿಧಾನಸೌಧದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಅಂತರ್ ಇಲಾಖಾ ಮಟ್ಟದಲ್ಲಿ ರಾಷ್ಟ್ರೀಯ ಕ್ಷಯ ರೋಗವನ್ನು ನಿರ್ಮೂಲನೆ ಮಾಡಲು 100 ದಿನಗಳ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ತಾಲ್ಲೂಕು ಆಡಳಿತ ವೈದ್ಯಾಧಿಕಾರಿ ಚಂದ್ರ ಮೋಹನ್ ರೆಡ್ಡಿ ಮಾತನಾಡಿ, ಟ್ಯೂಬರ್ ಕ್ಲೋಸ್ಸಿಸ್ ಎಂಬ ಬ್ಯಾಕ್ಟೀರಿಯಾದಿಂದ ಒಬ್ಬರಿಂದ ಒಬ್ಬರಿಗೆ ಕೆಮ್ಮಿದಾಗ, ಸೀನಿದಾಗ ಹರಡುತ್ತದೆ. ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಕಫ ಪರೀಕ್ಷೆ ಮಾಡಲಾಗುತ್ತದೆ. ಕಾಯಿಲೆ ಇರುವವರಿಗೆ ಉಚಿತವಾಗಿ 6 ತಿಂಗಳು ಚಿಕಿತ್ಸೆ


ಉದಯವಾಹಿನಿ ಚಿತ್ರ

ನೀಡಲಾಗುತ್ತದೆ. ಇದು ಸಾಮಾನ್ಯವಾಗಿ ಮಧುಮೇಹ, ರಕ್ತದ ಒತ್ತಡ ಇರುವವರಿಗೆ ಹೃದ್ರೋಗಿಗಳಿಗೆ, ಕಿಡ್ನಿ ಸಮಸ್ಯೆ ಇರುವವರಿಗೆ ಬೇಗ ಹರಡುವ ಸಾಧ್ಯತೆ ಇದೆ ಎಂದು ತಿಳಿಸಿದರು.

ತಹಶೀಲ್ದಾರ್ ಮಹೇಶ್ ಪತ್ರಿ, ಸಿಡಿಪಿಒ ರವಿ ಕುಮಾರ್, ಕ್ಷೇತ್ರ ದೈಹಿಕ ಶಿಕ್ಷಣ ಸಂಯೋಜಕ ಹನುಮಂತಪ್ಪ ಪಾಲ್ಗೊಂಡಿದ್ದರು.


# ಪೋಡಿಗೆ ಲಂಚ ಪಡೆದರೆ ಮುಲಾಜಿಲ್ಲದೆ ಕ್ರಮ: ಡಿಕೆಶಿ

## ಅಭಿಯಾನವು ರೈತರ ಜಮೀನಿನ ದಾಖಲೆಗಳನ್ನು ಬದಲಾವಣೆ ಮಾಡಲಾಗದಂತೆ ಮಾಡುವ ಪವಿತ್ರವಾದ ಕಾರ್ಯಕ್ರಮ

• ಉದಯವಾಹಿನಿ, ಕನಕಪುರ

ಪೋಡಿ ಮಾಡಿಸಿಕೊಳ್ಳಲು ಜನರು ಅಧಿಕಾರಿಗಳಿಗೆ ಒಂದೇ ಒಂದು ರೂಪಾಯಿ ಲಂಚ ಕೊಡಬಾರದು. ಒಂದು ವೇಳೆ ಅಧಿಕಾರಿಗಳು ಲಂಚ ಪಡೆದಿರುವುದು ನನ್ನ ಗಮನಕ್ಕೆ ಬಂದರೆ ಅವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು. ನಗರದ ತಾಲ್ಲೂಕು ಕಚೇರಿ ಆವರಣದಲ್ಲಿ ನಡೆದ ಸರಳೀಕರಣವಾದ ದರಖಾಸ್ತು ಪೋಡಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಭಿಯಾನವು ರೈತರ ಜಮೀನಿನ ದಾಖಲೆಗಳನ್ನು ಬದಲಾವಣೆ ಮಾಡಲಾಗದಂತೆ ಮಾಡುವ ಪವಿತ್ರವಾದ ಕಾರ್ಯಕ್ರಮವಾಗಿದೆ.

ರೈತರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಬಣ್ಣಿಸಿದರು. ಭೂ ಮಂಜೂರಾತಿ ನ್ಯಾಯಮಂಡಳಿಯಿಂದ ಸರ್ಕಾರವು ರೈತರಿಗೆ ಯಾವುದೇ ಜಮೀನು ಕೊಟ್ಟಿದ್ದರೆ, ಅದನ್ನು ದುರಸ್ತಿ ಮಾಡಿ ನೇರವಾಗಿ


ಉದಯವಾಹಿನಿ ಚಿತ್ರ

ಕೊಡಲು ಸರಳೀಕರಣ ಮಾಡಲಾಗಿದೆ. ಮೊದಲ ಹಂತದಲ್ಲಿ ರಾಮನಗರ ಜಿಲ್ಲೆಯಲ್ಲಿ ಇದಕ್ಕೆ ಚಾಲನೆ ನೀಡಲಾಗಿದ್ದು, ಮುಂದೆ ಹಾಸನ ಜಿಲ್ಲೆಯಲ್ಲೂ ಆರಂಭಿಸಲಾಗುವುದು. ನಂತರ ರಾಜ್ಯಕ್ಕೆ ವಿಶೇಷವಾದ ಯೋಜನೆ ರೂಪಿಸಲಾಗುವುದು ಎಂದರು.

ಇತ್ತೀಚೆಗೆ ಭೂಮಿ ಬೆಲೆ ಹೆಚ್ಚಾಗುತ್ತಿದೆ. ರೈತರ ಜಮೀನಿನ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಬದಲಾವಣೆ ಮಾಡಲಾಗದಂತಹ ಈ ಕಾರ್ಯಕ್ರಮದ ಅನುಷ್ಠಾನವು ನಕಲಿ ದಾಖಲೆ ಸೃಷ್ಟಿಸಿ ವಂಚಿಸುವುದನ್ನು ತಡೆಯಲಿದೆ. ಇಡೀ ರಾಜ್ಯಕ್ಕೆ ಈ ಕಾರ್ಯಕ್ರಮ ರೂಪಿಸಲು ಅನುಕೂಲವಾಗುವಂತೆ ಬಜೆಟ್‌ನಲ್ಲಿಯೇ ಮಂಡಿಲಾಗಿದ್ದು, ಕಂದಾಯ ಸಚಿವರೊಂದಿಗೆ ಚರ್ಚಿಸಿ ಇದಕ್ಕೆ ಹೊಸ ಹೆಸರಿಡಲಾಗುವುದು ಎಂದು ಹೇಳಿದರು.

> ಜಿಲ್ಲೆಯನ್ನು ಆದಷ್ಟು ಬೇಗ ಪೋಡಿ ಮುಕ್ತ ಜಿಲ್ಲೆಯನ್ನಾಗಿ ಮಾಡಲಾಗುವುದು ಮೊದಲ ಜಿಲ್ಲಾಧಿಕಾರಿ, ಭೂ ದಾಖಲೆಗಳ ಉಪ ನಿರ್ದೇಶಕರು, ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರರು ಪೋಡಿ ಮಾಡಬಹುದಾಗಿತ್ತು. ಈಗ ಸರಳೀಕರಿಸಿ ತಹಶೀಲ್ದಾರರೇ ಈ ಎಲ್ಲಾ ಕೆಲಸಗಳನ್ನು ಮಾಡಲು ಅವಕಾಶ ನೀಡಲಾಗಿದೆ' ಎಂದು ತಿಳಿಸಿದರು.

ಪೋಡಿ ಮಾಡಲು ಹಿಂದೆ ಜಿಲ್ಲಾಧಿಕಾರಿ ಮತ್ತು ಭೂ ದಾಖಲೆಗಳ ಉಪ ನಿರ್ದೇಶಕರಿಗೆ ಮಾತ್ರ ಇದ್ದ ಅಧಿಕಾರವನ್ನು ಈಗ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರಿಗೆ ನೀಡಿ ಸರಳೀಕರಿಸಲಾಗಿದೆ. ಸರಳೀಕರಣವಾದ ದರಖಾಸ್ತು ಪೋಡಿಗೆ ಹಿಂದೆ ಇದ್ದ 1ರಿಂದ 10 ಅಂಶಗಳ ಪರಿಶೀಲನಾ ಕಾರ್ಯ ತೆಗೆದು, ಅದನ್ನು 1ರಿಂದ 5ರೊಳಗೆ ಮುಕ್ತಾಯಗೊಳಿಸುವಂತೆ ಸುಗಮಗೊಳಿಸಲಾಗಿದೆ ಎಂದು ತಿಳಿಸಿದರು.

ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಮಾತನಾಡಿ, ಪೋಡಿ ಅಭಿಯಾನ ಬಹಳ ಪವಿತ್ರವಾದ ಕಾರ್ಯಕ್ರಮ, ಆರ್ಥಿಕವಾಗಿ ಹಿಂದುಳಿದ ವರ್ಗದ ಜನರನ್ನು ಗುರುತಿಸಿ ಅವರ ಸಂಕಷ್ಟಕ್ಕೆ ಸ್ಪಂದಿಸಲು ದರಖಾಸ್ತು ಜಮೀನನ್ನು ಮಂಜೂರು ಮಾಡುವಂತೆ ಸರ್ಕಾರ ಆದೇಶ ಮಾಡುತ್ತಿತ್ತು' ಎಂದು ಹೇಳಿದರು. ಕಾರ್ಯಕ್ರಮದಲ್ಲಿ ರೈತರಿಗೆ ಸರಳೀಕರಣವಾದ ಪಹಣಿ ವಿತರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎಸ್. ರವಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಡಿ. ವಿಜಯದೇವ್, ನಗರಸಭೆ ಅಧ್ಯಕ್ಷೆ ಲಕ್ಷ್ಮೀ ದೇವಮ್ಮ, ಕನಕಪುರ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದಿಲೀಪ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯಿತಿ ಸಿಇಒ ದಿಗ್ವಿಜಯ್ ಬೋಡ್ಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಭೂ ದಾಖಲೆಗಳ ಉಪ ನಿರ್ದೇಶಕ ಹನುಮೇಗೌಡ, ಮುಖಂಡ ಎಚ್.ಕೆ. ಶ್ರೀಕಂಠ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಮುಖಂಡರು ಇದ್ದರು.

### ಪೋಡಿ ಅಭಿಯಾನಕ್ಕೆ ಚಾಲನೆ

ಜಮೀನು ಮಂಜೂರಾಗಿ ಹಲವು ವರ್ಷಗಳಾದರೂ ಫಲಾನುಭವಿಗಳ ಹೆಸರಿಗೆ ಪೋಡಿಯಾಗದೇ ಇರುವುದು, ಖಾತೆಯಾಗದಿರುವ ಸಮಸ್ಯೆಗಳು ಎದುರಾಗುತ್ತಿತ್ತು. ಅದಕ್ಕೆ ಪರಿಹಾರವಾಗಿ ರಾಜ್ಯ ಸರ್ಕಾರ ಎಲ್ಲಾ ರೀತಿಯಲ್ಲಿ ಆಲೋಚನೆ ಮಾಡಿ ಜಮೀನನ್ನು ಗುರುತಿಸಿ, ನಕ್ಷೆ ಮಾಡಿ ಸರಳೀಕರಣವಾದ ದರಖಾಸ್ತು ಪೋಡಿ ಅಭಿಯಾನಕ್ಕೆ ಚಾಲನೆ ನೀಡಿದೆ'ಎಂದರು.

## ಮಿನಿ ನ್ಯೂಸ್

### ಬೈಕ್ ಓಡಿಸುವಾಗಲೇ ಹೃದಯಾಘಾತದಿಂದ ಸವಾರ ಸ್ಥಳದಲ್ಲೇ ಸಾವು

• ಉದಯವಾಹಿನಿ, ಮೈಸೂರು

ಮೈಸೂರಿನಲ್ಲಿ ಘೋರ ಘಟನೆಯೊಂದು ನಡೆದಿದ್ದು, ಬೈಕ್ ಓಡಿಸುವಾಗ ಹೃದಯಾಘಾತವಾಗಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಡೆದಿದೆ. ಹೃದಯಾಘಾತವಾಗಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿ ನಡೆದಿದೆ.

ಮೃತ ಬೈಕ್ ಸವಾರನನ್ನು ಚಾಮರಾಜನಗರ ತಾಲ್ಲೂಕಿನ ನಂಜೆದೇವರಪುರದ ರವಿ ಎಂದು ಗುರುತಿಸಲಾಗಿದೆ. ಬೈಕ್ ಓಡಿಸಿಕೊಂಡು ಬರುತ್ತಿದ್ದ ವೇಳೆ ಏಕಏಕಿ ಹೃದಯಾಘಾತವಾಗಿದ್ದು, ಬೈಕ್ ಸವಾರ ಕೆಳಗೆ ಬೀಳುತ್ತಿರುವ ದೃಶ್ಯ ಸಿಸಿಟಿಯಿಯಲ್ಲಿ ಸೆರೆಯಾಗಿದೆ. ಬೈಕ್ ಸವಾರನಿಗೆ ಹಾರ್ಟ್ ಅಟ್ಯಾಕ್ ಆಗುತ್ತಿದ್ದಂತೆ ನಿಯಂತ್ರಣ ತಪ್ಪಿದ ಬೈಕ್, ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ ಬೈಕ್ ಸವಾರ ರವಿ ಮೃತಪಟ್ಟಿದ್ದಾರೆ. ಕುವೆಂಪು ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಅಧಿವೇಶನ: ಆಡಳಿತ ಪಕ್ಷದ ವಿರುದ್ಧ ಮುಗಿ ಬೀಳಲು ವಿಪಕ್ಷಗಳು ಸಜ್ಜು

• ಉದಯವಾಹಿನಿ, ಬೆಳಗಾವಿ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್ 9 ರಿಂದ 20 ರವರೆಗೆ ಚಳಿಗಾಲ ಅಧಿವೇಶನ ನಡೆಯಲಿದೆ. ಇಂದು ಬೆಳಗ್ಗೆ 11 ಗಂಟೆಗೆ ಅಧಿವೇಶನ ಆರಂಭವಾಗಲಿದೆ. ಈ ಬಾರಿಯ ಚಳಿಗಾಲ ಅಧಿವೇಶನ ಬಿಸಿಬಿಸಿ ಚರ್ಚೆ, ವಾಕ್ಸಮರಕ್ಕೆ ಸಾಕ್ಷಿಯಾಗುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕೇಳಿಬಂದಿರುವ ಮುಡಾ ಹಗರಣದ ಆರೋಪ, ವಕ್ಫ್ ಆಸ್ತಿ ವಿವಾದ ಚರ್ಚೆಗೆ ಪ್ರಮುಖ ಬಿಂದುಗಳಾಗಬಹುದು. ವಕ್ಫ್ ವಿವಾದ, ಪಡಿತರ ಚೀಟಿ ಗೊಂದಲ, ಮುಡಾ ಹಗರಣ ಸೇರಿ ಸಾಲು ಸಾಲು ವಿಚಾರಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಮುಗಿ ಬೀಳು ವಿಪಕ್ಷಗಳು ಸಜ್ಜಾಗಿವೆ. ಈ ಎರಡೂ ವಿಚಾರಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಚಾಟಿ ಬೀಸಲು ವಿಪಕ್ಷಗಳು ತಯಾರಿ ನಡೆಸಿವೆ. ಹಾಗೇ ಉತ್ತರ ಕರ್ನಾಟಕದ ಜಲ್ವೆಂತರ ಸಮಸ್ಯೆಗಳಾದ ಮೂಲಭೂತ ಸೌಕರ್ಯದ ವಿಚಾರಕ್ಕೆ ಈ ಬಾರಿಯಾದರೂ ಪರಿಹಾರ ಸಿಗುತ್ತಾ ಕಾದು ನೋಡಬೇಕಿದೆ.

### ನಿವೃತ್ತ ಶಿಕ್ಷಕರಿಗೆ 1 ಲಕ್ಷ ವಂಚನೆ

• ಉದಯವಾಹಿನಿ, ಕನಕಪುರ

ನಗರಸಭೆ ವಾಣಿಜ್ಯ ಮಳಿಗೆಗೆ ಮುಂಗಡವಾಗಿ ಕಟ್ಟಿದ್ದ ಹಣವನ್ನು ವಾಪಸ್ ನೀಡುವುದಾಗಿ ನಿವೃತ್ತ ಶಿಕ್ಷಕರೊಬ್ಬರಿಗೆ 1 ಲಕ್ಷ ವಂಚನೆ ಮಾಡಲಾಗಿದೆ. ಕನಕಪುರದ ರುದ್ರೇಗೌಡ ಹಣ ಕಳೆದುಕೊಂಡ ನಿವೃತ್ತ ಶಿಕ್ಷಕ. ನಗರಸಭೆಯಿಂದ ನಿರ್ಮಿಸಿರುವ ವಾಣಿಜ್ಯ ಸಂಕೀ ರ್ಣದಲ್ಲಿ 6.50 ಲಕ್ಷ ಮುಂಗಡ ನೀಡಿ ಹರಾಜಿನಲ್ಲಿ ಮಳಿಗೆ ಬಾಡಿಗೆಗೆ ಪಡೆದಿದ್ದರು. ಆದರೆ, ಅಂಗಡಿ ಆರಂಭಿಸದ ಕಾರಣ ಮುಂಗಡ ಹಣ 6.50 ಲಕ್ಷ ಹಿಂತಿರುಗಿಸುವಂತೆ ನಗರಸಭೆಗೆ ಅರ್ಜಿ ಸಲ್ಲಿಸಿದ್ದರು. ತನ್ನನ್ನು ನಗರಸಭೆ ಆಯುಕ್ತರ ಸಹಾಯಕ ಎಂದು ಪರಿಚಯಸಿಕೊಂಡ ವ್ಯಕ್ತಿಯೊಬ್ಬ ರುದ್ರಗೌಡ ಅವರಿಗೆ ಕರೆ ಮಾಡಿ ನೀವು ಮುಂಗಡವಾಗಿ ನೀಡಿದ 6.50 ಲಕ್ಷಕ್ಕೆ ಬಡ್ಡಿ ಸೇರಿಸಿ 9 ಲಕ್ಷ ಹಿಂತಿರುಗಿಸುವುದಾಗಿ ಹೇಳಿದ್ದಾರೆ. 9 ಲಕ್ಷದ ಚೆಕ್ ಸಿದ್ದವಾಗಿದ್ದು ಅದನ್ನು ಪಡೆಯಲು 1 ಲಕ್ಷ ಪಾವತಿಸಬೇಕು ಎಂದು ಹೇಳಿದ್ದಾರೆ. 2.50 ಲಕ್ಷ ಹೆಚ್ಚುವರಿಯಾಗಿ ಸಿಗುತ್ತಿರುವುದರಿಂದ ರುದ್ರೇಗೌಡ 1 ಲಕ್ಷ ಕೊಡಲು ಒಪ್ಪಿ ಮನೆಯಿಂದ ಹಣ ತಂದು ನಗರ ಸಭೆ ಹಿಂಭಾಗದ ಎಸ್‌ಬಿಎಂ ಬ್ಯಾಂಕ್ ಮುಂಭಾಗ ಕಾಯುತ್ತಿದ್ದ ವ್ಯಕ್ತಿ ಕೈಗೆ ಹಣ ತಲುಪಿಸಿದ್ದಾರೆ. ನಿಮ್ಮ ಚೆಕ್‌ಗೆ ಸಹಿ ಪಡೆಯಲು ತಾಲ್ಲೂಕು ಕಚೇರಿಗೆ ಹೋಗಿದ್ದಾರೆ. ತಾಲ್ಲೂಕು ಕಚೇರಿಯ 2ನೇ ಮಹಡಿಗೆ ಹೋಗಿ ಕೇಳಿ' ಎಂದು ಹೇಳಿ ಅಲ್ಲಿಂದ ಕಾಲ್ಕಿತ್ತಿದ್ದಾನ. ಆತನ ಮಾತನ್ನು ನಂಬಿ ತಾಲ್ಲೂಕು ಕಚೇರಿಗೆ ಹೋದ ರುದ್ರೇಗೌಡ ಅವರು ಚೆಕ್ ಬಗ್ಗೆ ವಿಚಾರಿಸಿದ್ದಾರೆ. ಸಮರ್ಪಕ ಉತ್ತರ ದೊರೆಯದ ಕಾರಣ ನಗರಸಭೆಗೆ ತೆರಳಿ ವಿಚಾರಿಸಿದ್ದಾರೆ. ನಗರಸಭೆಯಲ್ಲಿ ವಿಚಾರಿಸಿದಾಗ ತಾವು ಮೋಸ ಹೋಗಿರುವ ವಿಷಯ ಗೊತ್ತಾಗಿದೆ. ತಕ್ಷಣ ರುದ್ರೇಗೌಡ ಟೌನ್ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ.

### ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ರಕ್ತಪಾತಕ್ಕೆ ಹೆದರುವುದಿಲ್ಲ: ಡಿಸಿಎಂ

• ಉದಯವಾಹಿನಿ, ಕನಕಪುರ

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ಸಂಬಂಧಿಸಿದಂತೆ ಅದೇನು ರಕ್ತಪಾತ ಮಾಡುತ್ತಾರೆ ಅದಕ್ಕೆಲ್ಲ ನಾವು ಹೆದರುವುದಿಲ್ಲ ರಾಜಕೀಯಕ್ಕಾಗಿ ಯಾರೇ ವಿರೋಧಿಸಿದರೂ, ನಾವು ಯೋಜನೆಯನ್ನು ಜಾರಿ ಮಾಡೇ ಮಾಡುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಯೋಜನೆ ಜಾರಿಯಾದರೆ ರಕ್ತಪಾತವಾಗಲಿದೆ' ಎಂಬ ತುಮಕೂರು ಗ್ರಾಮೀಣ ಬಿಜೆಪಿ ಶಾಸಕ ಸುರೇಶ್ ಗೌಡ ಹೇಳಿಕೆ ಕುರಿತು ನಗರದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ಯೋಜನೆಯಲ್ಲಿ ಅವರ ವೈಯಕ್ತಿಕ ವಿಚಾರಗಳಿವೆ. ಅದಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು. ಹಿಂದೆ ನಾನು ನೀರಾವರಿ ಸಚಿವ ಹಾಗೂ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಯೋಜನೆಗೆ ಅನುಮೋದನೆ ಸಿಕ್ಕಿತ್ತು. ಕಾಮಗಾರಿ ಕುರಿತು ಸಮಿತಿ ವರದಿ ಆಧರಿಸಿ ಯೋಜನೆಯನ್ನು ಜಾರಿ ಮಾಡುತ್ತೇವೆ. ನಾವು ಯಾವುದಕ್ಕೂ ಹೆದರುವುದಿಲ್ಲ. ಪ್ರತಿಷ್ಠೆ ಬಿಟ್ಟು ಅಭಿವೃದ್ಧಿ ವಿಚಾರ ಮುಂದಿಟ್ಟುಕೊಂಡು ಹೋಗಬೇಕು ಎಂದರು. ಬ್ಲ್ಯಾಕ್‌ಮೇಲ್ ಮಾಡಿ ಸರ್ಕಾರವನ್ನು ಹೆದರಿಸುತ್ತೇವೆ ಎನ್ನುವವರಿಗೆ ನಾವು ಹೆದರುವುದಿಲ್ಲ. ಯೋಜನೆಗೆ ಸಂಬಂಧಿಸಿದಂತೆ ಅವರು ಗುತ್ತಿಗೆದಾರರನ್ನು ಕರೆದು ಏನೇನು ಮಾತನಾಡಿದ್ದಾರೆಂದು ಗೊತ್ತಿದೆ. ಅದನ್ನೆಲ್ಲಾ ನಾನು ಬಹಿರಂಗವಾಗಿ ಹೇಳುವುದಿಲ್ಲ ಎಂದು ತಿಳಿಸಿದರು.

### ಲಾರಿ ಚಾಲಕನಿಗೆ ಆರು ತಿಂಗಳು ಜೈಲು

• ಉದಯವಾಹಿನಿ, ತಿಪಟೂರು

ಅಜಾಗರೂಕ ಚಾಲನೆಯಿಂದ ಮಹಿಳೆ ಸಾವಿಗೆ ಕಾರಣನಾಗಿದ್ದ ಲಾರಿ ಚಾಲಕ ಬಾಗೇಪಲ್ಲಿ ತಾಲ್ಲೂಕು ಗುಟ್ಟಮೆಂದಪಲ್ಲಿ ಗ್ರಾಮದ ವಿ. ನರಸಿಂಹಪ್ಪಗೆ ಜೆಎಂಎಫ್‌ಸಿ ನ್ಯಾಯಾಲಯ ಆರು ತಿಂಗಳು ಸಜೆ ಮತ್ತು 6,500 ದಂಡ ವಿಧಿಸಿದೆ. 2019ರ ನವೆಂಬರ್ 26ರಂದು ನಗರದ ಕಲ್ಪತರು ಮಾಂಟೆಸ್ಸರಿ ಶಾಲೆ ಮುಂಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಗಳು ಪೂಜಾಳೊಂದಿಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ಬಿ.ಎಸ್.ಭಾಗ್ಯ ಶ್ರೀ ಅವರಿಗೆ ಹಿಂಬದಿಯಿಂದ ಲಾರಿ ಡಿಕ್ಕಿ ಹೊಡೆದಿತ್ತು. ಭಾಗ್ಯ ಶ್ರೀ ಸ್ಥಳದಲ್ಲೇ ಮೃತಪಟ್ಟಿದ್ದರು. ಮಗ ಳಿಗೆ ಸಣ್ಣ ಪುಟ್ಟ ಗಾಯಗಳಾಗಿತ್ತು. ಅಪಘಾತಕ್ಕೆ ಲಾರಿ ಚಾಲಕನ ಅಜಾಗರೂಕತೆ ಮತ್ತು ನಿರ್ಲಕ್ಷ್ಯವೇ ಕಾರಣ ಎಂದು ನ್ಯಾಯಾಲಯದಲ್ಲಿ ಸಾಬೀತಾಗಿದ್ದರಿಂದ ನ್ಯಾಯಾಧೀಶ ಸಿ.ಎಫ್. ಮಹಮದ್ ಆರೀಫುಲ್ಲಾ ತೀರ್ಪು ಪ್ರಕಟಿಸಿದರು. ಆಗಿನ ತನಿಖಾಧಿಕಾರಿಯಾಗಿದ್ದ ಸಿ.ಪಿ.ನವೀನ್ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಶಿವಬಸಪ್ಪ ಎಸ್. ಹುಕ್ಕೇರಿ ವಾದ ಮಂಡಿಸಿದ್ದರು.

# ಸಂಡೂರು ಕ್ಷೇತ್ರದಲ್ಲಿ ಮತದಾರರಿಗೆ ಅಭಿನಂದನೆ ಸಲ್ಲಿಸುವ ಬೃಹತ್ ಸಮಾವೇಶ

## ರಾಜಕೀಯ ನಿವೃತ್ತಿ ಘೋಷಿಸುತ್ತೇನೆ ಎನ್ನುವ ನನ್ನ ಸವಾಲು ಸ್ವೀಕರಿಸಲು ಪ್ರಧಾನಿ ಮೋದಿ ಧೈರ್ಯ ತೋರಿಸಲಿಲ್ಲ: ಸಿಎಂ

• ಉದಯವಾಹಿನಿ ಬಳ್ಳಾರಿ


ಉಪಚುನಾವಣೆಯಲ್ಲಿ ಬಿಜೆಪಿಯ ಲೋಕಲ್ ಲೀಡರ್ ಗಳಿಂದ ಪ್ರಧಾನಿ ಮೋದಿಯವರೆಗೂ ಸರಣಿ ಸುಳ್ಳುಗಳನ್ನು ಹೇಳಿದರು. ನೀವು ಆರೋಪ ಸಾಬೀತುಪಡಿಸಿ, ನಾನು ರಾಜಕೀಯ ನಿವೃತ್ತಿ ತಗೊತೀನಿ ಎಂದು ಮೋದಿಯವರಿಗೆ ಸವಾಲು ಹಾಕಿದೆ. ಅವರು ಸವಾಲು ಸ್ವೀಕರಿಸುವ ಧೈರ್ಯ ತೋರಿಸಲಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಿಗೆ ಅಭಿನಂದನೆ ಸಲ್ಲಿಸುವ ಬೃಹತ್ ಮತದಾರರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ನಾನು ಮೂರು ದಿನಗಳ ಕಾಲ ಸಂಡೂರಿನಲ್ಲಿ ಪ್ರಚಾರ ಮಾಡಿದೆ.

ಈ ವೇಳೆ ತುಕಾರಾಮ್ ಅವರು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಗಮನಿಸಿದ್ದೇನೆ. ತುಕಾರಾಮ್ ಅವರಿಗೂ ಮೊದಲು ಸಂಡೂರು ಹೇಗಿತ್ತು ಎನ್ನುವುದೂ ನನಗೂ ಗೊತ್ತು. ಈಗ ತುಕಾರಾಮ್ ಅವರು ಒಳ್ಳೆ ಕೆಲಸಗಳನ್ನು ಮಾಡಿರುವುದನ್ನು ನಾನು ನೋಡಿದ್ದೇನೆ. ನಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ನಾಡಿನ ಜನತೆ ಎದುರಿಗೆ ಕೊಟ್ಟ ಎಲ್ಲಾ ಭರವಸೆಗಳನ್ನೂ ಹಂತ ಹಂತವಾಗಿ ಈಡೇರಿಸುತ್ತಿದ್ದೇವೆ. ನಮ್ಮ ಜನರ ಆರ್ಥಿಕ ಶಕ್ತಿ ಮತ್ತು ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ನಾವು ರೂಪಿಸಿ ಜಾರಿ ಮಾಡುವುದರ ಮೂಲಕ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಸರಣಿ ಸುಳ್ಳು, ಅಪಪ್ರಚಾರ**

**ವಕ್ಫ್ ವಿಚಾರದಲ್ಲೂ ಬಿಜೆಪಿಯ ರಾಷ್ಟ್ರೀಯ ನಾಯಕರಿಂದ ಲೋಕಲ್ ಲೀಡರ್ ಗಳವರೆಗೂ ಎಲ್ಲರೂ ಸರಣಿ ಸುಳ್ಳು, ಅಪಪ್ರಚಾರ ಮಾಡಿದರು. ಪ್ರಧಾನಿ ನರೇಂದ್ರ ಮೋದಿಯವರು ಮಹಾರಾಷ್ಟ್ರ ಚುನಾವಣೆಯಲ್ಲಿ 700 ಕೋಟಿ ಭ್ರಷ್ಟಾಚಾರದ ಆರೋಪ ಹೊರಿಸಿ ಭಾಷಣ ಮಾಡಿದರು. ನಾನು ಪ್ರಧಾನಿಗೆ ಸವಾಲು ಹಾಕಿದೆ. ನಿಮ್ಮ ಆರೋಪ ಸಾಬೀತು ಮಾಡಿ. ನಾನು ರಾಜಕೀಯ ನಿವೃತ್ತಿ ಘೋಷಿಸುತ್ತೇನೆ ಎನ್ನುವ ನನ್ನ ಸವಾಲು ಸ್ವೀಕರಿಸಲು ಪ್ರಧಾನಿ ಮೋದಿ ಧೈರ್ಯ ಮಾಡಲಿಲ್ಲ. ಅವರಿಗೆ ಸುಳ್ಳು ಹೇಳುವುದಕ್ಕೆ ಮಾತ್ರ ಧೈರ್ಯ ಬರುತ್ತದೆ.**



ಉದಯವಾಹಿನಿ ಚಿತ್ರ

**ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಸಂಡೂರು ಜನತೆಗೆ ಸಂಡೂರಿನಲ್ಲಿ ಬಡವರು ಹೆಚ್ಚಾಗಿರುವುದರಿಂದ ಮತ್ತು ನಂಜುಂಡಪ್ಪ ಅವರ ವರದಿಯಲ್ಲಿ ಹಿಂದುಳಿದ ತಾಲ್ಲೂಕಿನ ಪಟ್ಟಿಯಲ್ಲಿ ಇರುವುದರಿಂದ ಹೆಚ್ಚುವರಿಯಾಗಿ 2000 ಮನೆಗಳನ್ನು ನೀಡಲಾಗುವುದು ಎಂದು ಘೋಷಿಸಿದರು. ಬಳ್ಳಾರಿ ಆಸ್ಪತ್ರೆಯಲ್ಲಿ ಮೃತಪಟ್ಟ ಐವರು ಬಾಣಂತಿಯರಿಗೆ ಸರ್ಕಾರ ಪರಿಹಾರದ ಮೊತ್ತವನ್ನು ಐದು ಲಕ್ಷಕ್ಕೆ ಏರಿಸಿದೆ**

**-ಸಿಎಂ ಸಿದ್ದರಾಮಯ್ಯ**

2014-2018 ರಲ್ಲಿ ನರೇಂದ್ರ ಮೋದಿಯವರು ಕೊಟ್ಟ ಭರವಸೆಗಳನ್ನು ನೆನಪಿಸಿಕೊಳ್ಳಿ. ಅವುಗಳಲ್ಲಿ ಒಂದನ್ನಾದರೂ ಈಡೇರಿಸಿದ್ದಾರಾ ನೋಡಿ. ಮೋದಿಯವರು ನಿಮಗೆ ಈ ಮಟ್ಟದ ಮೋಸ ಮಾಡಿದ್ದಾರಲ್ಲಾ ಇದನ್ನು ಪ್ರಶ್ನಿಸಬೇಕಿದೆ. ಮೋದಿ ಅಚ್ಛೆ ದಿನ್ ತರಲಿಲ್ಲ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡಲಿಲ್ಲ, ವಿದೇಶದಿಂದ ಕಪ್ಪು ಹಣ ತರಲಿಲ್ಲ, ನಿಮ್ಮ ಖಾತೆಗೆ 15 ಲಕ್ಷ ಹಾಕಲಿಲ್ಲ, ಬರೀ ಭಾಷಣದಲ್ಲೇ ಮೋದಿಯವರು ಎಲ್ಲಾ ಮುಗಿಸಿ ಹೋದರು. ಬಳ್ಳಾರಿ ಜಿಲ್ಲೆಯ ಜನತೆಯನ್ನು ಭಯದಲ್ಲಿಟ್ಟು ರಿಪಬ್ಲಿಕ್ ಬಳ್ಳಾರಿ ಮಾಡಿದ್ದ ಜನಾರ್ದನ ರೆಡ್ಡಿಯವರಿಗೆ ಬಿಜೆಪಿ ಈ ಚುನಾವಣೆಯ ಉಸ್ತುವಾರಿ ವಹಿಸಿತ್ತು.

ಇದು ಸಂಡೂರಿನ ಘನತೆಯನ್ನು ಹೆಚ್ಚಿಸಿದೆ.

**ಬಿಜೆಪಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬಂದೇ ಇಲ್ಲ**

ಇವತ್ತಿನವರೆಗೂ ರಾಜ್ಯದಲ್ಲಿ ಬಿಜೆಪಿ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬಂದೇ ಇಲ್ಲ. ಕೇವಲ ಆಪರೇಷನ್ ಕಮಲದ ಮೂಲಕವೇ ಬಿಜೆಪಿ ರಾಜ್ಯದಲ್ಲಿ ಅಧಿಕಾರ ನಡೆಸಿದೆ. ಆಪರೇಷನ್ ಕಮಲಕ್ಕೆ ಬಳಸಿದ ಹಣ ಕೂಡ ಕಪ್ಪು ಹಣ ಅಲ್ಲವೇ?. ಮೂರು ಉಪ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ರಾಜ್ಯದ ಜನತೆ ನಮ್ಮ ಸರ್ಕಾರಕ್ಕೆ ದೊಡ್ಡ ಆಶೀರ್ವಾದ ಮಾಡಿದ್ದಾರೆ. ನನ್ನ ವಿರುದ್ಧ ಸುಳ್ಳು ಕೇಸು, ಸುಳ್ಳು ಆರೋಪಗಳ ಮೂಲಕ ನನ್ನ ವಿರುದ್ಧ ಷಡ್ಯಂತ್ರ ನಡೆಸಿದ ಬಿಜೆಪಿಗೆ ರಾಜ್ಯದ ಜನತೆ ತಕ್ಕ ಉತ್ತರ ನೀಡಿದ್ದಾರೆ. ನಿಮ್ಮ ಆಶೀರ್ವಾದ ಇರುವವರೆಗೂ ಈ ಸಿದ್ದರಾಮಯ್ಯ ಯಾವುದೇ ಷಡ್ಯಂತ್ರ, ಸುಳ್ಳು ಕೇಸುಗಳಿಗೆ ಹೆದರುವ ಪ್ರಶ್ನೆಯೇ ಇಲ್ಲ. ವಕ್ಫ್ ವಿಚಾರದಲ್ಲೂ ಬಿಜೆಪಿಯ ರಾಷ್ಟ್ರೀಯ ನಾಯಕರಿಂದ ಲೋಕಲ್ ಲೀಡರ್ ಗಳವರೆಗೂ ಎಲ್ಲರೂ ಸರಣಿ ಸುಳ್ಳು, ಅಪಪ್ರಚಾರ ಮಾಡಿದರು. ಪ್ರಧಾನಿ ನರೇಂದ್ರ ಮೋದಿಯವರು ಮಹಾರಾಷ್ಟ್ರ ಚುನಾವಣೆಯಲ್ಲಿ 700 ಕೋಟಿ ಭ್ರಷ್ಟಾಚಾರದ ಆರೋಪ ಹೊರಿಸಿ ಭಾಷಣ ಮಾಡಿದರು. ನಾನು ಪ್ರಧಾನಿಗೆ ಸವಾಲು ಹಾಕಿದೆ. ನಿಮ್ಮ ಆರೋಪ ಸಾಬೀತು ಮಾಡಿ. ನಾನು ರಾಜಕೀಯ ನಿವೃತ್ತಿ ಘೋಷಿಸುತ್ತೇನೆ ಎನ್ನುವ ನನ್ನ ಸವಾಲು ಸ್ವೀಕರಿಸಲು ಪ್ರಧಾನಿ ಮೋದಿ ಧೈರ್ಯ ಮಾಡಲಿಲ್ಲ.

# ರೂ.3 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ನಗರಸಭೆ ವ್ಯಾಪ್ತಿಯ ವಿವಿಧ ವಾರ್ಡ್ ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಹಾಗೂ ನಗರಸಭೆ ಅಧ್ಯಕ್ಷೆ ಬಿ.ಎನ್. ಸುಮಿತಾ ಅವರು ಗುದ್ದಲಿಪೂಜೆ ನೆರವೇರಿಸಿದರು. ಮುಖ್ಯಮಂತ್ರಿಗಳ ವಿಶೇಷ ಅನುದಾನ, 2024-25ನೇ ಸಾಲಿನ ಎಸ್‌ಎಫ್‌ಸಿ ಮುಕ್ತ ನಿಧಿ ಅನುದಾನ ಹಾಗೂ ನಗರಸಭೆ ನಿಧಿಯ ಶೇ.24.10ರ ಅನುದಾನದ ಸೇರಿದಂತೆ ಶನಿವಾರ ಸುಮಾರು ರೂ.3 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ವಾರ್ಡ್ ನಂ.18ರ ಮೆದೇಹಳ್ಳಿ ರಸ್ತೆ ರಾಷ್ಟ್ರೀಯ ಹೆದ್ದಾರಿ-4ರ ಸರ್ವೀಸ್ ರಸ್ತೆ ಹತ್ತಿರದಲ್ಲಿ ರೂ.30 ಲಕ್ಷ ವೆಚ್ಚದಲ್ಲಿ ಆರ್.ಸಿ.ಸಿ ಡೆಕ್ ಸ್ಲಾಬ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.17ರ ಜಯಲಕ್ಷ್ಮೀ ಬಡಾವಣೆ ಶ್ರೀಶಾರಧ ನಿಲಯದಿಂದ ಮಸ್ತಾನ್ ಸಾಬ್ ಮನೆಯವರೆಗೆ ಹಾಗೂ ಫ್ಲೋರ್‌ಮಿಲ್ ಪಕ್ಕದಲ್ಲಿ ರೂ.30 ಲಕ್ಷ ವೆಚ್ಚದಲ್ಲಿ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ, ವಾರ್ಡ್ ನಂ.16ರ ಸದಾನಂದಯ್ಯ ಬಡಾವಣೆ ರಂಗಪ್ಪ ಮನೆಯ ಹತ್ತಿರ ಉದ್ಯಾನವನ ನಿರ್ಮಾಣ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.10ರ ಚೇಳುಗುಡ್ಡ. ಷಣ್ಮುಖ ಮನೆಯಿಂದ ರಂಗಸ್ವಾಮಿ ಮನೆಯವರೆಗೆ ರೂ.30 ಲಕ್ಷ ವೆಚ್ಚದಲ್ಲಿ ಸಿ.ಸಿ.ರಸ್ತೆ ನಿರ್ಮಾಣ, ವಾರ್ಡ್ ನಂ.13ರ ನೆಹರು ನಗರ 2ನೇ ಕ್ರಾಸ್‌ನಲ್ಲಿ ಮೇಷ್ಟ್ರು ಅಂಗಡಿ ನಾಗಪ್ಪ ಮತ್ತು ಕುಮಾರಣ್ಣನ ಮನೆಗಳ ಕ್ರಾಸ್‌ಗಳಲ್ಲಿ ರೂ.30 ಲಕ್ಷ ವೆಚ್ಚದಲ್ಲಿ ಸಿ.ಸಿ.ರಸ್ತೆಸ ನಿರ್ಮಾಣ ಮತ್ತು ನೆಹರು ನಗರ 2 ಮತ್ತು 3ನೇ ಕ್ರಾಸ್‌ನಲ್ಲಿ ಪೈಪ್‌ಲೈನ್ ಕಾಮಗಾರಿ, ವಾರ್ಡ್ ನಂ.15ರ ಸಂಪಿಗೆ ಸ್ಕೂಲ್ ಪಕ್ಕದ ಮತ್ತು ಬರಗೇರಿ ಬೀದಿ ಗಲ್ಲಿಗಳಲ್ಲಿ ರೂ.30 ಲಕ್ಷ ವೆಚ್ಚದ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ, ವಾರ್ಡ್ ನಂ.26ರ ಬಡಮಕಾನ್ ಕ್ರಾಸ್‌ನಿಂದ ಮಟನ್ ಮಾರ್ಕೆಟ್‌ವರೆಗೆ ರೂ.15 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ, ವಾರ್ಡ್ ನಂ.21ರ ಜೆ.ಸಿ.ಆರ್. ಬಡಾವಣೆ 5ನೇ ಕ್ರಾಸ್ ಸರ್ವಿಸ್ ರಸ್ತೆ ಚಾಫೆರೆಡ್ಡಿ ಹೋಟೆಲ್‌ನಿಂದ ಕನ್ನಡಪ್ರಭ ಷಣ್ಮುಖಪ್ಪ ಮನೆವರೆಗೆ ಹಾಗೂ 6ನೇ ಕ್ರಾಸ್ ಬಿ.ಟಿ.ವೀರಪ್ಪ ಮನೆ ಮುಂಭಾಗ, 4ನೇ ಕ್ರಾಸ್‌ನಲ್ಲಿ ಅಬಕಾರಿ ಆಫೀಸ್ ಮುಂಭಾಗ, 3ನೇ ಕ್ರಾಸ್ ಶಾಂತಿ ವೈನ್ಸ್‌ರವರ ಮನೆ ಮುಂಭಾಗ ರೂ.15 ಲಕ್ಷ ವೆಚ್ಚದಲ್ಲಿ ಸಿ.ಸಿ ಚರಂಡಿ ನಿರ್ಮಾಣ ಹಾಗೂ ಡೆಕ್ ಸ್ಲಾಬ್ ಕಾಮಗಾರಿ, ವಾರ್ಡ್ ನಂ.28ರ ತುರುವನೂರು ಮುಖ್ಯ ರಸ್ತೆಯ ವಾಸವಿ ಲ್ಯಾಬ್ ಪಕ್ಕದ ಆಡಿಟರ್ ನಾಗಭೂಷಣ್ ಮನೆರವರ ಮನೆ ಮುಂಭಾಗದಲ್ಲಿ ರೂ.30 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ಚಾಲನೆ ನೀಡಿದರು.

ನಗರಸಭೆ ಅಧ್ಯಕ್ಷರಾದ ಬಿ.ಎನ್.ಸುಮಿತಾ, ಪೌರಾಯುಕ್ತೆ ಎಂ.ರೇಣುಕಾ ಹಾಗೂ ನಗರಸಭೆ ಸದಸ್ಯರಾದ ಗೊಪ್ಪೆ ಮಂಜುನಾಥ್, ವೆಂಕಟೇಶ್, ಅನುರಾಧ ರವಿಕುಮಾರ್, ಸುರೇಶ್, ಭಾಗ್ಯಮ್ಮ, ನರಸಿಂಹಮೂರ್ತಿ, ಚಂದ್ರಮ್ಮ, ಮತ್ತಿತರು ಇದ್ದರು.



ಉದಯವಾಹಿನಿ ಚಿತ್ರ

**2024-25ನೇ ಸಾಲಿನ ಎಸ್‌ಎಫ್‌ಸಿ ಮುಕ್ತ ಅನುದಾನದಲ್ಲಿ ಚಿತ್ರದುರ್ಗ ನಗರದ ಯೂನಿಯನ್ ಪಾರ್ಕ್ ಪಕ್ಕದ ರಸ್ತೆಯಲ್ಲಿ ರೂ.30.95 ಲಕ್ಷ ವೆಚ್ಚದಲ್ಲಿ ದೊಡ್ಡ ಮಳೆ ನೀರು ಚರಂಡಿ ಮತ್ತು ಕಲ್ವರ್ಟ್ ನಿರ್ಮಾಣ ಕಾಮಗಾರಿ ಹಾಗೂ ನಗರಸಭೆ ನಿಧಿಯ ಶೇ.24.10ರ ಅನುದಾನದಲ್ಲಿ ಚಿತ್ರದುರ್ಗ ನಗರದ ಯೂನಿಯನ್ ಪಂಪ್ ಹೌಸ್ ಆವರಣದಲ್ಲಿ ರೂ.22 ಲಕ್ಷ ವೆಚ್ಚದಲ್ಲಿ ಪೌರ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.**

# ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ

• ಉದಯವಾಹಿನಿ ಕೊಪ್ಪಳ



ಉದಯವಾಹಿನಿ ಚಿತ್ರ

ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ಕಳೆದ ವರ್ಷ ಚೆನ್ನಾಗಿ ನಡೆದಿದೆ ಎಂದು ಸಾರ್ವಜನಿಕರು ತಿಳಿಸಿದ್ದು, ಕಳೆದ ವರ್ಷದಂತೆಯೇ ಈ ವರ್ಷವೂ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಹನು ಮಮಾಲಾ ವಿಸರ್ಜನೆ ಸಭೆಯ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿ, 'ಕಾರ್ಯಕ್ರಮದಲ್ಲಿ ಸಮಸ್ಯೆಗಳಾಗದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಯ ನೋಡಲ್ ಅಧಿಕಾರಿಗಳು ಖುದ್ದಾಗಿ ಹಾಜರಿದ್ದು ತಮಗೆ ವಹಿಸಿದ ಜವಾಬ್ದಾರಿ ನಿರ್ವಹಿಸಬೇಕು. ಪೊಲೀಸರು ನಾಲ್ಕೈದು ಕಡೆ ಚೆಕ್‌ಪೋಸ್ಟ್‌ಗಳನ್ನು ತೆರೆಯಬೇಕು. ಜನರು ಬರುವುದು ಒಂದು ಕಡೆ ಮತ್ತು ಹೋಗುವುದಕ್ಕೆ ಇನ್ನೊಂದು ಕಡೆ ಮಾರ್ಗಗಳನ್ನು ಮಾಡಿ ಸಂಚಾರ ದಟ್ಟಣೆಯಾಗದಂತೆ ಎಚ್ಚರಿಕೆ ವಹಿಸಬೇಕು' ಎಂದು ನಿರ್ದೇಶನ ನೀಡಿದರು.

ಊಟದ ಸಮಸ್ಯೆಯಾಗಬಾರದು. ಒಳ್ಳೆಯ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ನದಿಯಲ್ಲಿ ಸ್ನಾನಮಾಡಿ ಜನ ಬಟ್ಟೆಗಳನ್ನು ಅಲ್ಲಿ ಬಿಟ್ಟು ಹೋಗುತ್ತಾರೆ. ಅವುಗಳನ್ನು ಒಂದು ಕಡೆ ತೆಗೆದು ಹಾಕುವ ವ್ಯವಸ್ಥೆಯಾಗಬೇಕು ಎಂದು ಹೇಳಿದರು.

**ಸಚಿವ ಶಿವರಾಜ ತಂಗಡಗಿ ಹೇಳಿಕೆ**

ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ, ಜನಾರ್ದನ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯಾ ಚತುರ್ವೇದಿ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಹೆಚ್ಚುವರಿ ಎಸ್.ಪಿ. ಆರ್. ಹೇಮಂತ ಕುಮಾರ್, ಜಿ.ಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್ ಪಾಲ್ಗೊಂಡಿದ್ದರು.

# ಹಿಂದೂಗಳ ಒಗ್ಗಟ್ಟು ನಮ್ಮ ಶಕ್ತಿ ಆಗಬೇಕಿದೆ: ಸ್ವಾಮೀಜಿ

• ಉದಯವಾಹಿನಿ ಗದಗ

ಭಾರತದ ಬೆಂಬಲವಿಲ್ಲದೇ ಬಾಂಗ್ಲಾದೇಶ ಉದಯವಾಗುತ್ತಿರಲಿಲ್ಲ. ಆದರೆ, ಇಂದು ಅದೇ ಬಾಂಗ್ಲಾ ಮುಸ್ಲಿಂ ಉಗ್ರವಾದಿಗಳೊಂದಿಗೆ ಕೈಜೋಡಿಸಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಖಂಡನೀಯ. ಭಾರತಕ್ಕೆ ಹೊಂದಿಕೊಂಡಿರುವ ಮುಸ್ಲಿಂ ರಾಷ್ಟ್ರಗಳು ಈ ಮನೋಭಾವ ಬಿಡದೆ ಹೋದಲ್ಲಿ ಮುನ್ನೊಂದು ದಿನ ಪಶ್ಚಾತ್ತಾಪ ಪಡುವ ಕಾಲ ಬರುತ್ತದೆ' ಎಂದು ಮುಕ್ಕಣೇಶ್ವರ ಮಠದ ಶಂಕರಾನಂದ ಸ್ವಾಮೀಜಿ ಹೇಳಿದರು.

ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ ಹಿಂದೂ ಹಿತರಕ್ಷಣಾ ವೇದಿಕೆ ವತಿಯಿಂದ ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಬಿಜೆಪಿ ಸೇರಿದಂತೆ ಹಲ ವಾರು ಸಂಘಟನೆಗಳು ಜತೆಗೂಡಿ ನಗರದ ಗಾಂಧಿ ಸರ್ಕಲ್‌ನಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಹಿಂದೂಗಳು ಸಣ್ಣ ಜಾತಿ, ಉಪ ಜಾತಿಗಳನ್ನು ಲೆಕ್ಕಿಸದೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ಬಂದಾಗ ಇಡೀ ವಿಶ್ವ ನಮ್ಮತ್ತ ಕಣ್ಣು ತೆರೆಯುತ್ತದೆ. ನಮ್ಮ ಒಗ್ಗಟ್ಟು ನಮ್ಮ ಶಕ್ತಿಯಾಗಬೇಕಿದೆ. ಇಲ್ಲವಾದಲ್ಲಿ ನಮ್ಮನ್ನು ಹಂತ ಹಂತವಾಗಿ ವಿಭಜಿಸಿ, ನಮ್ಮ ಅಸ್ಮಿತೆಗೆ ಧಕ್ಕೆ ತರುವ ಕಾರ್ಯ ನಡೆಯುತ್ತದೆ. ಹಿಂದೂ ಧರ್ಮಕ್ಕೆ ಸನಾತನ ಶಕ್ತಿ ಇದೆ. ಸಹನಶಕ್ತಿ ಇದೆ. ಜೊತೆಗೆ ಆಚಾರ, ವಿಚಾರ ಸಂಸ್ಕೃತಿ ಉಳಿಸಿಕೊಳ್ಳುವುದು ಅನಿವಾರ್ಯ' ಎಂದು ಹೇಳಿದರು.



ಉದಯವಾಹಿನಿ ಚಿತ್ರ

ವೀರೇಶ್ವರ ಸ್ವಾಮೀಜಿ ಮಾತನಾಡಿ, ಇಡೀ ವಿಶ್ವವನ್ನೇ ತಮ್ಮ ತೆಕ್ಕೆಗೆ ತೆಗೆದುಕೊಳ್ಳಬೇಕೆಂಬ ದುಸ್ಸಾಹಸದಲ್ಲಿ ಹಲವು ಧರ್ಮ ಮುಖಂಡರು ಇತರೆ ಜನಾಂಗಗಳ ಮೇಲೆ ಉಗ್ರವಾದಿಗಳ ಬೆಂಬಲಿಗದೊಂದಿಗೆ ಅವ್ಯಾಹತವಾಗಿ ಹಲ್ಲೆ ಮಾಡುತ್ತಿದ್ದಾರೆ. ಲವ್ ಜಿಹಾದ್ ತಂತ್ರಗಳ ಮೂಲಕ ಹಿಂದೂಗಳನ್ನು ಮತಾಂತರಗೊಳಿಸುತ್ತಿದ್ದಾರೆ. ಈ ದಿಸೆಯಲ್ಲಿ ನಾವು ಜಾಗೃತರಾಗಬೇಕಾಗಿದ್ದು ನಮ್ಮ ಸಂಸ್ಕೃತಿ ಉಳಿಸಿಕೊಳ್ಳಬೇಕಾಗಿರುವುದು ನಮ್ಮ ಜವಾಬ್ದಾರಿಯಾಗಿದೆ' ಎಂದರು.

# ಪ್ರತಿ ಎಕರೆಗೆ ಸಾವಿರ ರೂ. ಪರಿಹಾರ ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯ

• ಉದಯವಾಹಿನಿ ಸಿಂಧನೂರು

ಅಕಾಲಿಕ ಮಳೆಯಿಂದ ಭತ್ತ. ತೊಗರಿ. ಜೋಳ. ಇತರೆ ಬೆಳೆ ನಷ್ಟವಾಗಿದೆ ಭತ್ತದ ಬೆಳೆಯು ನೆಲಕಚ್ಚಿದ್ದರಿಂದ ಫಸಲು ನಾಶವಾಗಿ ರೈತರಿಗೆ ಆರ್ಥಿಕ ತೊಂದರೆಯಾಗಿದೆ. ಸರಕಾರ ಭತ್ತದ ಬೆಳೆ ಕಟಾವಿಗೆ ಮುಂಚೆ ಖರೀದಿ ಕೇಂದ್ರ ತೆರೆದಿದ್ದರೆ ರೈತರಿಗೆ ಅನುಕೂಲವಾಗಿತ್ತು. ಎಂದು ಮಾಸ್ ಲೈನ್ ಕರ್ನಾಟಕ ರೈತ ಸಂಘ (ಕೆಆರ್ ಎಸ್ ) ಸಮಿತಿ ಒತ್ತಾಯಿಸುತ್ತದೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಿಪಿಐ (ಎಂ ಎಲ್) ಮಾಸ್ ಲೈನ್ ರೈತ ಸಂಘದ ರಾಜ್ಯ ಕಾರ್ಯದರ್ಶಿ ಡಿ. ಎಚ. ಪೂಜಾರ ಭತ್ತದ ಬೆಲೆ ಕನಿಷ್ಠ ಪ್ರಮಾಣಕ್ಕೆ ಕುಸಿದಿದ್ದು. ಆಡಳಿತ ಪಕ್ಷದ ಬಗ್ಗೆ ವಿರೋಧ ಪಕ್ಷದ ನಾಯಕರುಗಳ ಧ್ವನಿಯುತ್ತದೆ ಹಲ್ಲು ಕಿತ್ತಿದ ಹಾವಿನಂತೆ ಬರೀ ಬುಸುಗುಟ್ಟುತ್ತಾ ಹೊರತು ವಿರೋಧ ಪಕ್ಷದಿಂದ ಯಾವುದೇ ಕಾರ್ಯ ರೂಪಕ್ಕೆ ಬರುತ್ತಿಲ್ಲ ಎಂದು ಬಿಜೆಪಿ ಪಕ್ಷದ ನಾಯಕರು ರೈತರ ಈ ಯಾವ ಸಮಸ್ಯೆಗಳು ಕಣ್ಣಿಗೆ ಕಾಣುತ್ತಿಲ್ಲ. ಸರ್ಕಾರ ಪ್ರತಿ ಕ್ವಿಂಟಲ್ ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆ 2300 ನಿಗದಿ ಮಾಡಿದೆ ಎಂದರೆ ಸಹ 75 ಕೆಜಿ ಚೀಲಕ್ಕೆ 1800ರಿಂದ1900 ರೂ ಖರೀದಿ ಮಾಡಬೇಕು.ಆದರೆ ಖಾಸಗಿ ದಲ್ಲಾಳಿಗಳು ಪ್ರತಿ ಚೀಲಕ್ಕೆ 1500ರಿಂದ 1600 ರೂ ಗೆ ಖರೀದಿ ಈ ಕಾರಣದಿಂದ ರೈತರಿಗೆ ತುಂಬಾ ನಷ್ಟವಾಗುತ್ತದೆ. ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಖರೀದಿ ಕೇಂದ್ರ ತೆರೆದು ನೋಂದಣಿ ಆರಂಭಿಸಲು ತೀರ್ಮಾನಸಿದ್ದು. ಅಧಿಕಾರಿಗಳು ನಿರ್ಲಕ್ಷದಿಂದ ಸಾಧ್ಯವಾಗಿಲ್ಲ. ನೆಪ ಮಾತ್ರ ಎನ್ನುವಂತೆ ಡಿ 7ರಂದು ಜಿಲ್ಲೆಯ 30 ಕಡೆಗೆ ಖರೀದಿ ಕೇಂದ್ರ ತೆರೆದು ನೋಂದಣಿ ಆರಂಭಿಸಿ ಪ್ರಕಟಣೆ ತಿಳಿಸಿದ್ದು. ರೈತರ ಬಗ್ಗೆ ಸರ್ಕಾರದ ಮೊಸಳೆ ಕಣ್ಣೀರು ಸುರಿಸುವ ಧೋರಣೆ ಅನುಸರಿಸುವುದು ಖಂಡನೆ ಕಂದಾಯ ಮತ್ತು ಕೃಷಿ ಅಧಿಕಾರಿಗಳ ಸಿಬ್ಬಂದಿಗಳು ಸರಿಯಾಗಿ ಬೆಳೆ ಸಮೀಕ್ಷೆ ನಡೆಸಿದೇ ನಿರ್ಲಕ್ಷ್ಯ ವಹಿಸಿದ್ದಾರೆ. ಅಧಿಕಾರಿ ವರ್ಗಗಳ ಹೊಲಕ್ಕೆ ಹೋಗಿದೆ ರೈತರಿಗೆ ವಿಡಿಯೋ ಮಾಡಿ ವಾಟ್ಸಪ್ ಕಳುಹಿಸಿರಿ ಎಂದು ಹೇಳುತ್ತಿರುವುದು ಯಾವ ಪುರುಷಾರ್ಥಕ್ಕೆ ಸರ್ಕಾರಿ ನೌಕರರ ಮಾಡುತ್ತಿರುವುದು ಎಂದು ಆರೋಪಿಸಿದರು.

ಸರ್ಕಾರದ ನಷ್ಟವೊಂದಿದ ಪ್ರತಿ ಎಕರೆಗೆ ಭೂಮಿಗೆ 25 ಸಾವಿರ ರೂ ಪರಹಾರ ನೀಡಬೇಕು. ಸ್ಥಳೀಯ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ. ಬೆಳೆ ಸಾಲ ಮನ್ನಾ ಮಾಡಬೇಕೆಂದು ಸಮಿತಿಯ ಒತ್ತಾಯವಾಗಿದೆ. ಈ. ಸಂ. ಬಿ.ಎನ್. ಯರದಿಹಾಳ. ರಮೇಶ್ ಪಾಟೀಲ್ ಬೇರಿಗೆ. ಚಿಟ್ಟಿ ಬಾಬು ಯಲ್ಲಪ್ಪ ಸೇರಿದಂತೆ ಇದ್ದರು.

**ಬಿಜೆಪಿ ನಾಯಕರು ವಿರುದ್ಧ ಕಿಡಿ**

**ಬರೀ ಸುಮ್ಮನೆ ಭಾವನಾತ್ಮಕ ವಿಷಯಗಳನ್ನು ಹುಡುಕಿ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ರೈತರ ಸಮಸ್ಯೆ ಎಲ್ಲಿಂದ ಗೊತ್ತಾಗುತ್ತದೆ ಇವರಿಗೆ ಅಂಬಾನಿ ಹಾಗೂ ಅದಾನಿ ಶ್ರೀಮಂತರ ಮನೆ ಕಾವಲುಗಾರರು ದ್ದಾರೆ. ಎಂದು ಬಿಜೆಪಿ ನಾಯಕರು ವಿರುದ್ಧ ಡಿ.ಎಚ.ಪೂಜಾರ ಅವರು ಕಿಡಿಕಾರಿದರು.**

# ಬೆರಗುಗೊಳಿಸಿದ 40ಕೆಜಿ ಯ ಕುಂಬಳಕಾಯಿ, 9 ಲಕ್ಷದ ಗಿರ್ ಎತ್ತು

• ಉದಯವಾಹಿನಿ ರಾಯಚೂರು

ಇಲ್ಲಿಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯದ ಮಳಿಗೆಯಲ್ಲಿ ಪ್ರದರ್ಶಿಸಲಾದ 40 ಕೆ.ಜಿ ತೂಕದ ಕುಂಬಳಕಾಯಿ ಪ್ರೇಕ್ಷಕರನ್ನು ಬೆರಗುಗೊಳಿಸುತ್ತಿದೆ. 40 ಕೆ.ಜಿ ತೂಕದ ಕುಂಬಳಕಾಯಿಯನ್ನು ಒಬ್ಬರಿಂದ ಎತ್ತಲು ಸಾಧ್ಯವಾಗುತ್ತಿಲ್ಲ ನಾಲ್ವರು ಎತ್ತಿಕೊಂಡು ಬಂದು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಶಿವಮೊಗ್ಗದಲ್ಲಿ ಇಂತಹ ಕುಂಬಳಕಾಯಿ ಬೆಳೆಯಲಾಗುತ್ತಿದ್ದು, ರೈತರು ವಿಶ್ವವಿದ್ಯಾಲಯದ ಸಿಬ್ಬಂದಿಯಿಂದ ಆಸಕ್ತಿಯಿಂದ ಮಾಹಿತಿ ಕೇಳಿ ಪಡೆಯುತ್ತಿದ್ದಾರೆ. 16 ಕೆಜಿ ತೂಕದ ಸುರ್ವಣಗಡ್ಡೆಯನ್ನೂ ರೈತರು ಬೆರಗುಗಣ್ಣಿನಿಂದ ವೀಕ್ಷಿಸುತ್ತಿದ್ದಾರೆ. 'ಬೃಹತ್ ಕುಂಬಳಕಾಯಿ ಹಾಗೂ ಸುವರ್ಣಗಡ್ಡೆ ನಮ್ಮ ವಿಶ್ವವಿದ್ಯಾಲಯದ ಆಕರ್ಷಣೆಯಾಗಿದೆ. ರೈತರು ನಮ್ಮ ಮಳಿಗೆಗಳಿಗೆ ಬಂದು ಮಾಹಿತಿ ಸಂಗ್ರಹಿಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಎಲ್ಲ ಬಗೆಯ ಮಾಹಿತಿ ಪೂರೈಸಲಾಗಿದೆ' ಎಂದು ಡಾ.ಪ್ರಶಾಂತ ಹೇಳಿದರು.

**ಸದೃಢವಾಗಿರುವ ಕಡಕನಾಥ ಕೋಳಿಗೆ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇದೆ. ಔಷಧೀಯ ಗುಣ ಹೊಂದಿದೆ ಎನ್ನುವ ನಂಬಿಕೆಯಿಂದ ಅನೇಕ ಜನ ಇದರ ಮಾಂಸ ಸೇವಿಸುತ್ತಾರೆ. ಇದರ ಮಾಂಸ ಹಾಗೂ ರಕ್ತ ಎರಡೂ ಕಪ್ಪದಾಗಿರುತ್ತದೆ. ಮೊಟ್ಟೆ ಬೆಲೆ ಒಂದಕ್ಕೆ 20 ಇದೆ. ಬೀದರ್ ತಾಲ್ಲೂಕಿನ ಚಿಟ್ಟಾದಲ್ಲಿ ರೈತರೊಬ್ಬರು ಕಡಕನಾಥ ಕೋಳಿ ಸಾಕಾಣಿಕೆ ಮಾಡಿದ್ದು, ಕೋಳಿ ಮರಿಗಳನ್ನು ಮಾರಾಟವನ್ನೂ ಮಾಡುತ್ತಿದ್ದಾರೆ -ಡಾ.ವಿದ್ಯಾಸಾಗರ**



ಉದಯವಾಹಿನಿ ಚಿತ್ರ

9 ಲಕ್ಷ ಮೌಲ್ಯದ ಗುಜರಾತಿನ ಗಿರ್ ತಳಿಯ ಎತ್ತು ಕೃಷಿ ಮೇಳದಲ್ಲಿ 9 ಲಕ್ಷ ಮೌಲ್ಯದ ಗುಜರಾತಿನ ಗಿರ್ ತಳಿಯ ಏಳು ವರ್ಷದ ಎತ್ತು ಹಾಗೂ 6 ಲಕ್ಷ ಮೌಲ್ಯದ ಮುರ್ರಾ ತಳಿಯ 6 ವರ್ಷದ ಕೋಣದ ಬೆಲೆ ಕೇಳಿ ಜನ ಹೌಹಾರುತ್ತಿದ್ದಾರೆ. ಬೃಹದಾಕಾರದ ಈ ಜಾನುವಾರುಗಳನ್ನು ಜನ ಬೆರಗುಗಣ್ಣಿನಿಂದ ನೋಡುತ್ತಿದ್ದಾರೆ. ಇವುಗಳ ಬೆಲೆ ಕೇಳಿ ಮೂಗಿನ ಮೇಲೆ ಬೆರಳು ಇಟ್ಟುಕೊಳ್ಳುತ್ತಿದ್ದಾರೆ. ಸಿರಗುಪ್ಪ ತಾಲ್ಲೂಕಿನ ಪ್ರಗತಿಪರ ರೈತ ಶ್ರೀನಿವಾಸರಾಜು ತಮ್ಮ 75 ಎಕರೆ ಜಮೀನಿನಲ್ಲಿ ಕೃಷಿಯ ಜತೆಗೆ ಜಾನುವಾರು ಸಾಕಣೆ ಮಾಡುತ್ತಿದ್ದಾರೆ. ಅಪರೂಪದ ತಳಿಗಳನ್ನು ಸಾಕಾಣಿಕೆ ಮಾಡಿ ತಳಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಎತ್ತು ವಯಸ್ಸಿನಲ್ಲಿ ಚಿಕ್ಕದಾಗಿದ್ದರೂ ಆಗಲೇ ಒಂದು ಟನ್ ಭಾರ ಹೊಂದಿದೆ.ನಮ್ಮಲ್ಲಿ 300 ಆಕಳು ಸಾಕಿದ್ದೇವೆ.

ಜಾನುವಾರುಗಳು ಇರುವ ಕಾರಣ ಕೃಷಿ ಸಮೃದ್ಧವಾಗಿವೆ. ಬೆಲೆಬಾಳುವ ಜಾನುವಾರುಗಳನ್ನೂ ಸಾಕಿದ್ದೇವೆ. ರೈತರಿಗೆ ಹೊಸ ತಳಿಯ ಎತ್ತು ಕೋಣ ಪರಿಚಯಿಸಲು ಬಂದಿದ್ದೇವೆ' ಎಂದು ರೈತ ಶ್ರೀನಿವಾಸರಾಜು ತಿಳಿಸಿದರು.

# ದ್ಯಾಮಣ್ಣ ಮುತ್ಯಾರ ಜಾತ್ರಾ ಮಹೋತ್ಸವ ಹಾಗೂ ಉಚಿತ ಸಾಮೂಹಿಕ ವಿವಾಹ

## ಸಾಮೂಹಿಕ ಮದುವೆಗಳಿಂದ ಅನೇಕ ಬಡವರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ಆಶಾಕಿರಣ: ಶ್ರೀ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿ

• ಉದಯವಾಹಿನಿ ಮುದ್ದೇಬಿಹಾಳ


ಸಾಮೂಹಿಕ ಮದುವೆಗಳಿಂದ ಅನೇಕ ಬಡವರಿಗೆ ಆರ್ಥಿಕವಾಗಿ ಹಿಂದುಳಿದವರಿಗೆ ಆಶಾಕಿರಣವಾಗಿವೆ ಎಂದು ಕುಂಟೋಜಿ ಭಾವೈಕ್ಯಮಠದ ಶ್ರೀ ಚನ್ನವೀರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ರವಿವಾರ ತಾಲ್ಲೂಕಿನ ಶಿರೋಳ ಗ್ರಾಮದಲ್ಲಿ ಕಟ್ಟಿ ಮುತ್ಯಾನೆಂದ ಭಕ್ತರಿಂದ ಕರೆಯಲ್ಪಡುವ ಶ್ರೀ ದ್ಯಾಮಣ್ಣ ಮುತ್ಯಾರ ಜಾತ್ರಾ ಮಹೋತ್ಸವ ಹಾಗೂ ಉಚಿತ ಸಾಮೂಹಿಕ ವಿವಾಹ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಸಾಮೂಹಿಕ ವಿಭಾಗಗಳಲ್ಲಿ ಮದುವೆಯಾಗುವ ವರ ಆಧುನಿಂದ ಎಥೈಚ್ಛ ವರದಕ್ಷಿಣೆ ಪಡೆದು ಸಾಮೂಹಿಕ ವಿವಾಹದಲ್ಲಿ ಮದುವೆಯಾದರೆ ಪ್ರಯೋಜವಿಲ್ಲವೆಂದ ಶ್ರೀಗಳು ಮದುವೆಯಾಗುವ ನೂತನ ದಂಪತಿಗಳಿಗೆ ಪರಸ್ಪರ ನಂಬಿಕೆ ಮತ್ತು ವಿಶ್ವಾಸವಿರಬೇಕು.

ಹೆಂಡತಿ ಯಾದವಳು ಮದುವೆಯಾದ ಎರಡು ವರ್ಷ ಮೊಬೈಲ್ ಬಳಕೆ ಮಾಡದೆ ತನ್ನ ಸಂಸಾರ ತನ್ನ ಗಂಡನ ಮನೆಯ ಭಾಂದವ್ಯ ಪ್ರೇಮಗಳಿಸಿದರೆ ಪತಿಯೇ ಸ್ವತಃ ಮಡದಿಗೆ ಮೊಬೈಲ್ ಉಡುಗೊರೆ ನೀಡುತ್ತಾನೆ ಇಂದು ದಾನ ಧರ್ಮದ ವಿಷಯದಲ್ಲಿ ಶ್ರೀಮಂತರಿಗಿಂತ ಬಡವರೇ ದಾನದಲ್ಲಿ ಮುಂದೆ ಇದ್ದಾರೆಂದರು. ಮಾಜಿ ಜಿಪಂ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಮಾತನಾಡಿ ಸಾಮೂಹಿಕ ವಿವಾಹದಲ್ಲಿ ಹಲವು ವರ್ಷಗಳಿಂದ ಗಿರಿಜಾಬಂಡಿಯವರು ಮಾಂಗಲ್ಯ ಮತ್ತು ಕಾಲುಂಗರವನ್ನು ದಾನವನ್ನು ಮಾಡುತ್ತಿದ್ದಾರೆ ಅಂತೆಯೇ ಬಡ ಪರಿವಾರದ ಸಂಗಣ್ಣ ಹುಲಗಬಾಳವರು ದೇವಾಲಯಕ್ಕೆ ಗೇಟ್ ಅಳವಡಿಕೆ ಮಾಡಿದ್ದು ಶ್ಲಾಘನೀಯ ವೆಂದು ಎಲ್ಲಾ ದಾನಿಗಳನ್ನು ನೆನದರು.





ಉದಯವಾಹಿನಿ ಚಿತ್ರ

**ಸಾಮೂಹಿಕ ಮದುವೆಗಳು ಬಡವರಿಗೆ ಆಶಾಕಿರಣ**

ನಿಡಗುಂದಿ ರುದ್ರೇಶ್ವರ ಸಂಸ್ಥಾನಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಪಡೇಕನೂರ ದಾಸೋಹಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಆಶೀರ್ವಚನ ನೀಡಿ ನೂತನ ದಂಪತಿಗಳಿಗೆ ಹಾರೈಸಿದರು . ಜಾತ್ರೆಯ ಉಚಿತ ಸಾಮೂಹಿಕ ವಿವಾಹದಲ್ಲಿ ಆರು ನವದಂಪತಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಪ್ರಾಸ್ತಾವಿಕವಾಗಿ ಯುವ ಮುಖಂಡ ರಮೇಶ ಕಂಠಿ ಮಾತನಾಡಿ ಜಾತ್ರಾಮಹೋತ್ಸವ ಹಿನ್ನೆಲೆ ಮತ್ತು ಸಾಮೂಹಿಕ ವಿವಾಹದ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ವಣಕಿಹಾಳ ಮಾತೆ ಮಹೇಶ್ವರಿ ದೇವಸ್ಥಾನದ ಮಹೇಶ ಮುತ್ಯಾ, ಕುಂಟೋಜಿ ಬಳ್ಳಾರಿ ಶ್ರೀಗಳು ಮುದ್ದೇಬಿಹಾಳ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಡಿ ಬಿ ಮುದೂರ, ಪಿ.ಎಸ್ ಕನಸಕ್ಕಿ ತಿಪ್ಪಣ್ಣ ದೊಡಮನಿ, ಶಂಕರಗೌಡ ಪಾಟೀಲ್, ಅರವಿಂದ ಯಳಮೇಲಿ, ಕವಡಿಮಟ್ಟಿ ಗ್ರಾಪಂ ಅಧ್ಯಕ್ಷೆ ಶಕುಂತಲಾ ಹಂಡರಗಲ್ಲ, ಉಪಾಧ್ಯಕ್ಷೆ ಶ್ರೀದೇವಿ ಬಿರಾದಾರ, ಶಿರೋಳ ಗ್ರಾಪಂ ಸದಸ್ಯರಾದ ದ್ಯಾವಪ್ಪ ಹುಣಶ್ಯಾಳ, ಲಕ್ಷ್ಮೀ ಕುರಿ, ನೀಲಮ್ಮ ಚಲವಾದಿ ಜಾತ್ರೆಯ ರೂವಾರಿ ರಾಮಣ್ಣ ರಾಜನಾಳ ಸೇರಿದಂತೆ ಅನೇಕ ಗಣ್ಯರು ಅತಿಥಿಗಳು ವಿವಿಧ ಗ್ರಾಮಗಳ ಸದ್ಭಕ್ತರು ಭಾಗವಹಿಸಿದ್ದರು .

ನಾಗರಾಜ ಚಲವಾದಿ ಸ್ವಾಗತಿಸಿದರು ಗೋಪಾಲ ಹೋಗಾರ ನಿರೂಪಿಸಿ ವಂದಿಸಿದರು.ದ್ಯಾಮಣ್ಣ ಜಾತ್ರೆಯ ಅಂಗವಾಗಿ ಕರ್ತುಗದ್ದುಗೆಗೆ ವಿಶೇಷ ಅಭಿಷೇಕ ಪೂಜೆ ಪುರಸ್ಕಾರ ಮತ್ತು ರಾತ್ರಿ ಭಜನೆ ಡೊಳ್ಳಿನ ಪದಗಳು ಹಾಗೂ ಪಲ್ಲಕ್ಕಿ ಮೆರವಣಿಗೆ ಕುಂಭಮೆರವಣಿಗೆ ಮಾಡಲಾಯಿತು.

**ಗಿರಿಜಾ ಬಂಡಿ ಚಿನ್ನದ ತಾಳಿ, ಬೆಳ್ಳಿ ಕಾಲುಂಗುರ ಸೇವೆ**

**ಸಂಗಣ್ಣ ಹುಲಗಬಾಳ ದೇವಸ್ಥಾನಕ್ಕೆ ನೂತನ ಗೇಟ್ ಅಳವಡಿಸಿದರೆ, ಹಣಮಂತ ನಾವದಗಿ ವಧುವರರಿಗೆ ಬಟ್ಟೆಗಳನ್ನು, ಗಂಗಾಧರ ಹೆಬ್ಬಾಳ, ಮುತ್ತು ಹುಣಶ್ಯಾಳ ಪೆಂಡಾಲ್ ,ಗಿರಿಜಾ ಬಂಡಿ ಚಿನ್ನದ ತಾಳಿ ಬೆಳ್ಳಿ ಕಾಲುಂಗುರ, ಗುರುರಾಜ ಶಿರೋಳಕರ, ಮಹಾಂತೇಶ ಮೋಟಗಿ, ಎಂ ಬಿ ಬಾಗೇವಾಡಿ ದೇವಾಲಯಕ್ಕೆ ಟೈಲ್ಸ್ ,ಮುತ್ತಣ್ಣ ಕುರಿ ಬಾಗಿಲು ಸೇವೆಯನ್ನು ಮಾಡಿದ್ದಾರೆ.**

# ಮಿನಿ ನ್ಯೂಸ್

## ಬಾರ್‌ಗೆ ನುಗ್ಗಿದ ಬಿಆರ್‌ಟಿಸಿ ಬಸ್ ಹಲವು ಪ್ರಯಾಣಿಕರಿಗೆ ಗಾಯ

• ಉದಯವಾಹಿನಿ ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಭಾರಿ ಅನಾಹುತ ಒಂದು ತಪ್ಪಿದ್ದು ನಿಯಂತ್ರಣ ಕಳೆದುಕೊಂಡ ಬಿಆರ್‌ಟಿಸಿ ಬಸ್ ಒಂದು, ರಸ್ತೆ ಬಿಟ್ಟು ನೇರವಾಗಿ ಬಾರ್ ಗೆ ನುಗ್ಗಿದೆ ಈ ವೇಳೆ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ ಹಲವು ಪ್ರಯಾಣಿಕರಿಗೆ ಗಂಭೀರವಾದ ಗಾಯಗಳಾಗಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಹೌದು ಹುಬ್ಬಳ್ಳಿಯಲ್ಲಿ ನೇರವಾಗಿ ಬಿಆರ್ ಟಿಸಿ ಬಸ್ ಒಂದು ಬಾರ್ ಗೆ ನುಗ್ಗಿದೆ. ಹುಬ್ಬಳ್ಳಿಯ ಬೈರೀದೇವರಕೊಪ್ಪ ಬಳಿ ಈ ಒಂದು ಅಪಘಾತ ಸಂಭವಿಸಿದೆ. ಏಕಾಏಕಿ ಚಿಗರಿ ಬಸ್ ಬಾರಿಗೆ ಡಿಕ್ಕಿ ಹೊಡೆದಿದೆ. ಬಸ್ ನಲ್ಲಿದ್ದ ಹಲವು ಪ್ರಯಾಣಿಕರಿಗೆ ಗಂಭೀರವಾದ ಗಾಯಗಳಾಗಿವೆ. ಕೂಡಲೇ ಅವರನ್ನು ಬಸ್ಸಿಂದ ಕೆಳಗೆ ಇಳಿಸಿ ಅಲ್ಲಿಯ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು.

## ಮದುವೆ ಮಂಟಪಕ್ಕೆ ನುಗ್ಗಿ, ನೆಕ್ಲೆಸ್ ಎಗರಿಸಿ ಪರಾರಿಯಾದ ಖತರ್ನಾಕ್ ಕಳ್ಳ

• ಉದಯವಾಹಿನಿ ಬಾಗಲಕೋಟೆ

ಕಲ್ಯಾಣ ಮಂಟಪದಲ್ಲಿ ಮದುವೆಯ ಸಂಬಂಧಿಕರೆಲ್ಲರೂ ಸಂತೋಷದಿಂದ ಇದ್ದರು. ಆದರೆ ಈ ವೇಳೆ ಕಳ್ಳ ಬೆಕ್ಕಿನಂತೆ ಬಂದ ಖತರ್ನಾಕ್ ಕಳ್ಳನೊಬ್ಬ ಮದುವೆ ಮಂಟಪಕ್ಕೆ ನುಗ್ಗಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ನೆಕ್ಲೆಸ್ ಅನ್ನು ಕದ್ದು ಪರಾರಿಯಾಗಿರುವ ಘಟನೆ ಬಾಗಲಕೋಟೆ ಜಿಲ್ಲೆಯಲ್ಲಿ ನಡೆದಿದೆ. ಹೌದು ಕಲ್ಯಾಣ ಮಂಟಪದಲ್ಲಿ ಕಳ್ಳನೊಬ್ಬ ಚಿನ್ನದ ನೆಕ್ಲೆಸ್ ಎಗರಿಸಿ ಪರಾರಿ ಆಗಿರುವ ಘಟನೆ ಬಾಗಲಕೋಟೆಯಲ್ಲಿ ನಡೆದಿದೆ. ಮದುವೆ ಸಂಭ್ರಮದಲ್ಲಿದ್ದ ಕುಟುಂಬಕ್ಕೆ ಇದೀಗ ಬಿಗ್ ಶಾಕ್ ಎದುರಾಗಿದೆ. ಕಳ್ಳ ಬೆಕ್ಕಿನಂತೆ ಮದುವೆ ಮಂಟಪಕ್ಕೆ ನುಗ್ಗಿದ ಖತರ್ನಾಕ್ ಕಳ್ಳನೊಬ್ಬ ರಾಜಾರೋಷವಾಗಿ ಕಲ್ಯಾಣ ಮಂಟಪದಲ್ಲಿ ಓಡಾಟ ನಡೆಸಿದ್ದಾನೆ. ರಾಜಾರೋಷವಾಗಿ ಕಲ್ಯಾಣ ಮಂಟಪದಲ್ಲಿ ಓಡಾಡಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ವೇಳೆ ಯಾವುದೇ ಭಯವಿಲ್ಲದೆ ಕಲ್ಯಾಣ ಮಂಟಪದಲ್ಲಿರುವ ರೂಮ್ ಗೆ ಹೋಗಿ ನೆಕ್ಲೆಸ್ ಕಳ್ಳತನ ಮಾಡಿದ್ದಾನೆ ಎನ್ನಲಾಗಿದೆ. ಈ ಕುರಿತಂತೆ ಸ್ಥಳೀಯ ಪೊಲೀಸ್ ಠಾಣೆಗೆ ಮದುವೆ ಸಂಬಂಧಿಕರು ದೂರು ನೀಡಿದ್ದಾರೆ ದೂರು ದಾಖಲಿಸಿಕೊಂಡು ಪೊಲೀಸರು ಕಳ್ಳನ ಪತ್ತೆಗೆ ಬಲೆ ಬೀಸಿದ್ದಾರೆ.

## ಪರಶುರಾಂಪುರ ತಾಲ್ಲೂಕು ಮಾಡಲು ಒತ್ತಾಯಿಸಿ ಪ್ರತಿಭಟನೆ

• ಉದಯವಾಹಿನಿ ಪರಶುರಾಂಪುರ

ಮೂರು ದಶಕಗಳಿಂದ ಪರಶುರಾಂಪುರ ಹೋಬಳಿ ಕೇಂದ್ರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವಂತೆ ವಿವಿಧ ಸಂಘಟನೆಗಳು ಒತ್ತಾಯ ಮಾಡಿದ್ದರೂ ಸರ್ಕಾರಗಳು ಗಮನಹರಿಸುತ್ತಿಲ್ಲ ಎಂದು ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ತಾಲ್ಲೂಕು ಕೇಂದ್ರವಾಗಿ ಘೋಷಿಸಬೇಕು. ಈ ಭಾಗದ ಶಾಸಕರು ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ರೈತ ಸಂಘದ ಸದಸ್ಯರು ಆಗ್ರಹಿಸಿದರು. ಪರಶುರಾಂಪುರವು ತಾಲ್ಲೂಕು ಕೇಂದ್ರವಾಗುವ ಎಲ್ಲಾ ಅರ್ಹತೆ ಹೊಂದಿದೆ ಎಂದು ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಚಿಕ್ಕಣ್ಣ ಹೇಳಿದರು. ತಾಲ್ಲೂಕು ಘಟಕದ ಉಪಾಧ್ಯಕ್ಷ ಜಂಪಣ್ಣ, ಕಾರ್ಯದರ್ಶಿ ಪ್ರಕಾಶ, ಹೋಬಳಿ ಅಧ್ಯಕ್ಷ ನವೀನ್ ಗೌಡ, ಪದಾಧಿಕಾರಿಗಳಾದ ಪರಮೇಶ್ವರಪ್ಪ, ತಿಮ್ಮಣ್ಣ, ಶಿವು, ಖಾದರ್ ಬಾಷಾ, ಹನುಮಂತರಾಯ ಮುಂತಾದವರು ಇದ್ದರು.

## 7 ಕೋಟಿ ಮೌಲ್ಯದ 210 ಟನ್ ಅಡಿಕೆ ವಶ

• ಉದಯವಾಹಿನಿ ಚಿತ್ರದುರ್ಗ

ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ಕೇಂದ್ರ ಜಿಎಸ್‌ಟಿ ಅಧಿಕಾರಿಗಳು 7 ಕೋಟಿ ಮೌಲ್ಯದ 210 ಟನ್ ಅಡಿಕೆ ವಶಕ್ಕೆ ಪಡೆದಿದ್ದಾರೆ. ಅಡಿಕೆ ಹೊತ್ತ 7 ಲಾರಿಗಳು ಶಿವಮೊಗ್ಗದಿಂದ ಹೊಸಪೇಟೆ ಕಡೆಗೆ ಸಾಗುತ್ತಿದ್ದವು. ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಿಎಸ್‌ಟಿ ಅಧಿಕಾರಿ ಹಮೀದ್ ಸಿದ್ದಿಕಿ ನೇತೃತ್ವದ ತಂಡ ಲಾರಿಗಳನ್ನು ತಡೆದು ಪರಿಶೀಲನೆ ನಡೆಸಿತು. ಜಿಎಸ್‌ಟಿ ಪಾವತಿ ಸಂಬಂಧ ಸಮರ್ಪಕವಾದ ದಾಖಲೆ ಸಲ್ಲಿಸದ ಕಾರಣ ಲಾರಿಗಳನ್ನು ವಶಕ್ಕೆ ಪಡೆಯಲಾಗಿದೆ. ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಲಾರಿಗಳನ್ನು ನಿಲ್ಲಿಸಲಾಗಿದೆ. ಜಿಎಸ್ ಅಧಿಕಾರಿಗಳು ಪರಿಶೀಲನೆ ಮುಂದುವರಿಸಿದ್ದಾರೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

## ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯ: ಗೃಹಿಣಿ ಬರ್ಬರ ಹತ್ಯೆ ಮಾಡಿದ ಪ್ರಿಯಕರ

• ಉದಯವಾಹಿನಿ ಬಾಳೆಹೊನ್ನೂರು

'ಇನ್‌ಸ್ಟಾಗ್ರಾಮ್'ನಲ್ಲಿ ಪರಿಚಯವಾಗಿದ್ದ ಗೃಹಿಣಿಯನ್ನು ಮಕ್ಕಳ ಎದುರೇ ಪ್ರಿಯಕರ ಚಾಕುವಿನಿಂದ ಇರಿದು, ಕೆರೆಗೆ ಬಿಸಾಡಿ ಬರ್ಬರ ಹತ್ಯೆ ಮಾಡಿರುವ ಘಟನೆ ಸಮೀಪದ ಕಿಚ್ಚಬ್ಬಿಯಲ್ಲಿ ಮಧ್ಯಾಹ್ನ ನಡೆದಿದೆ. ಇದೇ ಗ್ರಾಮದ ರಾಜೇಶ್ ಅವರ ಪತ್ನಿ ತೃಪ್ತಿ (26) ಕೊಲೆಯಾದವರು. ಆರೋಪಿ ಚಿರಂಜೀವಿಯನ್ನು ಪೊಲೀಸರು ಸಂಜೆ ವೇಳೆಗೆ ಬಂಧಿಸಿದ್ದಾರೆ. ಕೊಪ್ಪ ತಾಲ್ಲೂಕಿನ ಹೇರೂರು ಸಮೀಪದ ಸ್ಥಿರೂರಿನ ತೃಪ್ತಿಯನ್ನು ಕಿಚ್ಚಬ್ಬಿಯ ರಾಜೇಶ್ ವಿವಾಹವಾಗಿದ್ದರು. ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಚನ್ನಗಿರಿಯ ಚಿರಂಜೀವಿ ಬೆಂಗಳೂರಿನಲ್ಲಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದಾನೆ.

ಕೆಲ ತಿಂಗಳ ಹಿಂದೆ ಇನ್‌ಸ್ಟಾಗ್ರಾಮ್‌ನಲ್ಲಿ ತೃಪ್ತಿಯ ಪರಿಚಯವಾಗಿ, ಅದು ಪ್ರೀತಿಗೆ ತಿರುಗಿತ್ತು. ತೃಪ್ತಿ ಮಕ್ಕಳನ್ನು ಬಿಟ್ಟು ತಿಂಗಳ ಹಿಂದೆ ಚಿರಂಜೀವಿಯೊಂದಿಗೆ ನಾಪತ್ತೆಯಾಗಿದ್ದರು. ಪತಿ ರಾಜೇಶ್ ಅವರು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ತೃಪ್ತಿ ಮತ್ತು ಚಿರಂಜೀವಿಯನ್ನು ವಿಜಯಪುರದಲ್ಲಿ ಪೊಲೀಸರು ಪತ್ತೆ ಹಚ್ಚಿ ಠಾಣೆಗೆ ಕರೆತಂದಿದ್ದರು. ಪೊಲೀಸರು ಮನವೊಲಿಸಿ ಪತಿಯೊಂದಿಗೆ ತೃಪ್ತಿಯನ್ನು ಕಳುಹಿಸಿದ್ದರು. ಮೊಬೈಲ್ ದೂರವಾಣಿ ಸೇರಿ ಎಲ್ಲಾ ಸಂಪರ್ಕವನ್ನೂ ಕಡಿತಗೊಳಿಸಿದ್ದರು.

ರಾಜೇಶ್ ಅವರು ಕೆಲಸಕ್ಕೆ ಹೋಗಿದ್ದಾಗ ಮನೆಗೆ ಬಂದ ಚಿರಂಜೀವಿ, ಎರಡೂವರೆ ವರ್ಷದ ಮಗಳ ಎದುರಿಗೇ ತೃಪ್ತಿಗೆ ಇರಿದಿದ್ದಾನೆ. ಆಕೆ ಕೂಗಿಕೊಂಡರೂ ಬಿಡದೆ ಸುಮಾರು 500 ಮೀಟರ್ ದೂರ ಕಾಫಿ ತೋಟದಲ್ಲಿ ಎಳೆದೊಯ್ದು ಕೆರೆಯಲ್ಲಿ ಎಸೆದು ಪರಾರಿಯಾಗಿದ್ದಾನೆ. ಎರಡು ತಿಂಗಳಿಂದ ತೃಪ್ತಿ ಸಂಪರ್ಕಕ್ಕೆ ಸಿಗದಿದ್ದರಿಂದ ಕುಪಿತಗೊಂಡಿದ್ದ ಚಿರಂಜೀವಿ ಈ ಕೊಲೆ ಮಾಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

**ವೃಷಭ** ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ.

**ಮಿಥುನ** ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಕರ್ಕಾಟಕ** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು.

**ಸಿಂಹ** ಹಣಕಾಸಿನ ವಿಷಯದ ಬಗ್ಗೆ ನೀವು ಕುಟುಂಬದ ಎಲ್ಲ ಸದಸ್ಯರಿಗೆ ಸ್ಪಷ್ಟವಾಗಿರಲು ಸಲಹೆ ನೀಡಬೇಕು. ನಿಮ್ಮ ಪ್ರೇಮ ಪ್ರಕರಣದ ಬಗ್ಗೆ ಜೋರಾಗಿ ಹೇಳಿಕೊಳ್ಳಬೇಡಿ.

**ಕನ್ಯಾ** ಪತ್ನಿ ನೀವು ಹುರಿದುಂಬಿಸಬಹುದು. ಸಂಬಂಧಿಕರಿಂದ ಹಣದ ಸಾಲವನ್ನು ತೆಗೆದುಕೊಂಡಿರುವ ಜನರು, ಯಾವುದೇ ಪರಿಸ್ಥಿತಿಯಲ್ಲಿಯೂ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ.

**ತುಲಾ** ನಿಮ್ಮ ಮಾನಸಿಕ ಒತ್ತಡವನ್ನು ಹೊಡೆದೋಡಿಸಲು ಆಧ್ಯಾತ್ಮಿಕತೆ ಒಂದು ಅತ್ಯುತ್ತಮ ಆಯ್ಕೆಯಾಗಿರುವುದರಿಂದ ನೀವು ಅದರ ಸಹಾಯ ಪಡೆಯಲು ಈಗ ಒಳ್ಳೆಯ ಸಮಯ.

**ವೃಶ್ಚಿಕ** ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಆತಂಕಗಳನ್ನು ಉಂಟುಮಾಡುತ್ತಾರೆ.

**ಧನಸ್ಸು** ವ್ಯಾಯಾಮದ ಮೂಲಕ ನಿಮ್ಮ ತೂಕವನ್ನು ನಿಯಂತ್ರಿಸಬಹುದು. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಮಕರ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದ್ದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಕುಂಭ** ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ.

**ಮೀನ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

# ಭೂಗತ ಪಾತಕಿ ಬನ್ನಂಜೆ ರಾಜನ ಸಹಚರ ಅನಾರೋಗ್ಯದಿಂದ ಸಾವು

• ಉದಯವಾಹಿನಿ, ಬೆಳಗಾವಿ

ಭೂಗತ ಪಾತಕಿ ಬನ್ನಂಜೆರಾಜನ ಆಪ್ತನೆಂದು ಗುರುತಿಸಿಕೊಳ್ಳಲಾದ ಕೆ.ಎಂ.ಇಸಾಯಿಲ್ ಬೆಳಗಾವಿಯ ಜಿಲ್ಲಾಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ.ಅಂಕೋಲದ ಉದ್ಯಮಿ ಆರ್.ಎನ್.ನಾಯಕ್ ಅವರನ್ನು ಗುಂಡಿಟ್ಟು ಹತ್ಯೆ ಮಾಡಿದ ಪ್ರಕರಣದಲ್ಲಿ ಕೆ.ಎಂ. ಇಸಾಯಿಲ್ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದು, ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಬಂಧಿಖೈದಿಯಾಗಿದ್ದ.ಹೃದ್ರೋಗದ ಸಮಸ್ಯೆಯಿಂದ ಬಳಲುತ್ತಿದ್ದ ಆತ ಜೈಲಿನಲ್ಲೇ ಅಸ್ವಸ್ಥಗೊಂಡಿದ್ದು, ಪ್ರಾಥಮಿಕ ಚಿಕಿತ್ಸೆ ಬಳಿಕ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು.

ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಆರ್.ಎನ್.ನಾಯಕ್ ಅವರನ್ನು 2013 ರಲ್ಲಿ ಕೊಲೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಗ್ಯಾಂಗ್‌ಸ್ಟಾರ್ ರಾಜೇಂದ್ರಕುಮಾರ್ ಅಲಿಯಾಸ್ ಬನ್ನಂಜೆರಾಜ ಮತ್ತು ಆತನ ಇತರ 8 ಸಹಚರರಿಗೆ ಬೆಳಗಾವಿಯ ಜಿಲ್ಲಾ ನ್ಯಾಯಾಲಯ 2022 ರ ಏಪ್ರಿಲ್ 5 ರಂದು ಜೀವಾವಧಿ ಶಿಕ್ಷೆ ಘೋಷಿಸಿತ್ತು.ಸುಲಿಗೆ, ಕೊಲೆ, ಬೆದರಿಕೆ ಸೇರಿದಂತೆ ಹಲವು ಅಪರಾಧಗಳಲ್ಲಿ ಬನ್ನಂಜೆರಾಜ ಆರೋಪಿಯಾಗಿದ್ದು, ಕೆ.ಎಂ.ಇಸಾಯಿಲ್ ಆತನ ಸಹಚರನಾಗಿ ಹಲವು ಕೃತ್ಯಗಳಲ್ಲಿ ಭಾಗಿಯಾಗಿದ್ದ.ಆರ್.ಎನ್.ನಾಯಕ್ ಅವರ ಕೊಲೆ ಪ್ರಕರಣ ರಾಜ್ಯವನ್ನೇ ಬೆಚ್ಚಿಬೀಳಿಸಿತ್ತಲ್ಲದೆ, ದೇಶದಾದ್ಯಂತ ಭಾರೀ ಚರ್ಚೆಗೆ ಗ್ರಾಸವಾಗಿತ್ತು.

# ಕ್ಯಾಂಟರ್ ಚಾಲಕ ದುರ್ಮರಣ

• ಉದಯವಾಹಿನಿ ಶಿವಮೊಗ್ಗ

ಶಿವಮೊಗ್ಗದಲ್ಲಿ ಘೋರ ದುರಂತ ಒಂದು ಸಂಭವಿಸಿದ್ದು ಚಲಿಸುತ್ತಿದ್ದ ಟ್ಯಾಂಕರ್‌ಗೆ ವಿದ್ಯುತ್ ತಂತಿ ತಗುಲಿ ಕ್ಯಾಂಟರ್ ಚಾಲಕ ಮೃತಪಟ್ಟ ಘಟನೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸುತ್ತುಕೋಟೆ ಗ್ರಾಮದಲ್ಲಿ ನಡೆದಿದೆ.ಮೃತ ಕ್ಯಾಂಟರ್ ಚಾಲಕನನ್ನು ಶಿರಾಳಕೊಪ್ಪದ ಮಠದಗದೆ ನಿವಾಸಿ ಮೊಹಮ್ಮದ್ ಈಶಾಮ್ (32) ಎಂದು ತಿಳಿದುಬಂದಿದೆ.

ಡಿ.5ರಂದು ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಿಂದ ಸೊರಬ ತಾಲ್ಲೂಕಿನ ಸುತ್ತಕೋಟೆಗೆ ತೆರಳುವ ರಸ್ತೆ ಮಾರ್ಗದಲ್ಲಿ ಸಾಸರಹಳ್ಳಿ ಸಮೀಪ ಜೋತು ಬಿದ್ದ ವಿದ್ಯುತ್ ತಂತಿ ಕ್ಯಾಂಟರ್‌ಗೆ ತಗುಲಿದೆ. ಈ ಒಂದು ದುರ್ಘಟನೆಗೆ ಮೆಸ್ಕಾಂ ಸಿಬ್ಬಂದಿ ಮತ್ತು ಅಧಿಕಾರಿಗಳೇ ಕಾರಣ ಎಂದು ಗ್ರಾಮದ ಜನರು ಮೆಸ್ಕಾಂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸೊರಬ ಪೊಲೀಸ್ ಠಾಣೆಯಲ್ಲಿ ಮೃತ ಮೊಹಮ್ಮದ್ ಈಶಮ್ ಅವರ ತಂದೆ ರಿಯಾಜ್ ಮೆಸ್ಕಾಂ ವಿರುದ್ಧ ದೂರು ನೀಡಿದ್ದಾರೆ.

# ಗದಗದಲ್ಲಿ 3 ವರ್ಷದ ಬಾಲಕನ ಮೇಲೆ ಬೀದಿ ನಾಯಿ ಡೆಡ್ಲಿ ಅಟ್ಯಾಕ್: ಗಂಭೀರ ಗಾಯ

• ಉದಯವಾಹಿನಿ ಗದಗ

ಇತ್ತೀಚೆಗೆ ಮಕ್ಕಳ ಮೇಲೆ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿದ್ದು, ಬೀದಿ ನಾಯಿಗಳ ನಿಯಂತ್ರಣಕ್ಕೆ ಎಷ್ಟೇ ಪ್ರಯತ್ನಿಸಿದರು ಕೂಡ ಅವುಗಳ ಕಾಟ ತಪ್ಪಿಲ್ಲ ಇದೀಗ ಗದಗ ಜಿಲ್ಲೆಯ ಮುಂಡರಗಿ ಪಟ್ಟಣದಲ್ಲಿ ಆಟವಾಡುತ್ತಿದ್ದ ಬಾಲಕನ ಮೇಲೆ ಬೀದಿ ನಾಯಿ ದಾಳಿ ಮಾಡಿದ್ದು ಬಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ. ಹೌದು ಗದಗ ಜಿಲ್ಲೆಯ ಮುಂಡರಗಿ ಪಟ್ಟಣದ ಅಂಬಾಭವಾನಿ ನಗರದಲ್ಲಿ ಈ ಒಂದು ಘಟನೆ ನಡೆದಿದ್ದು, 3 ವರ್ಷದ ಬಾಲಕನ ಮೇಲೆ ಬೀದಿನಾಯಿ ಡೆಡ್ಲಿ ಅಟ್ಯಾಕ್ ಮಾಡಿದೆ.

ಬಾಲಕನ ತುಟಿ, ಹಣೆ ಹಾಗೂ ಗಲ್ಲವನ್ನು ಬೀದಿ ನಾಯಿ ಕಚ್ಚಿ ತಿಂದಿದೆ. ರುದ್ರಪ್ರಿಯ ದೊಡ್ಡಕಾಶಿ (3) ಎನ್ನುವ ಬಾಲಕನಿಗೆ ಗಂಭೀರವಾದ ಗಾಯಗಳಾಗಿವೆ, ಆಟವಾಡುತ್ತಿದ್ದ ಬಾಲಕನ ಮೇಲೆ ದಿಢೀರ್ ಆಗಿ ಬೀದಿನಾಯಿ ಎಗರಿದೆ. ಸದ್ಯ ಬಾಲಕನಿಗೆ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬೀಗತನದ ಹೋಳಿಗೆ ಊಟಕ್ಕೆ ಬಾಲಕನ ಕುಟುಂಬಸ್ಥರು ಬಂದಿದ್ದರು. ಈ ವೇಳೆ ಈ ಒಂದು ಘಟನೆ ನಡೆದಿದೆ.

# ಅತಿಯಾದ ಟಿಪ್ಪರ್ ಓಡಾಟ: ಹದಗೆಟ್ಟ ರಸ್ತೆಗಳು, ಜನರ ಜೀವಕ್ಕಿಲ್ಲ ಸುರಕ್ಷತೆ

## ತಾಲ್ಲೂಕಿನಲ್ಲಿ ಮೂರು ದೊಡ್ಡ ಕಾರ್ಖಾನೆ ಮೂರ್ನಾಲ್ಕು ಸಣ್ಣ ಕಾರ್ಖಾನೆಗಳಿವೆ ಆದರೆ ಕ್ಷೇತ್ರದ ಅಭಿವೃದ್ಧಿ ಮಾತ್ರ ಶೂನ್ಯ

**ಉದಯವಾಹಿನಿ ವಿಶೇಷ ವರದಿ**

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನಲ್ಲಿ ಮೂರು ದೊಡ್ಡ ಕಾರ್ಖಾನೆ ಮೂರ್ನಾಲ್ಕು ಸಣ್ಣ ಕಾರ್ಖಾನೆಗಳಿವೆ ಆದರೆ ಕ್ಷೇತ್ರದ ಅಭಿವೃದ್ಧಿ ಮಾತ್ರ ಶೂನ್ಯವಾಗಿದ್ದು ಅಭಿವೃದ್ಧಿಗಿಂತ ಸಾರ್ವಜನಿಕರು ಭಯದಲ್ಲಿ ಜೀವನ ಕಳೆಯುತ್ತಿದ್ದಾರೆ ಎಂಬುವುದೆ ಜನರ ಪ್ರೇಶ್ನೆಯಾಗಿದೆ.

**ಸ್ಥಳೀಯರಿಗೆ ಉದ್ಯೋಗ ವಂಚನೆ**

ತಾಲ್ಲೂಕಿನಲ್ಲಿ ಚೆಟ್ಟಿನಾಡು ಸಿಮೇಂಟ್ ಕಾರ್ಖಾನೆ, ಕಲಬುರ್ಗಿ ಸಿಮೇಂಟ್ ಕಾರ್ಖಾನೆ, ಸಿದ್ಧಸಿರಿ ಕಾರ್ಖಾನೆ,ಮೆಟ್ರಿಕ್ ಆಗ್ರೋ ಪ್ರಾವೆಟ್ ಲಿಮಿಟೆಡ್, ಸುಲೇಪೇಟ ಸೋಲಾರ್ ಪ್ಲಾಂಟ್, ಸೇರಿದಂತೆ ವಿವಿಧ ಸಣ್ಣ ದೊಡ್ಡ ಕಾರ್ಖಾನೆಗಳು ತಲೆ ಎತ್ತಿವೆ ಆದರೆ ಚಿಂಚೋಳಿ ತಾಲ್ಲೂಕಾ ಅಭಿವೃದ್ಧಿ ಪಥದತ್ತ ಸಾಗಬೇಕು ಆದರೆ ಸಮಸ್ಯೆಗಳ ಕೂಡ ಹೆಚ್ಚಾಗುತ್ತಿರುವುದು ನೋಡಿದರೆ ಸಾರ್ವಜನಿಕರು ಭಯದಲ್ಲಿ ಜೀವನ ಕಳೆಯುವ ಪರಿಸ್ಥಿತಿ ಎದುರಾಗಿದೆ.

**ಅದು ಹೇಗೆ ? :-** 1) ಚೆಟ್ಟಿನಾಡು ಸಿಮೇಂಟ್ ಕಾರ್ಖಾನೆ ಮತ್ತು ಕಲಬುರ್ಗಿ ಸಿಮೆಂಟ್ ಕಾರ್ಖಾನೆ ಪ್ರಾರಂಭವಾಗಿ ಅನೇಕ ವರ್ಷಗಳು ಕಳೆದರೂ ಇಲ್ಲಿಯವರೆಗೆ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡದೆ ವಂಚನೆ ಮಾಡುತ್ತಿದ್ದಾರೆ ಎಂಬ ಆರೋಪ ಒಂದು ಕಡೆಯಾದರೆ ಮತ್ತೊಂದೆಡೆ ಕಾರ್ಖಾನೆಯಲ್ಲಿ ಕಲ್ಲುಗಣಿಗಾರಿಕೆ ನಡೆಸುತ್ತಿರುವುದರಿಂದ ಕಲ್ಲು ಸ್ಪೋಟ ಮಾಡುತ್ತಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳ ಮನೆಗಳ ಗೋಡೆಗಳು ಬೀರುಕು ಕಾಣಿಸಿ ಜನರ ಜೀವನ ಭಯದಲ್ಲಿ ಜೀವಿಸುತ್ತಿದ್ದಾರೆ, ಹಾಗೆಯೇ ಅದರ ಕಲುಷಿತ ಹೊಗೆ, ಧೂಳು, ಕರ್ಕಶ ಶಬ್ದ, ಇತರೆದಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ.

**ರಸ್ತೆಗಳು ಹಾಳು:-** ಎರಡು ಸಿಮೇಂಟ್ ಕಾರ್ಖಾನೆಗಳಿಗೆ ಹೊರಗಿನಿಂದ ಬರುವ ಕೇಂಪು ಮಣ್ಣು ಟಿಪ್ಪರ್ ಗಳು ಅತಿಯಾದ ಭಾರ ಯಮಸ್ವರೋಪಿಯಂತೆ ತುಂಬಿಕೊಂಡು ಡಾಂಬರಿಕರಣ ರಸ್ತೆಯಲ್ಲಿ ಸಾಗುತ್ತವೆ ಇದರಿಂದ ಕುಂಚಾವರಂ ಮತ್ತು ನಿಡಗುಂದಾ ಎರಡು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಹಾಗೂ ಇತರೆ ಕಡೆ ಎಲ್ಲಾ ರಸ್ತೆ ಗಳು ತೆಗ್ಗುಗುಂಡಿಗಳು ಬಿಳುತ್ತಿದ್ದು ಹಾಳಾಗುತ್ತಿವೆ ಆದರೆ ಆರ್.ಟಿ.ಓ ಅಧಿಕಾರಿಗಳು ಮಾತ್ರ ಮೌನಕ್ಕೆ ಜಾರಿದ್ದಾರೆ,ಇದರಿಂದ ಕೇಂಪುಮಣ್ಣು ಅತಿಯಾದ ಭಾರದ ಟಿಪ್ಪರ್ ಗಳು ಸಾಗುತ್ತಿರುವುದು ನೋಡಿದರೆ ಅತಿವೇಗ ಅಜಾಗರೂಕತೆಯಿಂದ ಓಡಾಡುತ್ತಿದ್ದು ಸಾರ್ವಜನಿಕರಿಗೆ ಕಿರಿಕಿರಿ ಜೋತೆ ಪ್ರಾಣಭೀತಿಯಲ್ಲಿ ವಾಹನ ಸವಾರರು ಸಂಚಾರ ಮಾಡುತ್ತಿದ್ದಾರೆ.

**ಸಿದ್ಧಸಿರಿ ಎಥೆನಾಲ್ ಪವ್ವರ ಕಾರ್ಖಾನೆ:-** ಸದ್ಯ ರಾಜಕೀಯ ಕೆಸರಾಟದಲ್ಲಿ ಬಂದ್ ಆಗಿದ್ದು ಇದು ರೈತರ ಕಬ್ಬು ಖರೀದಿಸಿ ರೈತರಿಗೆ ಸಮಯಕ್ಕೆ ಹಣ ಸಂದಾಯ ಮಾಡುವಲ್ಲಿ ಮಾತು ತಪ್ಪಿಲ್ಲ ಆದರೆ ರೈತರು ಕಬ್ಬು ಬೆಳೆಗಾರರು ಜಿಲ್ಲಾಧಿಕಾರಿಗಳು ಸೂಚಿಸಿದಂತೆ ಬೇರೆಡೆ ಕಾರ್ಖಾನೆಗಳಿಗೆ ಕಬ್ಬು ರವಾನೆ ಮಾಡುತ್ತಿದ್ದಾರೆ,ಸಿದ್ಧಸಿರಿ ಕಾರ್ಖಾನೆಯಿಂದ ಚಿಂಚೋಳಿ ಪಟ್ಟಣದ ಸೇರಿದಂತೆ ಸುತ್ತಮುತ್ತ ಅಲ್ಪಸ್ವಲ್ಪ ವ್ಯಾಪಾರ ವಹಿವಾಟು ಅಭಿವೃದ್ಧಿ ಹೆಚ್ಚಾಗಿದ್ದು ಕಾಣಬಹುದು,ಆದರೆ ಬರುವ ದಿನಗಳಲ್ಲಿ ಈ ಕಂಪನಿಯಿಂದ ಕೂಡ ದುರ್ವಾಸನೆ ಮತ್ತು ಕಪ್ಪು ಹೊಗೆಯಿಂದ ಬಂದು ಜನರಿಗೆ ತೊಂದರೆ ಆಗುವ ಸಂಭವವಿದೆ ಎಂದು ಸಾರ್ವಜನಿಕರ ಅಭಿಪ್ರಾಯವಾಗಿದೆ.


ಉದಯವಾಹಿನಿ ಚಿತ್ರ

**ಸುಲೇಪೇಟ್ ಗ್ರಾಮದಲ್ಲಿ ಎರಡು ಸೋಲಾರ್ ಪ್ಲಾಂಟ್:-** ಒಂದು ರೇವನೋ ಪ್ಲಾಂಟ್ ಮತ್ತೊಂದು ಸೋಲಾರ್ ಪ್ಲಾಂಟ್ ಈ ಎರಡು ಸೋಲಾರ್ ಪ್ಲಾಂಟ್ ಇದ್ದರು ಕೂಡ ತಾಲ್ಲೂಕಿನಲ್ಲಿ ಯಾವುದೇ ಲಾಭದಾಯಕ ಆಗಲಿಲ್ಲಾ,ಸೋಲಾರ್ ಪ್ಲಾಂಟ್ ಸುತ್ತ ಮುತ್ತಲಿನ ರೈತರ ಜಮೀನುಗಳಿಗೆ ನಷ್ಟವಿದೆ ಹೊರತು ಲಾಭವಿಲ್ಲ,ಸುತ್ತಮುತ್ತಲಿನ ರೈತರ ಜಮೀನುಗಳಲ್ಲಿ ಚನ್ನಾಗಿ ಬೆಳೆ ಬೆಳೆಯದೆ ನಷ್ಟವಾಗುತ್ತಿದೆ ಎಂಬುವುದು ರೈತರ ಅಳಲಾಗಿದೆ,ಆದರೆ ಸರ್ಕಾರಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿರಬಹುದು ಆದರೆ ರೈತರಿಗೆ ನಷ್ಟವಾಗುತ್ತಿದೆ ಎಂದು ಕರವೇ ಪ್ರವೀಣಶೆಟ್ಟಿ ಬಣ ತಾಲ್ಲೂಕಾ ಗೌರವಾಧ್ಯಕ್ಷ ಮತೀನ್ ಸೌಧಾಗಾರ ತಿಳಿಸಿದ್ದಾರೆ.ಇವೆಲ್ಲವೂ ಕುಂದುಕೊರತೆಗಳನ್ನು ಸಮಸ್ಯೆಗಳಿಗೆ ಜಿಲ್ಲಾಡಳಿತ ಹಾಗೂ ತಾಲ್ಲೂಕಾಡಳಿತ ಕಡಿವಾಣ ಹಾಕಲಾಗುವುದು ಇಲ್ಲವೋ ಕಾದುನೋಡಬೇಕಾಗಿದೆ.

ತಾಲ್ಲೂಕಿನಲ್ಲಿ ಅನೇಕ ರೀತಿಯಲ್ಲಿ ಕಾರ್ಖಾನೆಗಳು ತಲೆ ಎತ್ತಿವೆ ಆದರೆ ಅಭಿವೃದ್ಧಿ ಪಥದಲ್ಲಿ ಸಾಗುವ ತಾಲ್ಲೂಕಾ ಕುಂಠಿತವಾಗುತ್ತಿದೆ ಏಕೆಂದರೆ ಕಾರ್ಖಾನೆಗಳ ಆದಾಯದ ಎರಡು ಪ್ರತಿಶತಃ ಸುತ್ತಮುತ್ತಲಿನ ಅಭಿವೃದ್ಧಿಗಾಗಿ ಸಿ.ಆರ್.ಎಸ್ ಅನುದಾನವನ್ನು ನೀಡಬೇಕು ಆದರೆ ನೀಡದೆ ವಂಚಿಸುತ್ತಿರುವುದರಿಂದ ಅಭಿವೃದ್ಧಿ ಕುಂಠಿತ,ಮತ್ತೊಂದೆಡೆ ಎಲ್ಲಾ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡದೆ ವಂಚನೆ ಮಾಡುತ್ತಿದ್ದಾರೆ,ಕಾರ್ಖಾನೆಯಲ್ಲಿ ಕಲ್ಲುಗಣಿಗಾರಿಕೆ ಮಾಡುವುದರಿಂದ ಸುತ್ತಮುತ್ತಲಿನ ಗ್ರಾಮಗಳ ಮನೆಗಳು ಬೀರುಕು ಕಾಣಿಸುತ್ತಿದ್ದು ಜನರು ಭಯದಲ್ಲಿ ಬದುಕು ನಡೆಸುತ್ತಿದ್ದಾರೆ, ಕಾರ್ಖಾನೆಗಳಿಂದ ಸುತ್ತಮುತ್ತಲಿನ ರೈತರ ಜಮೀನುಗಳಲ್ಲಿ ರೈತರ ಬೆಳೆಯ ಮೇಲೆ ದುಶ್ಪರಿಣಾಮ ಬೀರಿ ಬೆಳೆ ಬೆಳೆಯದೆ ರೈತರು ನಷ್ಟ ಅನುಭವಿಸುತ್ತಿದ್ದು ರೈತರಿಗೆ ಬೆಳೆ ಪರಿಹಾರ ನೀಡಬೇಕು. ಚೆಟ್ಟಿನಾಡು ಕಾರ್ಖಾನೆ ಸೇರಿದಂತೆ ಕೆಲ ಕಂಪನಿಗಳು ಅರಣ್ಯ ಇಲಾಖೆ ಕಾನೂನು ಉಲ್ಲಂಘನೆ ಮಾಡುತ್ತಿದ್ದಾರೆ,ಸಿ.ಆರ್.ಎಸ್.ಅನುದಾನ ಬಳಕೆ ಸೇರಿದಂತೆ ಕಾರ್ಖಾನೆ ಸಮಸ್ಯೆಗಳು ಮತ್ತು ಕೇಂಪುಮಣ್ಣು ಅತಿಬಾರವಾದ ಟಿಪ್ಪರ್ ಗಳಿಗೆ ಜಿಲ್ಲಾಡಳಿತ ಮತ್ತು ತಾಲ್ಲೂಕಾಡಳಿತ ಇವೆಲ್ಲವೂ ಸಮಸ್ಯೆಗಳಿಗೆ ಕಡಿವಾಣ ಹಾಕಬೇಕು.

– ಸಚಿನ್ ಚವ್ಹಾಣ, ಅಧ್ಯಕ್ಷರು,ಯುವ ಕರ್ನಾಟಕ ವೇದಿಕೆ ಚಿಂಚೋಳಿ.

ಚೆಟ್ಟಿನಾಡು ಸಿಮೆಂಟ್,ಕಲಬುರ್ಗಿ ಸಿಮೇಂಟ್ ಕಾರ್ಖಾನೆಗಳಿಗೆ ಶಾಧಿಪೂರ ಸೇರಿದಂತೆ ತೇಲಂಗಾಣ ರಾಜ್ಯಗಳಿಂದ ಕೇಂಪುಮಣ್ಣು ಟಿಪ್ಪರ್ ಗಳು ಅತಿಬಾರ ಗರಿಷ್ಠ 45ರಿಂದ 50ಟನ್ ತುಂಬಿಕೊಂಡು ಬರುತ್ತಿರುವುದರಿಂದ ಎಲ್ಲಾ ರಸ್ತೆಗಳು ಹದಗೆಟ್ಟು ಹೋಗಿ ತೆಗ್ಗುಗುಂಡಿಗಳು ಬೀಳುತ್ತಿವೆ,ಕಾರ್ಖಾನೆಯವರೂ ದುರಸ್ತಿಗೊಳಿಸದೆ ನಿರ್ಲಕ್ಷ್ಯ ವಹಿಸುತ್ತಿದ್ದು ಇಷ್ಟೆಲ್ಲಾ ಬಾರವಾದ ಟಿಪ್ಪರ್ ಯಮಸ್ವರೋಪದಂತೆ ಹೋಗಿ ರಸ್ತೆ ಹಾಳು ಆಗುತ್ತಿದ್ದರು ಆರ್.ಟಿ.ಓ ಅಧಿಕಾರಿಗಳು ಮೌನವಾಗಿದ್ದಾರೆ,ಹಾಗೆಯೇ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡದೆ ಹೊರ ರಾಜ್ಯದವರಿಗೆ ಮಹತ್ವ ನೀಡುತ್ತಿದ್ದಾರೆ,ಸ್ಥಳೀಯರಿಗೆ ತಿಂಗಳಲ್ಲಿ 18-ರಿಂದ 20ದಿನ ಮಾತ್ರ ಉದ್ಯೋಗಕ್ಕೆ ತೆಗೆದುಕೊಳ್ಳುತ್ತಾರೆ ಉಳಿದ 10-12ದಿನ ಕೂಲಿಕಾರ್ಮಿಕರು ಬದುಕುವುದು ಹೇಗೆ ?.

– ಬಾಬುಮಿಯ್ಯ ಮೋಮೀನ್, ಅಧ್ಯಕ್ಷರು,ಗ್ರಾ.ಪಂ.ಕರ್ಚಖೇಡ.

# ಜೆಜೆಎಮ್ ಕಾಮಗಾರಿ ಕಳಪೆ : ನದಾಫ್ ಆಗ್ರಹ

• ಉದಯವಾಹಿನಿ ಕೆಂಭಾವಿ

2022-23 ಸಾಲಿನ ಜೆ.ಜೆ.ಎಮ್ ಕಾಮಗಾರಿಯನ್ನು ಈಗ ಸಂಪೂರ್ಣ ಮುಗಿದುರತದೆ ಎಂದು ಗುತ್ತಿಗೆದಾರರು ತಮ್ಮ ಪುರಸಭೆಗೆ ಹಸ್ತಾಂತರ ಮಾಡುತ್ತಿದ್ದಾರೆ. ಆದರೆ ಸದರಿ ಜಲ ಜೀವನ ಮಿಶನ್ ಕಾಮಗಾರಿಯು ಸಂಪೂರ್ಣ ಮುಗಿದಿರುವುದಿಲ್ಲ, ಸರಿಯಾಗಿ ಪೈಪಲೈನ್ ಮಾಡಿರುವುದಿಲ್ಲ. ಕೆಲವು ಕಡೆಗಳಲ್ಲಿ ಸಮರ್ಪಕವಾಗಿ ನೀರು ಬರುತ್ತಿಲ್ಲ. ಮತ್ತು ಎಲ್ಲಿಯೂ ನಲ್ಲಿಗಳನ್ನು ಕೂಡಿಸಿರುವುದಿಲ್ಲ. ಇಂತಹ ಅವ್ಯವಸ್ಥೆಯಲ್ಲಿ ಕಳಪೆ ಕಾಮಗಾರಿಯಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ನಗರ ಘಟಕ ಅಧ್ಯಕ್ಷ ಬಾಬಾಸಾಬ ನದಾಫ್ ಆರೋಪಿಸಿ ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.


ಉದಯವಾಹಿನಿ ಚಿತ್ರ

ಪುರಸಭೆಗೆ ಹಸ್ತಾಂತರ ಮಾಡುತ್ತಿರುವುದು ಮೂಲಗಳಿಂದ ತಿಳಿದು ಬಂದಿರುತ್ತದೆ. ಕಾಮಗಾರಿ ಸಂಪೂರ್ಣ ಗುಣಮಟ್ಟದಿಂದ ಮುಗಿಯುವ ವರೆಗೆ ತಾವು ಹಸ್ತಾಂತರ ಮಾಡಿಕೊಳ್ಳಬಾರದು ಎಂದು ತಮ್ಮಲ್ಲಿ ಮನವಿ. ಒಂದು ವೇಳೆ ಹಸ್ತಾಂತರ ಮಾಡಿಕೊಂಡಿದ್ದೆ ಆದಲ್ಲಿ ತಮ್ಮ ಕಾರ್ಯಾಲಯದ ಮುಂದೆ ನಮ್ಮ ಸಂಘಟನೆಯಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಶಾಸಕರೇ ಅಧಿವೇಶನದಲ್ಲಿ ರೈತರ ಬಗ್ಗೆ ಧ್ವನಿ ಎತ್ತಿ : ಬಡಿಗೇರ್ ಆಗ್ರಹ

• ಉದಯವಾಹಿನಿ ಯಾದಗಿರಿ



ಜಿಲ್ಲೆಯಲ್ಲಿ ರೈತರಿಗೆ ಸಾಕಷ್ಟು ಜ್ವಲಂತ ಸಮಸ್ಯೆಗಳು ತಾಂಡವವಾಡುತ್ತಿವೆ, ಈ ಕುರಿತು ರೈತರಿಂದ ಮತಭಿಕ್ಷೆ ಪಡೆದು ಆರಿಸಿ ಬಂದಿರುವ ಜಿಲ್ಲೆಯ ಶಾಸಕರು ಗಟ್ಟಿ ಧ್ವನಿಯಲ್ಲಿ ಮಾತನಾಡಬೇಕು, ಮತ ಕೇಳುವಾಗ ಇರುವ ಕಾಳಜಿ ಕಕಲಾತಿ ಈಗೇಕೆ ಇಲ್ಲ, ಕಳೆದ 4-5 ವರ್ಷಗಳಿಂದ ಅತೀವೃಷ್ಟಿ, ಅನಾವೃಷ್ಟಿಯಿಂದ ಕಂಗಾಲಾಗಿರುವ ರೈತರಿಗೆ ಈ ಸರತಿಯ ಅಧಿವೇಶನದಿಂದಾದರೂ ಒಂದಿಷ್ಟು ನೆಮ್ಮದಿ ಸಿಗಬೇಕಾದರೆ ಚಳಿಗಾಲದ ಅಧಿವೇಶನದಲ್ಲಿ ಈ ಭಾಗದ ಸಮಸ್ಯೆಗಳ ಬಗ್ಗೆ ಮಾತ್ರ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಎಚ್. ಆರ್ ಬಡಿಗೇರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ. ರೈತರ ಬಾಳಲ್ಲಿ ನಿತ್ಯವೂ ಕಗ್ಗತ್ತಲೆ ಆವರಿಸಿದರೆ ರೈತ ಬದುಕುವುದಾದರೂ ಹೇಗೆ, ವಿಮೆಯಲ್ಲಿ ದೊಡ್ಡ ಮಟ್ಟದ ಮೋಸ, ಕಳಪೆ ಬೀಜ, ಗೊಬ್ಬರ, ಕೀಟನಾಶಕ, ವಿದ್ಯುತ್ ಸಮಸ್ಯೆ, ನೀರಿನ ಸಮಸ್ಯೆ, ಭೂ ಪರಿಹಾರದಲ್ಲಿ ತಾರತಮ್ಯ, ಕೃಷ್ಣಾನದಿ ನೀರಿನ ಹಂಚಿಕೆಯಲ್ಲಿ ಮೋಸ, ಬೆಳೆದ ಬೆಳೆಗೆ ಸರಿಯಾದ ಬೆಲೆಯಲ್ಲಿ ಮೋಸ, ಇವುಗಳ ಬಗ್ಗೆ ಕುಲಂಕುಶವಾಗಿ ಚರ್ಚೆ ಮಾಡಿ ಪರಿಹಾರ ನೀಡುವಂತೆ, ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಯಾವುದೇ ಮುಲಾಜು ಹಿಡಿಯದೇ ಪಕ್ಷಾತೀತವಾಗಿ ಚರ್ಚೆ ಮಾಡಿ ವಿಶೇಷ ಅನುದಾನ ಸೇರಿದಂತೆ ಹೊಸ ಹೊಸ ಯೋಜನೆಗಳ ಬಗ್ಗೆ ಚರ್ಚೆ ಮಾಡಿ ಕೃಷಿ, ಶಿಕ್ಷಣ, ಉದ್ಯೋಗ, ಮೂಲಭೂತ ಸೌಕರ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಿ.

**ಅಧಿವೇಶನದಲ್ಲಿ ಧ್ವನಿ ಎತ್ತಬೇಕು**

ಯಾದಗಿರಿ ಜಿಲ್ಲೆಯಲ್ಲಿಯ ಅತೀ ದೊಡ್ಡ ಪಟ್ಟಣವಾಗಿರುವ ಕೆಂಭಾವಿಯನ್ನು ತಾಲೂಕು ಘೋಷಣೆ ಮಾಡಬೇಕು, ಹಲವಾರು ವರ್ಷಗಳಿಂದ ಕೆಂಭಾವಿ ತಾಲ್ಲೂಕ ಕನಸು ನನಸಾಗಿಲ್ಲ, ಈಗಲಾದರೂ ಕೆಂಭಾವಿ ತಾಲೂಕ ಬಗ್ಗೆ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪ ದರ್ಶನಾಪುರ ಅವರು ಅಧಿವೇಶನದಲ್ಲಿ ಧ್ವನಿ ಎತ್ತಬೇಕು, ಎಂದು ಎಚ್. ಆರ್. ಬಡಿಗೇರ್ ಅವರು ಪತ್ರಿಕೆ ಮೂಲಕ ಆಗ್ರಹ ಮಾಡಿದ್ದಾರೆ.

# ಹಿಂದೂ ರುದ್ರಭೂಮಿ: ಹೆಚ್ಚುವರಿ ಜಮೀನಿಗೆ ಆಗ್ರಹ

• ಉದಯವಾಹಿನಿ ಹರಿಹರ

ನಗರದಲ್ಲಿರುವ ಹಿಂದೂ ರುದ್ರಭೂಮಿಗೆ ಹೆಚ್ಚುವರಿ ಭೂಮಿ ಮಂಜೂರು ಮಾಡಲು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಪದಾಧಿಕಾರಿಗಳು ಗ್ರೇಡ್-2 ತಹಶೀಲ್ದಾರ್ ಸಿ.ಪುಷ್ಪಾವತಿ ಅವರಿಗೆ ಮನವಿ ಸಲ್ಲಿಸಿದರು.



ಉದಯವಾಹಿನಿ ಚಿತ್ರ

**ಸಾರ್ವಜನಿಕರ ಜೀವಕ್ಕೆ ಅಪಾಯ**

ಈ ವೇಳೆ ಮಾತನಾಡಿದ ಪದಾಧಿಕಾರಿಗಳು, 'ನಗರದ ಕೈಲಾಸ ನಗರದಲ್ಲಿರುವ ರುದ್ರ ಭೂಮಿಯಲ್ಲಿ ಆರೇಳು ದಶಕಗಳಿಂದ ಅಂತ್ಯಸಂಸ್ಕಾರ ಮಾಡಲಾಗುತ್ತಿದೆ. ಕಾಲ ಕ್ರಮೇಣ ನಗರ ಬೆಳೆದಂತೆ ಜನಸಂಖ್ಯೆಯೂ ಹೆಚ್ಚಳವಾಗಿದೆ. ಪ್ರಸ್ತುತ ನಗರದಲ್ಲಿರುವ ರುದ್ರಭೂಮಿ ವ್ಯಾಪ್ತಿಯು ಚಿಕ್ಕದಾಗಿದೆ. ಇದರ ಪರಿಣಾಮ ಶವ ಸಂಸ್ಕಾರ ಮಾಡಿದ ಸ್ಥಳದಲ್ಲಿಯೇ ಮತ್ತೆ ಶವ ಸಂಸ್ಕಾರ ಮಾಡುವ ದುಃಸ್ಥಿತಿ ಎದುರಾಗಿದೆ. ಮತ್ತಷ್ಟು ಜಮೀನು ಒದಗಿಸಲು ಆಗ್ರಹಿಸಿ ಈ ಹಿಂದೆ ವಿವಿಧ ಸಂಘ, ಸಂಸ್ಥೆಗಳು ನೀಡಿದ ಮನವಿಗೆ ತಾಲ್ಲೂಕು ಆಡಳಿತ ಸ್ಪಂದಿಸುತ್ತಿಲ್ಲ' ಎಂದು ದೂರಿದರು.

ಕರವೇ ತಾಲ್ಲೂಕು ಘಟಕದ ಅಧ್ಯಕ್ಷ ರಮೇಶ್ ಮಾನೆ, ನಗರ ಘಟಕದ ಅದಕ ಸೀತಮ್ ಬಾಬು ಗೌರವ ಸಲಹೆಗಾರ ಬಿ ಮುಗುಮ್ ವಕೀಲರಾದ ಹಾಲೇಶ್, ಅಲಿ ಅಕ್ತರ್, ರಾಜು, ರುದ್ರೇಶ್, ಮಹೇಶ್, ಅಕ್ರಂ ಹಾಜಿರಿದ್ದರು.

ಈಗಿರುವ ರುದ್ರಭೂಮಿಯಲ್ಲಿಯೂ ಬಹಳಷ್ಟು ಅವ್ಯವಸ್ಥೆ ಇದೆ. ಬೃಹತ್ ಪ್ರಮಾಣದಲ್ಲಿ ಮರ- ಗಿಡಗಳು ಬೆಳೆದು ನಿಂತಿವೆ. ಅವುಗಳ ಮೇಲೆ ಹೈಟೆನ್ಷನ್ ವಿದ್ಯುತ್ ವೈರ್‌ಗಳು ಹಾದು ಹೋಗಿದ್ದು, ಅಂತ್ಯಕ್ರಿಯೆಗೆ ಬರುವ ಸಾರ್ವಜನಿಕರ ಜೀವಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ. ರುದ್ರಭೂಮಿಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳುವ ಜೊತೆಗೆ ಹೆಚ್ಚುವರಿ ಜಮೀನನ್ನು ಆದಷ್ಟು ಬೇಗ ಒದಗಿಸಬೇಕು' ಎಂದು ಆಗ್ರಹಿಸಿದರು.

# ಕನಕ ಗುರು ಪೀಠದ ದಾಸೋಹಕ್ಕೆ ಭತ್ತ ಸಂಗ್ರಹಕ್ಕೆ ಚಾಲನೆ

• ಉದಯವಾಹಿನಿ ವಡಗೇರಾ

ಮಠ ಮಂದಿರಗಳ ಬೆಳವಣಿಗೆಯಲ್ಲಿ ದಾನಿಗಳು ಸಹಕಾರವು ತುಂಬಾ ಅತ್ಯವಶ್ಯವಾಗಿರುತ್ತದೆ ಪ್ರತಿಯೊಬ್ಬರೂ ಕೂಡಾ ಸಹಕಾರ ನೀಡಬೇಕು ಎಂದು ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಹೇಳಿದರು. ಕಲಬುರ್ಗಿ ವಿಭಾಗೀಯ ದೇವದುರ್ಗ ತಾಲೂಕಿನ ತಿಂಥಣಿಯ ಕನಕ ಗುರು ಪೀಠದ ವಿದ್ಯಾರ್ಥಿಗಳು ಭಕ್ತರ ದಿನನಿತ್ಯದ ದಾಸೋಹಕ್ಕಾಗಿ ಭತ್ತದ ಸಂಗ್ರಹ ಕಾರ್ಯಕ್ಕೆ ಚಾಲನೆ ಕೊಟ್ಟು ಅವರು ಮಾತನಾಡಿದರು. ಪ್ರತಿಯೊಬ್ಬರು ದಾನ ಧರ್ಮ ಮನೋಭಾವ ಬೆಳೆಸಿಕೊಳ್ಳಬೇಕು ಪರೋಪಕಾರದಿಂದ ಮಾತ್ರ ಮನುಷ್ಯನ ಜನ್ಮ ಸಾರ್ಥಕ ನಮ್ಮ ಕೆಲಸ ಕಾರ್ಯದ ಜೊತೆ ಪ್ರತಿಯೊಬ್ಬರು ಪರೋಪಕಾರಿ ಕೆಲಸಗಳನ್ನು ಮಾಡಬೇಕು ಮಠದ ಅಭಿವೃದ್ಧಿಗೆ ಪ್ರತಿಯೊಬ್ಬರು ಕೈಜೋಡಿಸುವಂತೆ ಹೇಳಿದರು.

ವಡಗೇರಾ ತಾಲ್ಲೂಕಿನ ವ್ಯಾಪ್ತಿಯ ಗ್ರಾಮಗಳಾದ ಹಾಲಗೇರಾ, ಕುಮನೂರು, ಕಂದಳ್ಳಿ, ಜೋಳದಡಗಿ, ಸೂಗೂರು, ಹಾಗೂ ಇನ್ನಿತರ ಗ್ರಾಮದ ಭಕ್ತರು ತಾವು ಬೆಳೆದ ಭತ್ತಗಳನ್ನು ಮಠಕ್ಕೆ ದೇಣಿಗೆ ರೂಪದಲ್ಲಿ ನೀಡಿದರು. ಆ ರೈತರಿಗೆ ಕುರುಬ ಸಂಘದ ಜಿಲ್ಲಾಧ್ಯಕ್ಷ ಮಲ್ಲಣ್ಣ ಐಕೂರ ಹೃತ್ಪೂರ್ವಕ ಧನ್ಯವಾದಗಳು ತಿಳಿಸಿದರು. ಸಂಗ್ರಹವಾದ 40 ಚೀಲ ಭತ್ತಗಳನ್ನು ಮಠಕ್ಕೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯ ಮರಿಲಿಂಗಪ್ಪ ಸಾಹುಕಾರ ಕುಮನೂರ, ಕುರುಬ ಸಮಾಜದ ಯುವ ಮುಖಂಡರಾದ ಹೊನ್ನಪ್ಪ ಯಡ್ಡಳ್ಳಿ, ಬಸವರಾಜ ಹೊರಟೂರು, ಮಾಳಿಂಗರಾಯ ಕಂದಳ್ಳಿ ಮತ್ತು ರೈತರು ಗ್ರಾಮಸ್ಥರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಮೋಡ ಕವಿದ ವಾತಾವರಣ: ಆತಂಕದಲ್ಲಿ ರೈತರು

• ಉದಯವಾಹಿನಿ ಮುದಗಲ್

ಫಂಗಲ್ ಚಂಡಮಾರುತದಿಂದಾಗಿ ಮುದಗಲ್ ಸುತ್ತಲಿನ ಗ್ರಾಮಗಳಲ್ಲಿ ಮೋಡ ಕವಿದ ವಾತಾವರಣ ಆವರಿಸಿದ ಕಾರಣ ಮೆಣಸಿನ ಕಾಯಿ, ಭತ್ತ, ತೊಗರಿ ಬೆಳೆದ ರೈತರು ಆತಂಕದಲ್ಲಿದ್ದಾರೆ. ಚಂಡಮಾರುತದ ಪ್ರಭಾವದಿಂದಾಗಿ ಮೋಡ ಕವಿದು ಹನಿ ಬೀಳುತ್ತಿದೆ. ಮೆಣಸಿನ ಕಾಯಿ ಬೆಳೆಗೆ ಕೀಟಬಾಧೆ ಶುರುವಾಗಿದೆ. ಕೀಟನಾಶಕ ಸಿಂಪಡಿಸಿ ಹತೋಟಿಗೆ ತರಬೇಕು ಎಂದರೆ ಹನಿ ಉದುರುವುದರಿಂದ ಬೆಳೆಗೆ ಔಷಧ ತಗುಲುದಿಲ್ಲ ಎನ್ನುವ ಆತಂಕ ರೈತರಲ್ಲಿದೆ. ಬೆಳೆ ಬೆಳೆಯಲು ಎಕರೆಗೆ ಲಕ್ಷಾಂತ ರೂಪಾಯಿ ಖರ್ಚು ಮಾಡಿದ್ದು ಹೂ ಬಿಡುವ ವೇಳೆಯಲ್ಲಿ ಫಂಗಲ್ ಚಂಡಮಾರುತ ಬೆಳ ಹಾನಿ ಮಾಡುತ್ತಿದೆ. ರೈತರು ಭತ್ತ ಕಟಾವು ಮಾಡುತ್ತಿದ್ದಾರೆ. ಕೆಲವರು ಕಟಾವು ಮಾಡಿ ಒಣಗಲು ಹಾಕಿದ್ದಾರೆ. ಮೋಡ ಕವಿದ ವಾತಾವರಣದಿಂದ ಭತ್ತ ಒಣಗಿಸಲು ಆಗುತ್ತಿಲ್ಲ. ವರ್ತಕರೂ ಖರೀದಿಗೆ ಮುಂದಾಗುತ್ತಿಲ್ಲ. ಅಕಾಲಿಕ ಮಳೆಯಿಂದಾಗಿ ಸಂಕಷ್ಟ ಎದುರಿಸುತ್ತಿದ್ದಾರೆ.ಬೆಳೆ ಬೆಳೆದು ಫಸಲು ಬರುವ ವೇಳೆ ಅಕಾಲಿಕ ಗಾಳಿ–ಮಳೆ ಸುರಿದು ಭತ್ತ ನೆಲಕ್ಕೊರಗಿ ಹಾನಿಯಾಗಿತ್ತು. ಕಷ್ಟಪಟ್ಟು ರಕ್ಷಣೆ ಮಾಡಿ ಉಳಿಸಿಕೊಂಡ ಬೆಳೆ ಕಟಾವು ಮಾಡಿ ಒಣಗಿಸಿ. ಮಾರಾಟ ಮಾಡಬೇಕೆಂದರೆ ಫಂಗಲ್ ಚಂಡಮಾರುತದಿಂದ ತತ್ತರಿಸುವಂತಾಗಿದೆ. ಮಳೆಯಿಂದಾಗಿ ಭತ್ತ ಒಣಗಿಸಿ ಸಂರಕ್ಷಿಸಿಕೊಳ್ಳುವುದೇ ಸಮಸ್ಯೆಯಾಗಿದೆ.

ತೊಗರಿ ಬೆಳೆ ಕಟಾವು ಹಂತದಲ್ಲಿದೆ. ಕಟಾವು ಮಾಡಿ ರಾಶಿ ಮಾಡಿಕೊಂಡು ಮನೆ ಸೇರಬೇಕೆಂದರೆ ಕಟಾವು ಯಂತ್ರಗಳ ಕೊರತೆ ಎದುರಾಗಿದೆ. ಹೆಚ್ಚಿನ ದರ ನೀಡುತ್ತೇವೆ ಎಂದರೂ ಯಂತ್ರಗಳು ಸಿಗುತ್ತಿಲ್ಲ. ಒಂದೆರಡು ಎಕರೆಯುಳ್ಳ ರೈತರು ಅಧಿಕ ಜಮೀನಿರುವ ದೊಡ್ಡ ರೈತರ ಕಟಾವು ಮುಗಿಯುವವರೆಗೂ ಕಾದು ಕಟಾವು ಮಾಡಿಸಬೇಕಿದೆ.ಭತ್ತಕ್ಕೆ ದರ ಕುಸಿತ: ಕಳೆದ ವರ್ಷಕ್ಕೆ ಹೋಲಿಸಿದರೆ 75 ಕೆ.ಜಿ ಆರ್.ಎನ್.ಆರ್. ಭತ್ತಕ್ಕೆ 700 ರಿಂದ 600 ವರೆಗೆ ಇಳಿಕೆಯಾಗಿದೆ. ಕಟಾವು ಕಾರ್ಯ ಪೂರ್ಣವಾಗುವ ರಿಂದ 800 ವರೆಗೆ ಇಳಿಕೆಯಾಗಿದೆ. ಸೋನಾ ಮಸೂರಿ ಭತ್ತಕ್ಕೆ 500 ಮುನ್ನವೇ ದರ ಕುಸಿದಿರುವುದು ರೈತರನ್ನು ಕಂಗಾಲಾಗಿಸಿದೆ. ಕಳೆದ ವರ್ಷ 75 ಕೆ.ಜಿ ಆರ್.ಎನ್.ಆರ್. 2,400 ರಿಂದ 2600ಗೆ ಮಾರಾಟವಾಗಿತ್ತು. ಈ ಸಲ 1,800ರ ಆಸುಪಾಸಿನಲ್ಲಿದೆ. ಮುಂಗಡ ಹಣ ನೀಡುತ್ತೇವೆ ಎಂದರೂ ಕೂಲಿ ಕಾರ್ಮಿಕರು ಸಿಗುತ್ತಿಲ್ಲ ಎನ್ನುತ್ತಾರೆ ರೈತ ಲಕ್ಷ್ಮಣ ಕತ್ತಿ. ರಮೇಶ ಪತ್ತಾರ ರೈತಹಾಗಾಗ ಉದುರುವ ತುಂತುರು ಮಳೆಗೆ ಭತ್ತದ ಗದ್ದೆಯಲ್ಲಿದ್ದ ಒಣ ಹುಲ್ಲು (ಮೇವು) ಹಾಳಾಗುತ್ತಿದೆ.

# ವಾಹನ ನಿಲುಗಡೆ ಸಮಸ್ಯೆ: ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಅನುಷ್ಠಾನಕ್ಕೆ ಸಜ್ಜು

## • ವಾಹನ ಕಳವು ತಪ್ಪಿಸಲು ಹಾಗೂ ಅಪರಾಧ ಪ್ರಕರಣಗಳನ್ನು ಭೇದಿಸಲು ಕೂಡ ಇದು ನೆರವಾಗಲಿದೆ

• ಉದಯವಾಹಿನಿ ದಾವಣಗೆರೆ

ವಾಹನ ನಿಲುಗಡೆ ಸಮಸ್ಯೆಯನ್ನು ಪರಿಹರಿಸುವ ಉದ್ದೇಶದಿಂದ ರೂಪಿಸಿದ 'ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಅನುಷ್ಠಾನಕ್ಕೆ ಸಜ್ಜಾಗಿದೆ. ಇನ್ನು ಮುಂದೆ ನಗರದ 9 ಸ್ಥಳಗಳಲ್ಲಿ 'ಹಣ ಪಾವತಿಸಿ ವಾಹನ ನಿಲುಗಡೆ' ಮಾಡುವ ನೀತಿ ಜಾರಿಗೆ ಬರಲಿದೆ.

**ಹಣ ಪಾವತಿಸಿ ವಾಹನ ನಿಲುಗಡೆ**

ದಾವಣಗೆರೆ ನಗರದ ಸಂಚಾರ ಸಮಸ್ಯೆ. ವಾಹನ ದಟ್ಟಣೆಯನ್ನು ನಿಯಂತ್ರಿಸಲು 'ಸ್ಮಾರ್ಟ್ ಸಿಟಿ' ಯೋಜನೆ ಈ ವ್ಯವಸ್ಥೆ ಅಭಿವೃದ್ಧಿಪಡಿಸಿದೆ. 'ಡಿವಿಜಿ ಹೆಲ್ಪ್' ಮೊಬೈಲ್ ಆಯಪ್ ಮೂಲಕವೇ ವಾಹನ ನಿಲುಗಡೆ ಸ್ಥಳವನ್ನು ಗುರುತಿಸಿ ಮುಂಗಡವಾಗಿ ಕಾಯ್ದಿರಿಸುವ ಅವಕಾಶವೂ ಸಿಗಲಿದೆ.

ಮಹಾನಗರ ಪಾಲಿಕೆ ಅಥವಾ ಖಾಸಗಿ ಸಹಭಾಗಿತ್ವದಲ್ಲಿ ಇದು ಅನುಷ್ಠಾನಗೊಳ್ಳುವ ಸಾಧ್ಯತೆ ಇದೆ. ಸ್ಥಳ ಗುರುತಿಸಿರುವ ಅಧಿಕಾರಿಗಳು ವಾಹನ ನಿಲುಗಡೆ ವಿನ್ಯಾಸ ಕೂಡ ನಿಗದಿಪಡಿಸಿದ್ದಾರೆ. ಪಾರ್ಕಿಂಗ್ ಸ್ಥಳದಲ್ಲಿ ಸುಧಾರಿತ ತಂತ್ರಜ್ಞಾನ ಆಧರಿತ ಸ್ಮಾರ್ಟ್ ಬೋರ್ಡ್‌ಗಳನ್ನು ಅಳವಡಿಸಲಾ ಗಿದೆ. ಈ ಎಲ್ಲಾ ಸ್ಥಳಗಳಲ್ಲಿ 2,288 ವಾಹನಗಳನ್ನು ನಿಲುಗಡೆ ಮಾಡಲು ಸಾಧ್ಯವಿದೆ. 1,950ಕ್ಕೂ ಹೆಚ್ಚು ದ್ವಿಚಕ್ರ ವಾಹನ ಹಾಗೂ 300ಕ್ಕೂ ಅಧಿಕ ಕಾರು ನಿಲುಗಡೆ ಮಾಡಬಹುದಾಗಿದೆ. ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಗದಂತೆ ಈಗಿರುವ ಪಾರ್ಕಿಂಗ್ ವಿನ್ಯಾಸವನ್ನು ಕೂಡ ಬದಲಿಸಲಾಗಿದೆ.

ವಾಹನಗಳ ಸಂಖ್ಯೆ ಹೆಚ್ಚಾದ ಪರಿಣಾಮ ನಗರದಲ್ಲಿ ಪಾರ್ಕಿಂಗ್ ಸಮಸ್ಯೆ ವಿಪರೀತವಾಗಿದೆ. ಸಂಚಾರ ಠಾಣೆಯ ಪೊಲೀಸರು ದ್ವಿಚಕ್ರ ವಾಹನ ಮತ್ತು ಕಾರುಗಳ ಪಾರ್ಕಿಂಗ್‌ಗೆ ಕೆಲ ಮಾರ್ಗ, ವೃತ್ತಗಳಲ್ಲಿ ಸ್ಥಳ ನಿಗದಿಪಡಿಸಿದ್ದಾರೆ. ವಾಣಿಜ್ಯ ಚಟುವಟಿಕೆ ಹೆಚ್ಚಾಗಿರುವ ಮಾರುಕಟ್ಟೆ ಪ್ರದೇಶದಲ್ಲಿ 'ಸಮ ಮತ್ತು ಬೆಸ ಸಂಖ್ಯೆ' ಆಧಾರಿತ ಪಾರ್ಕಿಂಗ್ ವ್ಯವಸ್ಥೆ ಇದೆ.

ಆದರೂ ಪಾರ್ಕಿಂಗ್‌ಗೆ ಅಗತ್ಯ ಸ್ಥಳವನ್ನು ಹುಡುಕಲು ಶೇ 20ರಷ್ಟು ವಾಹನಗಳು ರಸ್ತೆಯ ಮೇಲೆ ಸಂಚರಿಸುತ್ತವೆ ಎಂಬುದು 'ಸ್ಮಾರ್ಟ್ ಸಿಟಿ' ಅಧಿಕಾರಿಗಳ ಲೆಕ್ಕಾಚಾರ. ನಿಷೇಧಿತ ಪ್ರದೇಶದಲ್ಲಿ ವಾಹನ ನಿಲುಗಡೆ ಮಾಡಿದರೆ ಪೊಲೀಸರು ದಂಡ ವಿಧಿಸುತ್ತಿದ್ದಾರೆ.

ವಾಹನ ಕಳವು ತಪ್ಪಿಸಲು ಹಾಗೂ ಅಪರಾಧ ಪ್ರಕರಣಗಳನ್ನು ಭೇದಿಸಲು ಕೂಡ ಇದು ನೆರವಾಗಲಿದೆ.

ಮಮತಾ ಡಿಜಿಎಂ ಸ್ಮಾರ್ಟ್ ಸಿಟಿ ಯೋಜನೆ ಆಯ್ತು 9 ಸ್ಥಳಗಳನ್ನು 'ಸ್ಮಾರ್ಟ್ ಪಾರ್ಕಿಂಗ್'ಗೆ ಗುರುತಿಸಲಾಗಿದೆ. ಅನಗತ್ಯವಾಗಿ ವಾಹನವನ್ನು ರಸ್ತೆಗೆ ತರುವುದಕ್ಕೆ ಕಡಿವಾಣ ಬೀಳಲಿದೆ. ಸಂಚಾರ ಸಮಸ್ಯೆಗೂ ಪರಿಹಾರ ಸಿಗಲಿದೆ ಆಯಪ್‌ನಲ್ಲಿ ಸ್ಥಳ ಕಾಯ್ದಿರಿಸಿ 'ಸ್ಮಾರ್ಟ್ ಸಿಟಿ ಲಿಮಿಟೆಡ್' ವತಿಯಿಂದ ಅಭಿವೃದ್ಧಿಪಡಿಸಿದ 'ಡಿವಿಜಿ ಹೆಲ್ಪ್' ಮೊಬೈಲ್ ಆಯಪ್ ಮೂಲಕ ಪಾರ್ಕಿಂಗ್ ಸ್ಥಳ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ.


ಉದಯವಾಹಿನಿ ಚಿತ್ರ

ಮೊಬೈಲ್ ಆ್ಯಪ್ ಅಪ್ಲಿಕೇಷನ್ ಹೊಂದಿದ್ದರೆ ಅಂಗೈಯಲ್ಲಿಯೇ ಮಾಹಿತಿ ಲಭ್ಯವಾಗಲಿದೆ. ಪಾರ್ಕಿಂಗ್ ಸ್ಥಳ ಎಲ್ಲಿ ಖಾಲಿ ಇದೆ ಎಷ್ಟು ದೂರವಿದೆ ಎಂಬ ಮಾಹಿತಿ ಕೂಡ ಲಭ್ಯವಾಗುತ್ತದೆ. ಅಗತ್ಯ ಸ್ಥಳವನ್ನು ಮೊದಲೇ ಕಾಯ್ದಿರಿಸಬಹುದು. ಪಾರ್ಕಿಂಗ್ ಸ್ಥಳದಲ್ಲಿರುವ ಸಿಬ್ಬಂದಿ ಇದನ್ನು ನಿರ್ವಹಿಸುತ್ತಾರೆ.

**ದಂಡದ ನೋಟಿಸ್ ಕೂಡ ವಾಹನ ಮಾಲೀಕರಿಗೆ ರವಾನೆ**

ಸಿ.ಸಿ.ಟಿವಿ ಕ್ಯಾಮೆರಾಗಳ ಮೂಲಕ ದಂಡದ ನೋಟಿಸ್ ಕೂಡ ವಾಹನ ಮಾಲೀಕರಿಗೆ ರವಾನೆಯಾಗುತ್ತಿದೆ. ಆದರೂ ವಾಹನ ನಿಲುಗಡೆಯಲ್ಲಿ ಶಿಸ್ತು ತರಲು ಸಾಧ್ಯವಾಗಿಲ್ಲ. 'ಹಣ ಪಾವತಿಸಿ ವಾಹನ ನಿಲುಗಡೆ' ಮಾಡಿ ಎಂಬ ವ್ಯವಸ್ಥೆ ಪಾರ್ಕಿಂಗ್‌ನಲ್ಲಿ ಸುಧಾರಣೆ ತರಬಹುದು ಎಂದು ನಿರೀಕ್ಷಿಸಲಾಗಿದೆ. ದ್ವಿಚಕ್ರ ವಾಹನಕ್ಕೆ ಗಂಟೆಗೆ 5 ಹಾಗೂ ಕಾರುಗಳಿಗೆ ಗಂಟೆಗೆ 10 ಶುಲ್ಕ ನಿಗದಿಪಡಿಸಲಾಗಿದೆ. ಗಂಟೆಗಳ ಆಧಾರದ ಮೇರೆಗೆ ಶುಲ್ಕ ಪಾವತಿಸಬೇಕಾಗುತ್ತದೆ. ಪಾರ್ಕಿಂಗ್ ಸ್ಥಳದಲ್ಲಿರುವ ಸಿ.ಸಿ.ಟಿವಿ ಕ್ಯಾಮೆರಾಗಳನ್ನು 'ಸ್ಮಾರ್ಟ್ ಸಿಟಿ' ಕಚೇರಿಯ 'ಕಮಾಂಡ್ ಕಂಟ್ರೋಲ್ ಕೇಂದ್ರ'ದಿಂದ ನಿಯಂತ್ರಿಸಲಾಗುತ್ತದೆ. ಯಾವ ಸ್ಥಳದಲ್ಲಿ ಪಾರ್ಕಿಂಗ್ ಖಾಲಿ ಇದೆ ಎಂಬುದನ್ನು ಗಮನಿಸಲಾಗುತ್ತದೆ. ಈ ಮಾಹಿತಿ ಸ್ವಯಂ ಚಾಲಿತವಾಗಿ ಆಯಪ್‌ಗೆ ರವಾನೆಯಾಗುತ್ತದೆ.

# ಸಿರಿಯಾ ಅಧ್ಯಕ್ಷ ಬಷರ್ ಅಲ್ ಅಸಾದ್ ದೇಶದಿಂದ ಪರಾರಿ

## ಕೆಲವು ವರದಿಗಳ ಪ್ರಕಾರ, ಸಿರಿಯಾ ಅಧ್ಯಕ್ಷ ಅಸಾದ್ ರಷ್ಯಾ ಅಥವಾ ಜೋರ್ಡನ್ ಕಡೆಗೆ ಹೊರಟಿರುವ ಸಾಧ್ಯತೆ

**ಸಿರಿಯಾ:** ಜಗತ್ತಿನಾದ್ಯಂತ ಮತ್ತಷ್ಟು ಬೆಳವಣಿಗೆಗಳು ನಡೆಯುತ್ತಿವೆ. ಅದರಲ್ಲೂ ಮಧ್ಯಪ್ರಾಚ್ಯದಲ್ಲಿ ದಿನದಿಂದ ದಿನಕ್ಕೆ ಸರ್ಕಾರಗಳೇ ಉರುಳಿ ಹೋಗುತ್ತಿವೆ. ಇಸ್ಲಾಮಿಕ್ ಸಂಘಟನೆಗಳು, ಬಂಡುಕೋರರು, ಉಗ್ರರ ಅಭ್ಯಾಸಗಳು ಜೋರಾಗಿವೆ. ಈಗ ಸಿರಿಯಾದಲ್ಲಿ ದೊಡ್ಡ ಕ್ರಾಂತಿಯೇ ನಡೆದು ಹೋಗಿದೆ. ಅಲ್ಲೀಗ ಹಲವು ಯುದ್ಧಗಳು ಹಾಗೂ ಭಯೋತ್ಪಾದನಾ ಸಂಘಟನೆಗಳ ಹಿಡಿತದಿಂದ ತತ್ತರಿಸಿರುವ ಸಿರಿಯಾದಲ್ಲಿ ಬಷರ್ ಅಲ್ ಅಸಾದ್‌ನ ಆಡಳಿತವು ಕೊನೆಯಾಗಿದೆ. ಬಂಡುಕೋರರು ರಾಜಧಾನಿ ಡಮಾಸ್ಕಸ್‌ನ್ನು ಸುಗ್ಗಿದ್ದಾರೆ ಹಾಗೂ ಅಧ್ಯಕ್ಷ ಬಷರ್ ನಾಪತ್ತೆಯಾಗಿದ್ದಾರೆ.

ಡಮಾಸ್ಕಸ್ ಸೇರಿದಂತೆ ಸಿರಿಯಾದ ನಗರಗಳಲ್ಲಿ ಮೆರವಣಿಗೆ ಶುರು ಮಾಡಿರುವ ಬಂಡುಕೋರರು, ಅಸಾದ್‌ನಿಂದ ದೇಶದ ಬಿಡುಗಡೆ, ಇದು ಹೊಸ ಯುಗದ ಆರಂಭ ಎಂದು ಘೋಷಿಸಿದ್ದಾರೆ. ಸಿರಿಯಾದ ಸೇನೆಯು ಹೋರಾಟವನ್ನು ಕೈಚೆಲ್ಲಿದ್ದು, ಅಧ್ಯಕ್ಷ ಬಷರ್ ಅಲ್ ಅಸಾದ್ ಅವರ ಆಡಳಿತವು ಕೊನೆಯಾಗಿದೆ ಎಂದು ಸರಕಾರದ ಅಧಿಕಾರಿಗಳಿಗೆ ಸಂದೇಶ ರವಾನಿಸಿದ್ದಾರೆ. ಸುಮಾರು ಒಂದು ವಾರದಿಂದ ಬಂಡುಕೋರರು ನಡೆಸಿರುವ ಕ್ಷಿಪ್ರ ಕ್ರಾಂತಿಯಲ್ಲಿ ಸಿರಿಯಾದ ಆಡಳಿತವು ಬಷರ್ ಕೈತಪ್ಪಿದೆ. ಆತ ರಾಜಧಾನಿ ಡಮಾಸ್ಕಸ್‌ನಿಂದ ಅಜ್ಞಾತ ಸ್ಥಳಕ್ಕೆ ಭಾನುವಾರ ಪರಾರಿಯಾಗಿರುವುದಾಗಿ ವರದಿಯಾಗಿದೆ. ಬಂಡುಕೋರರು ಡಮಾಸ್ಕಸ್‌ಗೆ ಪ್ರವೇಶಿಸಿದರೂ ಸಿರಿಯಾ ಸೇನೆಯಿಂದ ಯಾವುದೇ ಪ್ರತಿರೋಧಗಳೂ ಎದುರಾಗಲಿಲ್ಲ, ಸಂಭ್ರಮಾಚರಣೆಯಲ್ಲಿರುವ ಬಂಡುಕೋರರ ಗಮನ ಈಗ ಸೆಡ್ನಾಯಾ ಜೈಲಿನ ಕಡೆಗೆ ತಿರುಗಿದೆ. 'ಸೆರೆಮನೆ ವಾಸಿಗಳನ್ನು ಬಂಧನದಿಂದ ಬಿಡಿಸಿ, ಅವರ ಕೈಗಳಿಗೆ ಹಾಕಿರುವ ಸರಳುಗಳನ್ನು ಬಿಡಿಸಿ ಸ್ವತಂತ್ರಗೊಳಿಸಿ, ಕೊನೆಯಾಗಿರುವ ಅನ್ಯಾಯದ ಪರ್ವವನ್ನು ಸಿರಿಯಾ ಜನರೊಂದಿಗೆ ನಾವು ಸಂಭ್ರಮಿಸುತ್ತೇವೆ ಎಂದಿದ್ದಾರೆ.

**ಹೊಸ ಯುಗಾರಂಭ ಘೋಷಿಸಿದ ಬಂಡುಕೋರರು**

ಇದು ಬಂಡುಕೋರರು, ಉಗ್ರಗಾಮಿ ಸಂಘಟನೆಗಳು ಹಾಗೂ ಸರಕಾರದ ನಡುವೆ ನಡೆದಿರುವ ದಿಢೀರ್ ಬಂಡಾಯವಲ್ಲ, ಸುಮಾರು 13 ವರ್ಷಗಳಿಂದಲೂ ಸಿರಿಯಾದಲ್ಲಿ ಸಿವಿಲ್ ವಾರ್, ನಾಗರಿಕ ಸಮರಗಳು ನಡೆಯುತ್ತಲೇ ಇವೆ. ಅದಕ್ಕೆ ಸಾಕ್ಷಿಯಾಗಿ ನಿಂತಿರುವುದು ಹೋಮ್ಸ್ ನಗರ. ಹೋಮ್ಸ್‌ನಲ್ಲಿ ಬಂಡುಕೋರರು ಮತ್ತು ಸಿರಿಯಾ ಸೇನೆಯ ನಡುವೆ ನಡೆದ ಭೀಕರ ಕಾಳಗದಲ್ಲಿ ಜನಸಾಮಾನ್ಯರು ಹಾಗೂ ಅವರ ಆಸ್ತಿ ಪಾಸ್ತಿಗಳು ಹಾಳಾಗಿ ಹೋದವು. ಪಾಳು ಬಿದ್ದಿರುವ ಕಟ್ಟಡಗಳು, ಅನಾಥವಾದ ಬಂಗಲೆಗಳು ಈಗಲೂ ಸಿವಿಲ್ ವಾರ್‌ನ



ಕಥೆಗಳನ್ನು ಹೇಳುತ್ತಿವೆ. ಈಗ ಮತ್ತೆ ಈ ನಗರವು ಬಂಡುಕೋರರ ನಿಯಂತ್ರಣಕ್ಕೆ ಸಿಕ್ಕಿದೆ.

ಪ್ರಮುಖ ಬಂಡುಕೋರ ಸಂಘಟನೆಯಾಗಿರುವ 'ಹಯಾತ್ ತಹ್ರೀರ್ ಅಲ್-ಶಾಮ್'ನ ಮುಖಂಡ ಅಬು ಮೊಹಮ್ಮದ್ ಅಲ್ ಗೊಲಾನಿ ಅವರು ಹೋಮ್ಸ್ ನಗರದಲ್ಲಿ ಪ್ರಭುತ್ವ ಸಾಧಿಸಿರುವುದನ್ನು ಐತಿಹಾಸಿಕ ವಿಜಯ ಎಂದು ಬಣ್ಣಿಸಿದ್ದಾರೆ. ನಾಗರಿಕರ ರಕ್ಷಣೆಗೆ ಬದ್ಧರಾಗಿರುವಂತೆ ಅವರು ತಮ್ಮ ಹೋರಾಟಗಾರರಿಗೆ ಕರೆ ಕೊಟ್ಟಿದ್ದಾರೆ. ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ನಾವು ಹೇಳಿದಂತೆ ಕೇಳುವವರಿಗೆ ಯಾವುದೇ ಹಾನಿಯನ್ನೂ ಮಾಡದಂತೆ ಸೂಚನೆಗಳನ್ನು ಕೊಟ್ಟಿದ್ದಾರೆ.

ಕೆಲವು ವರದಿಗಳ ಪ್ರಕಾರ, ಸಿರಿಯಾ ಅಧ್ಯಕ್ಷ ಅಸಾದ್ ರಷ್ಯಾ ಅಥವಾ ಜೋರ್ಡನ್ ಕಡೆಗೆ ಹೊರಟಿರುವ ಸಾಧ್ಯತೆ ಇದೆ. ಅಸಾದ್‌ನ ಕುಟುಂಬವು ಸಿರಿಯಾದಲ್ಲಿ ಸುಮಾರು 50 ವರ್ಷಗಳು ಆಡಳಿತ ನಡೆಸಿದೆ. ಹೋಮ್ಸ್, ಅಲೆಪ್ಪೊ, ಟಾರ್ಟಸ್, ಡಮಾಸ್ಕಸ್ ಎಲ್ಲೆಲ್ಲೂ ಈಗ ಬಂಡುಕೋರರು ಆಕ್ರಮಿಸಿಕೊಂಡಿದ್ದಾರೆ. ಅವರ ಕಣ್ತಪ್ಪಿಸಿ, ಇನ್ನು ದೇಶದಿಂದ ಹೊರಹೋಗುವುದು ಯಾರಿಗೂ ಸಾಧ್ಯವಾಗುವುದಿಲ್ಲ. ಎರಡು ದಿನಗಳ ಹಿಂದೆಯೇ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಕೂಡಲೇ ಸಿರಿಯಾ ಬಿಟ್ಟು ಹೊರಡುವಂತೆ ತುರ್ತು ಸೂಚನೆಯನ್ನು ರವಾನಿಸಿತ್ತು.

### ಸಿರಿಯಾಗೆ ಇರಾನ್, ರಷ್ಯಾ ಬೆನ್ನೆಲುಬು

**ಬಹಳ ಕಾಲದಿಂದಲೂ ಅಸಾದ್ ಸಿರಿಯಾದ ಚುಕ್ಕಾಣಿ ಹಿಡಿದಿದ್ದಾರೆ. 2011ರಲ್ಲಿ ಅಸಾದ್‌ನ ಆಡಳಿತದ ವಿರುದ್ಧ ದೊಡ್ಡ ದಂಗೆ ಎದುರಾಯಿತು. ಇಸ್ಲಾಮ್ ಜಿಹಾದಿ ಉಗ್ರ ಸಂಘಟನೆಗಳಿಗೆ ಸಿರಿಯಾ ನೆಲೆಯಾಯಿತು. ಇಡೀ ಜಗತ್ತಿನಾದ್ಯಂತ ದಾಳಿಗಳನ್ನು ನಡೆಸೋಕೆ ಇಲ್ಲಿಂದಲೇ ಯೋಜನೆಗಳ ರೂಪುಗೊಂಡವು. ಹೊರಗಿನ ಶಕ್ತಿಗಳು ಸಿರಿಯಾಗೆ ಪ್ರವೇಶಿಸಿದವು. ಸಿವಿಲ್ ವಾರ್ ಶುರುವಾಗಿ ಸಿರಿಯಾ ಸೇನೆಯ ಜೊತೆಗೆ ಬಂಡುಕೋರರು ಹಾಗೂ ಉಗ್ರರ ಗುಂಪುಗಳು ಕಾಳಗ ನಡೆಸಿದವು. ಲಕ್ಷಾಂತರ ಜನರು ನೆಲೆ ಕಳೆದುಕೊಂಡು ಅಕ್ಕಪಕ್ಕದ ರಾಷ್ಟ್ರಗಳಿಗೆ ವಲಸೆ ಹೊರಟರು. ಈಗ ಬಂಡಾಯ ನಡೆಸುತ್ತಿರುವ 'ಹಯಾತ್ ತಹ್ರೀರ್ ಅಲ್-ಶಾಮ್' ಸಂಘಟನೆಯು ಹಿಂದೆ ಅಲ್‌ಖೈದಾ ಉಗ್ರರೊಂದಿಗೆ ನಂಟು ಹೊಂದಿತ್ತು.**

### ಡಮಾಸ್ಕಸ್‌ನಿಂದ ಹಾರಿದ ವಿಮಾನ

**ಡಮಾಸ್ಕಸ್ ಅನ್ನು ಬಂಡುಕೋರರು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿರುವಾಗಲೇ ಸಿರಿಯಾದ ವಿಮಾನವು ಡಮಾಸ್ಕಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಾಟ ಶುರು ಮಾಡಿತು. ಆ ವಿಮಾನವು ಮೊದಲಿಗೆ ಬಷರ್‌ನ ಬಲಿಷ್ಠ ನೆಲೆಯಾದ ಸಿರಿಯಾದ ಕರಾವಳಿ ಭಾಗದತ್ತ ಸಾಗಿತ್ತು. ಆದರೆ, ಮಾರ್ಗ ಮಧ್ಯದಲ್ಲಿ ಯುಟರ್ನ್ ಮಾಡಿ ವಿರುದ್ಧ ದಿಕ್ಕಿನತ್ತ ಹಾರಾಟ ಮುಂದುವರಿಸಿತು. ಅನಂತರದಲ್ಲಿ ವಿಮಾನವು ಸಾಗಿದ ಹಾದಿಯು ಪತ್ತೆಯಾಗಿಲ್ಲ. ಇದೇ ವಿಮಾನದಲ್ಲಿ ಅಧ್ಯಕ್ಷ ಬಷರ್ ಅಲ್ ಅಸಾದ್ ಹಾಗೂ ಸಿರಿಯಾ ಸರಕಾರದ ಪ್ರಮುಖ ಅಧಿಕಾರಿಗಳು, ನಾಯಕರು ಪರಾರಿಯಾಗಿರುವ ಸಾಧ್ಯತೆ ಇರುವುದಾಗಿ ವರದಿಯಾಗಿದೆ.**

# ಮಿನಿ ನ್ಯೂಸ್

## ಬ್ಯಾಂಕ್‌ಗೆ ನಕಲಿ ನೋಟು ಜಮೆ ಮಾಡಲೆತ್ನಿಸಿದ ವ್ಯಕ್ತಿ ಬಂಧನ

**ಥಾಣೆ:** ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಸಹಕಾರಿ ಬ್ಯಾಂಕ್‌ನಲ್ಲಿ ನಕಲಿ ನೋಟು ಠೇವಣಿ ಇಡಲು ಯತ್ನಿಸಿದ ವ್ಯಕ್ತಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. 500 ಮುಖಬೆಲೆಯ 45,000 ರೂ.ಗಳನ್ನು ಠೇವಣಿ ಇಡಲು ಖಡವಳ್ಳಿ ನಿವಾಸಿಯಾದ ಆರೋಪಿಗಳು ಡಿ.3ರಂದು ಬ್ಯಾಂಕ್‌ಗೆ ಭೇಟಿ ನೀಡಿದ್ದರು. ಆದರೆ, ಪರಿಶೀಲನೆಯ ನಂತರ 45 ನೋಟುಗಳು ನಕಲಿ ಎಂದು ತಿಳಿದುಬಂದಿದೆ.

ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಯಾವುದೇ ಬಂಧನವಾಗಿಲ್ಲ, ನೋಟುಗಳನ್ನು ಎಲ್ಲಿಂದ ತರಲಾಗಿದೆ ಎಂಬುದನ್ನು ಕಂಡುಹಿಡಿಯಲು ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ

ಡೊಂಬಿವಿಲಿ ಪೊಲೀಸರು ಆರೋಪಿಗಳ ವಿರುದ್ಧ ಸೆಕ್ಷನ್ 179 ಮತ್ತು ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಹಾಗು ಇತರೆ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ಉಧಮ್‌ಪುರ ಜಿಲ್ಲೆಯಲ್ಲಿ ಗುಂಡಿಟ್ಟು ಇಬ್ಬರು ಪೊಲೀಸ್ ಸಿಬ್ಬಂದಿಯ ಹತ್ಯೆ

**ಜಮ್ಮು:** ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿ ಭಾನುವಾರ ಮುಂಜಾನೆ ಇಬ್ಬರು ಪೊಲೀಸ್ ಸಿಬ್ಬಂದಿಗೆ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ. ಹತ್ಯೆಯಾದ ಪೊಲೀಸರು ಉತ್ತರ ಕಾಶೀರದ ಸೋಪೋರ್‌ನಿಂದ ಜಮು ಪ್ರದೇಶದ ರಿಯಾಸಿ ಜಿಲ್ಲೆಯ ತಲ್ವಾರದ ಸಬ್ಸಿಡರಿ ತರಬೇತಿ ಕೇಂದ್ರಕ್ಕೆ ಪ್ರಯಾಣಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಳಿಗ್ಗೆ 6.30ರ ಸುಮಾರಿಗೆ ಉಧಮ್‌ಪುರದ ರೆಹೆಂಬಲ್ ಪ್ರದೇಶದ ಕಾಳಿ ಮಾತಾ ದೇವಸ್ಥಾನದ ಬಳಿ ಗುಂಡೇಟಿನಿಂದ ಗಾಯರೊಂಡಿರುವ ದೇಹಗಳು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳೀಯ ಪೊಲೀಸರು ಸ್ಥಳಕ್ಕೆ ಧಾವಿಸಿ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತನಿಖೆ ನಡೆಸುತ್ತಿದ್ದಾರೆ ಇದರ ನಡೆವೆ ಪ್ರಾಥಮಿಕ ತನಿಖೆಯಲ್ಲಿ ಇದು ಸೋದರ ಹತ್ಯೆ ಮತ್ತು ಆತಹತ್ಯೆ ಪ್ರಕರಣ ಎಂದು ಶಂಕೆಯಿದೆ ಎಂದು ಹೇಳಿದ್ದಾರೆ. ಮೃತರಲ್ಲಿ ಒಬ್ಬ ಚಾಲಕ ಕಾನ್‌ಸ್ಟೇಬಲ್ ಮತ್ತೊಬ್ಬರು ಹೆಡ್ ಕಾನ್‌ಸ್ಟೆಬಲ್ ಎಂದು ತಿಳಿದುಬಂದಿದೆ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಕಾನ್‌ಸ್ಟೇಬಲ್ ಪ್ರಾಣಾಪಾಯದಿಂದ ಪಾರಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ.

## ಹೋಲಿ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಕಾರ್ಡಿನಲ್ ಆಗಿ ಭಾರತೀಯ ಪಾದ್ರಿ ನೇಮಕ: ಮೋದಿ ಅಭಿನಂದನೆ

**ನವದೆಹಲಿ:** ಭಾರತದ ಪಾದ್ರಿ, ಜಾರ್ಜ್ ಜೇಕಬ್ ಕೂವಕಾಡ್ ಅವರನ್ನು ಪೋಪ್ ಫ್ರಾನ್ಸಿಸ್ ಅವರು ಹೋಲಿ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಕಾರ್ಡಿನಲ್ ಆಗಿ ನೇಮಿಸಿರುವುದು ಅತ್ಯಂತ ಸಂತೋಷ ಮತ್ತು ಹೆಮ್ಮೆಯ ವಿಷಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಜಾರ್ಜ್ ಕಾರ್ಡಿನಲ್ ಕೂವಕಾಡ್ ಅವರು ಯೇಸುಕ್ರಿಸ್ತನ ಕಟ್ಟಾ ಅನುಯಾಯಿಯಾಗಿ ಮಾನವೀಯತೆಯ ಸೇವೆಗೆ ತಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ ಎಂದು ಅವರು ಎಕ್ಸ್ ಮಾಡಿದ್ದಾರೆ.

ಭಾರತಕ್ಕೆ ಬಹಳ ಸಂತೋಷ ಮತ್ತು ಹೆಮ್ಮೆಯ ವಿಷಯ, ಅವರ ಪವಿತ್ರ ಪೋಪ್ ಫ್ರಾನ್ಸಿಸ್ ಅವರಿಂದ ಪವಿತ್ರ ರೋಮನ್ ಕ್ಯಾಥೋಲಿಕ್ ಚರ್ಚ್‌ನ ಕಾರ್ಡಿನಲ್ ಆಗಿ ಜಾರ್ಜ್ ಜಾಕೋಬ್ ಕೂವಕಾಡ್ ಅವರನ್ನು ರಚಿಸಿದ್ದಕ್ಕಾಗಿ ಸಂತೋಷವಾಗಿದೆ ಎಂದು ಹೇಳಿದ್ದಾರೆ.ಅವರ್ ಎಮಿನೆನ್ಸ್ ಜಾರ್ಜ್ ಕಾರ್ಡಿನಲ್ ಕೂವಕಾಡ್ ಅವರು ಲಾರ್ಡ್ ಜೀಸಸ್ ಕ್ರೈಸ್ಟ್ ಅವರ ಕಟ್ಟಾ ಅನುಯಾಯಿಯಾಗಿ ಮಾನವೀಯತೆಯ



**ವ್ಯಾಟಿಕನ್ ದೇಶದ ಪ್ರಾತಿನಿಧ್ಯಕ್ಕೆ ಮತ್ತಷ್ಟು ಬಲ**

ಸೇವೆಯಲ್ಲಿ ತಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಅವರ ಮುಂದಿನ ಪ್ರಯತ್ನಗಳಿಗೆ ನನ್ನ ಶುಭಾಶಯಗಳು ಎಂದು ಪ್ರಧಾನಮಂತ್ರಿ ಹೇಳಿದರು.

ವ್ಯಾಟಿಕನ್‌ನಲ್ಲಿ ನಡೆದ ಗ್ರ್ಯಾಂಡ್ ಕಾನ್‌ಸ್ಟೆರಿಯಲ್ಲಿ, 51 ವರ್ಷದ ಕೂವಕಾಡ್ ಅವರನ್ನು ಪೋಪ್ ಫ್ರಾನ್ಸಿಸ್ ಅವರು ಕಾರ್ಡಿನಲ್ ಶ್ರೇಣಿಗೆ ಏರಿಸಿದರು. ಪ್ರಸಿದ್ಧ ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ನಡೆದ ಸಮಾರಂಭದಲ್ಲಿ ವಿಶ್ವದಾದ್ಯಂತದ ಪಾದ್ರಿಗಳು ಮತ್ತು ಗಣ್ಯರು ಭಾಗವಹಿಸಿದ್ದರು, ವಿವಿಧ ದೇಶಗಳ 21 ಹೊಸ ಕಾರ್ಡಿನಲ್‌ಗಳ ಸೇರ್ಪಡೆಗೆ ಸಾಕ್ಷಿಯಾಯಿತು.

ಸೇಂಟ್ ಪೀಟರ್ಸ್ ಬೆಸಿಲಿಕಾದ ಬಲಿಪೀಠಕ್ಕೆ 21 ಕಾರ್ಡಿನಲ್-ನಿಯೋಜಿತ ಮೆರವಣಿಗೆಯನ್ನು ಗುರುತಿಸುತ್ತದೆ. ನಂತರ, ಪೋಪ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮತ್ತು ಕಾರ್ಡಿನಲ್-ನಿಯೋಜಿತರಿಗೆ ವಿಧ್ಯುಕ್ತ ಕ್ಯಾಪ್ ಮತ್ತು ಉಂಗುರವನ್ನು ಹಸ್ತಾಂತರಿಸಿದರು, ನಂತರ ಪ್ರಾರ್ಥನೆಯೊಂದಿಗೆ ಪ್ರಮಾಣಪತ್ರವನ್ನು ನೀಡಿದರು.

ಕೂವಕಾಡ್ ಅವರ ನೇಮಕಾತಿಯು ಭಾರತೀಯ ಕಾರ್ಡಿನಲ್‌ಗಳ ಒಟ್ಟು ಸಂಖ್ಯೆಯನ್ನು ಆರಕ್ಕೆ ತರುತ್ತದೆ, ವ್ಯಾಟಿಕನ್‌ನಲ್ಲಿ ದೇಶದ ಪ್ರಾತಿನಿಧ್ಯವನ್ನು ಮತ್ತಷ್ಟು ಬಲಪಡಿಸಿದೆ.

## ಖೈದಿಯ ಗುದನಾಳದಲ್ಲಿತ್ತು ಮೊಬೈಲ್ ಫೋನ್

**ಭಾವಾನಗರ:** ಖೈದಿಯೊಬ್ಬ ಗುದನಾಳದಲ್ಲಿ ಮೊಬೈಲ್ ಫೋನ್ ಇಟ್ಟುಕೊಂಡಿದ್ದ ಘಟನೆ ಗುಜರಾತ್‌ನಲ್ಲಿ ನಡೆದಿದೆ. ಅಲ್ಲಿನ ಭಾವನಗರ ಬಂಧಿಖಾನೆಯಲ್ಲಿ ಪೋಕ್ಸೋ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ರವಿ ಬಾರಯ್ಯ ಎಂಬ ಖೈದಿ ಪೊಲೀಸರಿಂದ ತನ್ನ ಮೊಬೈಲ್ ಫೋನ್ ಮರೆಮಾಚಲು ಅದನ್ನು ತನ್ನ ಗುದನಾಳದಲ್ಲಿ ಬಚ್ಚಿಟ್ಟುಕೊಂಡಿದ್ದ ಎನ್ನಲಾಗಿದೆ.

ಆರೋಪಿಯ ವಿಚಿತ್ರ ವರ್ತನೆ ಗಮನಿಸಿದ ಪೊಲೀಸರು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಪರೀಕ್ಷೆಯ ನಂತರ ವೈದ್ಯರು ಎಕ್ಸ್ ರೇ ಕಂಡು ಬೆಚ್ಚಿ ಬಿದ್ದಿದ್ದಾರೆ. ಅದರಲ್ಲಿ ಕೈದಿಯ ಗುದನಾಳದಲ್ಲಿ ಮೊಬೈಲ್ ಫೋನ್ ಇರುವುದು ಕಂಡುಬಂದಿದೆ. ಜೈಲಿನೊಳಗೆ ಮೊಬೈಲ್ ಫೋನ್‌ಗಳನ್ನು ಬಳಸುವಂತಿಲ್ಲ. ಆದರೆ ಡಿಸೆಂಬರ್ 4 ರಂದು ಕಾರಾಗಹಕ್ಕೆ ಅಧಿಕಾರಿಗಳು ದಾಳಿ ನಡೆಸಿದ ವೇಳೆ



ಮೊಬೈಲ್ ಫೋನ್ ಚಾರ್ಜರ್ ಪತ್ತೆಯಾದಾಗ ಅಧಿಕಾರಿಗಳಿಗೆ ಅನುಮಾನ ಬಂದಿದೆ.

ಎಲ್ಲಾ ಕಡೆ ಹುಡುಕಾಡಿದರೂ ಫೋನ್ ಸಿಗದಿದ್ದಾಗ ಬಾರಯ್ಯನ ವಿಚಿತ್ರ ವರ್ತನೆ ಕಂಡು ಪೊಲೀಸರು ಅನುಮಾನಗೊಂಡು ಆತನ ಸೆಲ್‌ನಲ್ಲಿ ಹುಡುಕಾಟ ನಡೆಸಿದ್ದಾರೆ. ಆದರೆ ಫೋನ್ ಪತ್ತೆಯಾಗಿಲ್ಲ. ಆದಾಗ್ಯೂ, ತಕ್ಷಣ ಆತನನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಅಲ್ಲಿ ಎಕ್ಸ್ ರೇ ತೆಗೆಸಲಾಯಿತು. ಸ್ಕ್ಯಾನ್ ಮಾಡಿದಾಗ ಗುದದ್ವಾರದಲ್ಲಿ ಮೊಬೈಲ್ ಇರುವುದು ಪತ್ತೆಯಾಗಿದೆ.

## 10 ಬಾಂಗ್ಲಾದೇಶಿ ಹಿಂದೂಗಳ ಬಂಧನ

**ಅಗರ್ತಲಾ:** ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯಿಂದ ಆ ದೇಶ ತೊರೆದು ಅಕ್ರಮವಾಗಿ ಭಾರತಕ್ಕೆ ಪ್ರವೇಶಿಸಿರುವ ಹಿಂದೂ ಸಮುದಾಯದ 10 ಬಾಂಗ್ಲಾ ದೇಶಿಗರನ್ನು ತ್ರಿಪುರಾ ಪೊಲೀಸರು ಬಂಧಿಸಿದ್ದಾರೆ. ಇಬ್ಬರು ಮಹಿಳೆಯರು, ಮೂವರು ಹದಿಹರೆಯದವರು ಮತ್ತು ವೃದ್ಧರು ಸೇರಿದಂತೆ 10 ಬಾಂಗ್ಲಾದೇಶಿ ಪ್ರಜೆಗಳನ್ನು ತ್ರಿಪುರಾದ ಅಂಬಾಸಾ ರೈಲು ನಿಲ್ದಾಣದಿಂದ ಅಸ್ಸಾಂನ ಸಿಲ್ಚಾರ್‌ಗೆ ರೈಲು ಹತ್ತಲು ಪ್ರಯತ್ನಿಸುತ್ತಿದ್ದಾಗ ಬಂಧಿಸಲಾಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾವು ಬಾಂಗ್ಲಾದೇಶಿ ಪ್ರಜೆಗಳ ವಿರುದ್ಧ ಕಾನೂನಿನ ಪ್ರಕಾರ ಕಾನೂನು ಕ್ರಮಗಳನ್ನು ಪ್ರಾರಂಭಿಸುತ್ತೇವೆ ಎಂದು ಅಧಿಕಾರಿ ಹೇಳಿದರು.ಬಂಧಿತ ವ್ಯಕ್ತಿಗಳಲ್ಲಿ ಒಬ್ಬರಾದ ಶಂಕರ್ ಚಂದ್ರ ಸರ್ಕಾರ ಅವರು ನಿರಂತರ ಬೆದರಿಕೆ ಮತ್ತು ಬೆದರಿಕೆಯನ್ನು ಎದುರಿಸಿದ ನಂತರ ಕಿಶೋರ್‌ಗಂಜ್ ಜಿಲ್ಲೆಯ ತಮ ಗ್ರಾಮವಾದ ಧನ್‌ಪುರದಿಂದ ಭಾರತಕ್ಕೆ ಬಂದಿದ್ದೇವೆ ಎಂದು ತಿಳಿಸಿದ್ದಾರೆ.



ಕಾಡಿನ ಬೆಟ್ಟಗಳ ಮೂಲಕ ಟ್ರೆಕ್ಕಿಂಗ್ ಮಾಡಿದ ನಂತರ, ನಾವು ಶನಿವಾರ ಕಮಲಪುರದ ಮೂಲಕ (ತ್ರಿಪುರದ ಧಲೈ ಜಿಲ್ಲೆಯಲ್ಲಿ) ಭಾರತವನ್ನು ಪ್ರವೇಶಿಸಿದೆವು. ಬಾಡಿಗೆ ಮನೆಯಲ್ಲಿ ಇರಲು ಅಸ್ಸಾಂನ ಸಿಲ್ಚಾರ್‌ಗೆ ಹೋಗಲು ಪ್ರಯತ್ನಿಸುತ್ತೇವು ಎಂದು ತಿಳಿಸಿದ್ದಾರೆ.

ನಾವು ಯಾವುದೇ ಸಂದರ್ಭದಲ್ಲೂ ಬಾಂಗ್ಲಾ ದೇಶಕ್ಕೆ ಹಿಂತಿರುಗುವುದಿಲ್ಲ. ಬಾಂಗ್ಲಾದೇಶದ ಪರಿಸ್ಥಿತಿ ತುಂಬಾ ಕಠೋರವಾಗಿದೆ.

ಹಿಂದೂಗಳ ಜೀವ ಮತ್ತು ಆಸ್ತಿಗಳ ಮೇಲಿನ ದಾಳಿಗಳು ದೈನಂದಿನ ವ್ಯವಹಾರವಾಗಿದೆ ಎಂದು ಚಾಲಕನಾಗಿ ಕೆಲಸ ಮಾಡುತ್ತಿದ್ದ ಸರ್ಕಾರ್ ಹೇಳಿದರು.

## 2047ರ ವೇಳೆಗೆ 30 ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಷ್ಟ್ರವಾಗಲಿದೆ ಭಾರತ


**ಜಮಶೆಡ್ಪುರ:** ಮುಂಬರುವ 2047ರ ವೇಳೆಗೆ ಭಾರತವು 30 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪ್ರತಿಪಾದಿಸಿದ್ದಾರೆ.

ಇಲ್ಲಿ ನಡೆದ ಎಕ್ಸ್ ಎಲ್‌ಆರ್‌ಐ-ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ವರ್ಷಪೂರ್ತಿ ಪ್ಲಾಟಿನಂ ಜುಬಿಲಿ ಆಚರಣೆಯ ಸಮಾರೋಪ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಪ್ರಧಾನ್ ಅವರು, ವೇಗವಾಗಿ ಬೆಳೆಯುತ್ತಿರುವ ಜಾಗತಿಕ ಆರ್ಥಿಕತೆಯಾಗಿರುವ ಭಾರತವು ಪ್ರಸ್ತುತ ಐದನೇ ಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ ಮೂರನೇ ಸ್ಥಾನವನ್ನು ಪಡೆಯಲಿದೆ ಎಂದು ಹೇಳಿದರು.

75 ವರ್ಷಗಳ ಹಿಂದೆ ಎಕ್‌ಸಎಲ್‌ಆರ್‌ಐ ಅಸ್ತಿತ್ವಕ್ಕೆ ಬಂದಾಗ ಜಗತ್ತು ಭಾರತವನ್ನು ಆರ್ಥಿಕ ರಂಗದಲ್ಲಿ ಎಣಿಸಿರಲಿಲ್ಲ. ಇಂದು ನಾವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಮತ್ತು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ, 3 ಟ್ರಿಲಿಯನ್ ಅಮೆರಿಕನ್ ಡಾಲರ್ ಗಾತ್ರದೊಂದಿಗೆ.

**ನಾವು ಸಂಪತ್ತು ಸೃಷ್ಟಿಕರ್ತರು, ಉದ್ಯೋಗ ಸೃಷ್ಟಿಕರ್ತರಾಗಬೇಕು. ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯ ನಮಲ್ಲಿದೆ. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಕ್ಕಾಗಿ ಜಗತ್ತು ಭಾರತದತ್ತ ನೋಡುತ್ತಿದೆ? ವಿಶ್ವದ ಶೇಕಡಾ 46 ರಷ್ಟು ಡಿಜಿಟಲ್ ವಹಿವಾಟುಗಳು ನಮ ದೇಶದಲ್ಲಿ ನಡೆಯುತ್ತವೆ. ನಾವು ಸೇವಾ ವಲಯದಲ್ಲಿ ಸ್ವಾವಲಂಬಿಗಳಾಗಿದ್ದಾರೆ.**

**ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ**



ನಾವು ಮುಂದಿನ ಮೂರು ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ಗಳಲ್ಲಿ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ನಮ ಆರ್ಥಿಕತೆಯು 2047 ರ ವೇಳೆಗೆ 30 ಟ್ರಿಲಿಯನ್ ಡಾಲರ್ಗೆ ಬೆಳೆಯುತ್ತದೆ ಎಂದು ಅವರು ಹೇಳಿದರು.

ಸಂಪತ್ತು ಮತ್ತು ಉದ್ಯೋಗಗಳನ್ನು ಸೃಷ್ಟಿಸಲು ಹೊಸ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವರು ಹೇಳಿದರು.ಪ್ರಧಾನ್ ಅವರು ದೇಶವನ್ನು ಬಹತ್ ಶಕ್ತಿ ಕೇಂದ್ರವಾಗಿ ಮತ್ತು ವಿಶ್ವದ ಪ್ರೇರಕ ಶಕ್ತಿಯನ್ನಾಗಿ ಮಾಡುವಲ್ಲಿ ರಚನಾತಕ ಪಾತ್ರವನ್ನು ವಹಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

## ಪೊಲೀಸ್ ಶಸ್ತ್ರಾಗಾರದಲ್ಲೇ ಕಳ್ಳತನ

**ಭೋಪಾಲ್:** ಮಧ್ಯಪ್ರದೇಶ ಪೊಲೀಸ್ ಶಸ್ತ್ರಾಗಾರದಲ್ಲೇ ಕಳ್ಳತನ ನಡೆದಿದ್ದು, 9ಎಂಎಂ ಪಿಸ್ತೂಲ್ ಹಾಗೂ ಸ್ವಯಂಚಾಲಿತ ರೈಫಲ್‌ಗಳ 200 ಕಾಟ್ರ್ರಿಜ್ ಗಳು ನಾಪತ್ತೆಯಾಗಿವೆ.

ಈ ಘಟನೆ ಬೆಳಕಿಗೆ ಬಂದ ನಂತರ ಎಸ್‌ಎಎಫ್‌ನ 2 ಮತ್ತು 5 ನೇ ಬೆಟಾಲಿಯನ್‌ನ ಕಮಾಂಡೆಂಟ್‌ಗಳು ತಮ್ಮ ಕಂಪನಿಯ ಕಮಾಂಡರ್‌ಗಳನ್ನು ಅಮಾನತುಗೊಳಿಸಿದ್ದಾರೆ ಎಂದು ಮೊರೆನಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಗೋಪಾಲ್ ಧಕಡ್ ತಿಳಿಸಿದ್ದಾರೆ.

ಶಸ್ತ್ರಾಗಾರದ ಗಾರ್ಡ್‌ಗಳು ಕಳ್ಳತನದ ಬಗ್ಗೆ ಪೊಲೀಸ್ ಲೈನ್‌ಗಳ ಮೀಸಲು ನಿರೀಕ್ಷಕರಿಗೆ ಮಾಹಿತಿ ನೀಡಿದ ನಂತರ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಅಧಿಕಾರಿ ಹೇಳಿದರು. ಎಸ್‌ಎಎಫ್‌ನ ಎರಡು ಶಸ್ತ್ರಾಸ್ತ್ರಗಳಿಂದ ಪಿಸ್ತೂಲ್‌ಗಳನ್ನು ಕಳವು ಮಾಡಲಾಗಿದೆ ಎಂಬ ಮಾಹಿತಿಯನ್ನು ಪೊಲೀಸ್ ಅಧಿಕಾರಿಗಳು ನಿರಾಕರಿಸಿದ್ದಾರೆ. ಘಟನೆ ಬೆನ್ನಲ್ಲೇ ಚಂಬಲ್ ವಲಯ ಪೊಲೀಸ್ ಮಹಾನಿರೀಕ್ಷಕ ಸುಶಾಂತ್ ಸಕ್ಸೇನಾ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಪದೇ ಪದೇ ಪ್ರಯತ್ನಿಸಿದರೂ, ಐಜಿ ಸಕ್ಸೇನಾ ಫೋನ್‌ನಲ್ಲಿ ಸಂಪಕಕ್ಕೆ ಸಿಕ್ಕಿಲ್ಲ ಎಂಬ ಮಾಹಿತಿಯನ್ನು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

## ಮಹಾಯುತಿ ಗೆಲುವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಶರದ್‌ಪವಾರ್

**ಕೊಲ್ಲಾಪುರ:** ಪ್ರತಿಪಕ್ಷಗಳು ತನ್ನ ಸೋಲಿನ ಬಗ್ಗೆ ಎದೆಗುಂದದೆ ಬಿಜೆಪಿ ನೇತತ್ವದ ಮಹಾಯುತಿಯ ಬಹತ್ ವಿಜಯದಿಂದ ಉತ್ಸಾಹ ತೋರದ ಜನರ ಬಳಿಗೆ ಹಿಂತಿರುಗಬೇಕು ಎಂದು ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ ಶರದ್ ಪವಾರ್ ಕರೆ ನೀಡಿದ್ದಾರೆ.

ಲಡ್ಕಿ ಬಹೆನ್ ಯೋಜನೆಯಡಿ ಮಹಿಳೆಯರಿಗೆ ನೀಡುವ ಧನಸಹಾಯವನ್ನು 1,500 ರಿಂದ 2,100 ರೂ.ಗೆ ಹೆಚ್ಚಿಸುವುದು ಸೇರಿದಂತೆ ಆಡಳಿತಾರೂಢ ಮೈತ್ರಿಕೂಟ ನೀಡಿದ ಎಲ್ಲಾ ಚುನಾವಣಾ ಭರವಸೆಗಳನ್ನು ಶೀಘ್ರದಲ್ಲಿಯೇ ಅನುಷ್ಠಾನಗೊಳಿಸುವಂತೆ ನೋಡಿಕೊಳ್ಳುವುದು ಪ್ರತಿಪಕ್ಷಗಳ ಆದ್ಯತೆಯಾಗಿದೆ ಎಂದು ಅವರು ಹೇಳಿದರು.



ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಪಡೆದ ಮತಗಳು ಮತ್ತು ರಾಜಕೀಯ ಪಕ್ಷಗಳು ಗೆದ್ದ ಸ್ಥಾನಗಳ ನಡುವಿನ ಹೋಲಿಕೆ ಆಶ್ಚರ್ಯಕರವಾಗಿದೆ ಎಂದು ಪವಾರ್ ಹೇಳಿದರು. ನಾವು ಸೋಲನುಭವಿಸಿರುವುದು ನಿಜ, ನಾವು ಅದರ ಬಗ್ಗೆ ಚಿಂತಿಸದೆ ಜನರ ಬಳಿಗೆ ಹೋಗಬೇಕು, ಏಕೆಂದರೆ ಚುನಾವಣಾ ಫಲಿತಾಂಶಗಳ ಬಗ್ಗೆ ಜನರಲ್ಲಿ ಯಾವುದೇ ಉತ್ಸಾಹವು ಗೋಚರಿಸುವುದಿಲ್ಲ. ಸಾಕಷ್ಟು ಅಸಮಾಧಾನವಿದೆ ಎಂದು ಹಿರಿಯ ರಾಜಕಾರಣಿ ಹೇಳಿದರು.

ಪತ್ರಿಕೆಯ ಜಾಹೀರಾತಿನಲ್ಲಿ, ಶಿವಸೇನೆ ಶ್ಲಾಘಿಸಿದ ನಂತರ ಸಮಾಜವಾದಿ ಪಕ್ಷದ ರಾಜ್ಯ ಮುಖ್ಯಸ್ಥ ಅಬು ಅಸಿಮ್ ಅಜಿ ಅವರು ತಮ ಪಕ್ಷವು ಪ್ರತಿಪಕ್ಷದ ಮಹಾ ವಿಕಾಸ್ ಅಘಾಡಿ ಮೈತ್ರಿಯಿಂದ ಹೊರಬರುತ್ತಿದೆ ಎಂದು ಘೋಷಿಸಿದ ಪ್ರಶ್ನೆಗೆ, ಬಾಬರಿ ಮಸೀದಿ ಕೆಡವಿದ್ದವರು ಅಭಿವೃದ್ಧಿ ಕೆಳಗೆಆಟವಾಡಲು ಪ್ರಯತ್ನಿಸಿದರು ಎಂದಿದ್ದಾರೆ.

**ನವೆಂಬರ್ 20 ರಂದು ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ-ಎನ್‌ಸಿಪಿ-ಶಿವಸೇನೆ ಮೈತ್ರಿಕೂಟ 288 ಸ್ಥಾನಗಳ ಪೈಕಿ 230 ಸ್ಥಾನಗಳನ್ನು ಗೆದ್ದುಕೊಂಡಿದೆ.ವಿಧಾನಸಭೆಯಲ್ಲಿ ಪ್ರತಿಪಕ್ಷಗಳ ಬಲ ಕಡಿಮೆಯಾಗಿದೆ, ಆದರೆ ಹಲವು ಯುವ ವಿರೋಧ ಪಕ್ಷದ ಶಾಸಕರು ಒಂದೆರಡು ಅಧಿವೇಶನಗಳ ನಂತರ ತಮ ಸಾಮರ್ಥ್ಯವನ್ನು ತೋರಿಸುತ್ತಾರೆ**

**-ಶರದ್ ಪವಾರ್, ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ**

ಅಖಿಲೇಶ್ ಯಾದವ್ ನೇತತ್ವದ ಪಕ್ಷದ ಕೇಂದ್ರ ನಾಯಕತ್ವವು ಪ್ರತಿಪಕ್ಷಗಳ ಒಗ್ಗಟ್ಟು ಅಗತ್ಯ ಎಂದು ದಢವಾದ ಅಭಿಪ್ರಾಯವನ್ನು ಹೊಂದಿದೆ ಎಂದು ಅವರು ಹೇಳಿದರು.

## ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ: ಶಿಕ್ಷಕನ ಬಂಧನ

**ಥಾಣೆ:** ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ಹಿಂದುಳಿದ ಮಕ್ಕಳ ಕೋಚಿಂಗ್ ಸೆಂಟರ್‌ನ ಮೂವರು ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಮೇಲೆ 35 ವರ್ಷದ ಶಿಕ್ಷಕನನ್ನು ಬಂಧಿಸಲಾಗಿದೆ.

ಬಾಲಕರಿಗೆ ಮಸಾಜ್ ಮಾಡುವಂತೆ ಒತ್ತಾಯಿಸಿದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ, ಅನುಚಿತವಾಗಿ ಸ್ಪರ್ಶಿಸಿ ಅವರ ಅಶ್ಲೀಲ ವಿಡಿಯೋಗಳನ್ನು ರೆಕಾರ್ಡ್ ಮಾಡಿದ್ದಾರೆ ಎಂದು ಅಂಬರನಾಥ್ ಪೊಲೀಸ್ ಠಾಣೆಯ ಹಿರಿಯ ಇನ್‌ಸ್ಪೆಕ್ಟರ್ ಬಾಲಾಜಿ ಪಂಢರೆ ತಿಳಿಸಿದ್ದಾರೆ.

ಒಂಬತ್ತರಿಂದ 15 ವರ್ಷದೊಳಗಿನ ಬಾಲಕರು ಸೆಪ್ಟೆಂಬರ್‌ನಲ್ಲಿ ತಮ ತರಗತಿಗಳನ್ನು ಸ್ಥಗಿತಗೊಳಿಸಿ ಕೇಂದ್ರಕ್ಕೆ ಮರಳಲು ನಿರಾಕರಿಸಿದಾಗ ನಿಂದನೆ ಬೆಳಕಿಗೆ ಬಂದಿದೆ ಎಂದು ಅವರು ಹೇಳಿದರು. ಅಂತಿಮವಾಗಿ, ಬಲಿಪಶುಗಳಲ್ಲಿ ಒಬ್ಬರು ತಮ ಕುಟುಂಬದವರಿಗೆ ವಿಷಯ ತಿಳಿಸಿದಾಗ ಸಂಸ್ಥೆಯ ಆಡಳಿತ ಮಂಡಳಿ ಪೊಲೀಸರಿಗೆ ದೂರು ನೀಡಿದೆ.ಪೊಲೀಸರು ಶಿಕ್ಷಕರ ಮನೆಯಿಂದ ಎಲೆಕ್ಟ್ರಾನಿಕ್ ಸಾಧನಗಳನ್ನು ವಶಪಡಿಸಿಕೊಂಡಿದ್ದಾರೆ ಮತ್ತು ಸಾಧನಗಳಲ್ಲಿ ಕಂಡುಬರುವ ವೀಡಿಯೊಗಳ ವಿಷಯವನ್ನು ಪರಿಶೀಲಿಸುತ್ತಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

## ಬಾಂಗ್ಲಾದಲ್ಲಿ ಇಸ್ಕಾನ್ ಮಂದಿರಕ್ಕೆ ಬೆಂಕಿ ಇಟ್ಟ ಕಿಡಿಗೇಡಿಗಳು: ದೇವರ ಮೂರ್ತಿಗೆ ಹಾನಿ

**ಢಾಕಾ:** ನೆರೆಯ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದಾಳಿ ಮುದುವರೆದಿದೆ. ಢಾಕಾದಲ್ಲಿರುವ ಇಸ್ಕಾನ್ ಕೇಂದ್ರಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಅದರಲ್ಲಿದ್ದ 2 ದೇವಸ್ಥಾನ ಹಾಗೂ ದೇವರ ಮೂರ್ತಿಗಳು ಭಾಗಶಃ ಸುಟ್ಟು ಕರಕಲಾಗಿವೆ.

ಈ ಕುರಿತು ಕೋಲ್ಕತಾ ಇಸ್ಕಾನ್‌ನ ಉಪಾಧ್ಯಕ್ಷ ರಾಧಾರಮಣ ದಾಸ್ ಹಾಗೂ ಬಾಂಗ್ಲಾ ಇಸ್ಕಾನ್ ಪ್ರಧಾನ ಕಾರ್ಯದರ್ಶಿ ಚಾರು ಚಂದ್ರದಾಸ ಬ್ರಹ್ಮಚಾರಿ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಬಾಂಗ್ಲಾದ ಢಾಕಾ ಜಿಲ್ಲೆಯಲ್ಲಿರುವ ನಮ್ಮಟ್ಟಾ ಇಸ್ಕಾನ್ ಕೇಂದ್ರಕ್ಕೆ ಬೆಂಕಿ ಹಚ್ಚಲಾಗಿದೆ. ಪರಿಣಾಮ ಅಲ್ಲಿದ್ದ ರಾಧಾ ಕೃಷ್ಣ ದೇವಸ್ಥಾನ ಹಾಗೂ ಮಹಾಭಾಗ್ಯ ಲಕ್ಷ್ಮೀ ನಾರಾಯಣ ದೇವಸ್ಥಾನಗಳು ಬೆಂಕಿಗೆ ಆಹುತಿಯಾಗಿವೆ. ಬೆಳಗಿನ ಜಾವ 2-3 ಗಂಟೆಯ ವೇಳೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಇದರಿಂದ ಲಕ್ಷ್ಮೀ ನಾರಾಯಣಮೂರ್ತಿ ಸೇರಿದಂತೆ ಕೆಲವು ಮೂರ್ತಿಗಳು ಸುಟ್ಟು ಹೋಗಿವೆ. ಬಳಿಕ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ಆರಿಸಿದ್ದಾರೆ ಎಂದು ವರದಿಯಾಗಿದೆ.



# ಪಾಕಿಸ್ತಾನ ಪೊಲೀಸ್ ಸೇವೆಗೆ ಮೊದಲ ಬಾರಿಗೆ ಹಿಂದೂ ಯುವಕ ಆಯ್ಕೆ

## ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಮೂಲಕ ತಳಮಟ್ಟದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬಹುದು

**ಇಸ್ಲಾಮಾಬಾದ್:** ಪಾಕಿಸ್ತಾನದ ಕೇಂದ್ರೀಯ ಸುಪೀರಿಯರ್ ಸರ್ವೀಸಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೂಲಕ ರಾಜೇಂದರ್ ಮೇಘವಾರ್ ಎಂಬುವವರು ಪಾಕಿಸ್ತಾನ ಪೊಲೀಸ್ ಸೇವೆಗೆ ಆಯ್ಕೆಯಾದ ಮೊದಲ 'ಹಿಂದು' ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪಾಕಿಸ್ತಾನದ ಪೊಲೀಸ್ ಸೇವೆ ಆಯ್ಕೆಯಾದ ನಂತರ ಫೈಸಲಾಬಾದ್‌ನಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಎಸ್‌ಪಿ) ಆಗಿ ನೇಮಕಗೊಂಡಿದ್ದಾರೆ. ರಾಜೇಂದರ್ ಮೇಘವಾರ್, ಸಿಂದ್ ಪ್ರಾಂತ್ಯದ ಬಾದಿನ್ ಪ್ರದೇಶದವರು. ಪಾಕಿಸ್ತಾನದಲ್ಲಿ ಇನ್‌ಸ್ಪೆಕ್ಟರ್ ಹಾಗೂ ಸಬ್ ಇನ್‌ಸ್ಪೆಕ್ಟರ್ ದರ್ಜೆಯ ಹುದ್ದೆಗಳಲ್ಲಿ ಹಿಂದೂ ಸಮುದಾಯದವರು ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದೀಗ ಮೊದಲ ಬಾರಿಗೆ ಉನ್ನತ ಹುದ್ದೆಯಾದ 'ಪಾಕಿಸ್ತಾನ ಪೊಲೀಸ್ ಸೇವೆ'ಗೆ ಹಿಂದು ವ್ಯಕ್ತಿಯೊಬ್ಬರು ಆಯ್ಕೆಯಾಗಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಮೂಲಕ ತಳಮಟ್ಟದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಬಹುದು. ಇಂತಹ ಅವಕಾಶ ಇತರೆ ಇಲಾಖೆಗಳಲ್ಲಿ ಸಿಗುವುದಿಲ್ಲ' ಎಂದು ಉನ್ನತ ಹುದ್ದೆಗೆ ಆಯ್ಕೆಯಾದ ನಂತರ ರಾಜೇಂದರ್ ಸಂತಸ ವ್ಯಕ್ತಪಡಿಸಿದ್ದಾರೆ. ರಾಜೇಂದರ್ ಮೇಘವಾರ್ ನೇಮಕವು ಪಾಕಿಸ್ತಾನ ಪೊಲೀಸರಲ್ಲಿ ಇನ್ನಷ್ಟು ಸಾಧನೆಗಳನ್ನು ತರಲಿದೆ. ಹಿಂದೂ ಅಧಿಕಾರಿಯೊಬ್ಬರು ಪಾಕಿಸ್ತಾನ ಪೊಲೀಸ್ ಪಡೆಯ ಭಾಗವಾಗಿರುವುದು ಸಂತಸ ತಂದಿದೆ. ಇದು ಪೊಲೀಸ್ ಪಡೆ ಎಲ್ಲಾ ವಿಭಾಗಗಳನ್ನು ಒಟ್ಟುಗೂಡಿಸಲು ಸಹಾಯ ಮಾಡುತ್ತದೆ. ಜತೆಗೆ ದೇಶದಲ್ಲಿರುವ ಅಲ್ಪಸಂಖ್ಯಾತರೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವ ಅವಕಾಶ ಕಲ್ಪಿಸುತ್ತದೆ ಎಂದು ಹಿರಿಯ ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜೇಂದರ್ ಮೇಘವಾರ್ ತಮ್ಮ ವೃತ್ತಿಜೀವನದಲ್ಲಿ ಗಮನಾರ್ಹ ಸಾಧನೆ ಮಾಡಿರುವುದು ಮಾತ್ರವಲ್ಲದೆ ಸಮುದಾಯಕ್ಕೆ ಹೆಮ್ಮೆ ತಂದಿದ್ದಾರೆ. ಅವರ ನೇಮಕವು ಪಾಕಿಸ್ತಾನದಲ್ಲಿರುವ ಹಿಂದೂ ಅಲ್ಪಸಂಖ್ಯಾತರಿಗೆ ಹೆಮ್ಮೆಯ ಕ್ಷಣವಾಗಿದೆ.

ಮುಖ್ಯವಾಗಿ ಸಮುದಾಯದ ಇನ್ನಷ್ಟು ಯುವಜನರಿಗೆ ಪ್ರೇರೇಪಣೆ ನೀಡುತ್ತದೆ. ಇದು ದೇಶದ ನಾಗರಿಕ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯದ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ ಎಂದು ಪಾಕಿಸ್ತಾನದ ಹಿಂದೂ ಮಂದಿರ ನಿರ್ವಹಣಾ ಸಮಿತಿಯ ಸದಸ್ಯ ಕ್ರಿಶನ್ ಶರ್ಮಾ ಹೇಳಿದ್ದಾರೆ.

### ಐವರು ಹಿಂದೂ ವಿದ್ಯಾರ್ಥಿಗಳು ಉತ್ತೀರ್ಣ

**ಪ್ರತಿಷ್ಠಿತ ಕೇಂದ್ರೀಯ ಸುಪೀರಿಯರ್ ಸರ್ವೀಸಸ್ ಪರೀಕ್ಷೆಯಲ್ಲಿ ಹಿಂದೂ ವಿದ್ಯಾರ್ಥಿಗಳಾದ ರೂಪ್ ಮತಿ ಮೇಘವಾರ್, ಪೂಜಾ ಓಡ್, ಸುನೀಲ್ ಮೇಘವಾರ್, ಜೀವನ್ ರಿಬಾರಿ ಮತ್ತು ಭೀಶಮ್ ಮೇಘವಾರ್ ಉತ್ತೀರ್ಣರಾಗಿದ್ದಾರೆ. ಇವರು ಪಾಕಿಸ್ತಾನದಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಲಿದ್ದಾರೆ.**



- **ಪಾಕಿಸ್ತಾನದ ಕೇಂದ್ರೀಯ ಸುಪೀರಿಯರ್ ಸರ್ವೀಸಸ್ ಪರೀಕ್ಷೆಯಲ್ಲಿ ಹಿಂದೂ ಯುವಕ ಉತ್ತೀರ್ಣ**
- **ಪಾಕಿಸ್ತಾನ ಪೊಲೀಸ್ ಸೇವೆಗೆ ಹಿಂದೂ ಯುವಕ ರಾಜೇಂದರ್ ಮೇಘವಾರ್ ಆಯ್ಕೆ**
- **ಫೈಸಲಾಬಾದ್‌ನಲ್ಲಿ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ ಮೊದಲ ಪೋಸ್ಟಿಂಗ್**

### ಐತಿಹಾಸಿಕ ಹಿಂದೂ ದೇವಸ್ಥಾನದ ಪುನರ್ ನಿರ್ಮಾಣ

**ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಐತಿಹಾಸಿಕ ಪ್ರಾಮುಖ್ಯತೆ ಹೊಂದಿರುವ ಬಾವ್ಲೊಲಿ ಸಾಹಿಬ್ ಮಂದಿರವನ್ನು ಪಾಕಿಸ್ತಾನ ಸರ್ಕಾರ ಪುನರ್ ನಿರ್ಮಾಣ ಮಾಡಲು ತೀರ್ಮಾನಿಸಿದೆ. ಈ ದೇವಸ್ಥಾನ ಪುನರ್ ನಿರ್ಮಾಣವಾಗಬೇಕೆಂಬುದು ಇಲ್ಲಿನ ಹಿಂದೂಗಳ ಬೇಡಿಕೆಯಾಗಿತ್ತು. ಮಂದಿರದ ಪುನರ್ ನಿರ್ಮಾಣ ಕೆಲಸಕ್ಕೆ 10 ಮಿಲಿಯನ್ ಪಾಕಿಸ್ತಾನ ರೂಪಾಯಿ ಹಣವನ್ನು ಅನುದಾನದ ರೂಪದಲ್ಲಿ ಎತ್ತಿಡಲಾಗಿದೆ ಎನ್ನಲಾಗಿದೆ. ಅಂದರೆ ಪಾಕಿಸ್ತಾನದ ರೂಪಾಯಿಯ ಲೆಕ್ಕದಲ್ಲಿ 1 ಕೋಟಿ ಪಾಕಿಸ್ತಾನ ರೂ. ಅನುದಾನ ಮೀಸಲಿಟ್ಟಿದೆ. ಈ ದೇಗುಲದ ಮೊದಲ ಹಂತದ ಕಾಮಗಾರಿ ಸದ್ಯದಲ್ಲೇ ಆರಂಭವಾಗಲಿದೆ. ದಿ ಇವ್ಯಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ (ಇಟಿಪಿಬಿ) ಕಾಮಗಾರಿಯ ಹೊಣೆ ಹೊತ್ತಿದೆ.**

## ಭಾರತೀಯ ವಿದ್ಯಾರ್ಥಿಯನ್ನ ಗುಂಡಿಕ್ಕಿ ಹತ್ಯೆ: ಇಬ್ಬರು ಶಂಕಿತರ ಬಂಧನ

**ಕೆನಡಾ:** 20 ವರ್ಷದ ಭಾರತೀಯ ವಿದ್ಯಾರ್ಥಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ಕೆನಡಾದ ಎಡ್ಮಂಟನ್‌ನ ಅಪಾರ್ಟ್‌ಮೆಂಟ್‌ವೊಂದರಲ್ಲಿ ನಡೆದಿದೆ. ಸೆಕ್ಯೂರಿಟಿ ಗಾರ್ಡ್ ಆಗಿಯೂ ಕೆಲಸ ಮಾಡುತ್ತಿದ್ದ ಹರ್ಷನದೀಪ್ ಸಿಂಗ್‌ನನ್ನು ಮಧ್ಯರಾತ್ರಿ 12:30ರ ಸುಮಾರಿಗೆ ಶೂಟೌಟ್ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಶಂಕಿತರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರನ್ನು ಇವಾನ್ ರೈನ್ ಮತ್ತು ಜುಡಿತ್ ಸಾಲ್ಟ್ಯಾಕ್ಸ್ ಎಂದು ಗುರುತಿಸಲಾಗಿದೆ. ಮೂವರು ಸದಸ್ಯರ ಗ್ಯಾಂಗ್ ಹರ್ಷನದೀಪ್‌ಗೆ ಗುಂಡಿಕ್ಕಿ ಹತ್ಯೆಗೈಯ್ಯುವ ದೃಶ್ಯ ಸಿಸಿಟಿವಿ ವೀಡಿಯೋದಲ್ಲಿ ರೆಕಾರ್ಡ್ ಆಗಿದೆ. ಇದನ್ನೂಕೊಲೆಗೆ ನಿರ್ದಿಷ್ಟ ಕಾರಣ ತಿಳಿದು ಬಂದಿಲ್ಲ. ಘಟನೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಪೊಲೀಸರು ಹರ್ಷನದೀಪ್ ಸಿಂಗ್‌ನನ್ನು ಆಸ್ಪತ್ರಗೆ ದಾಖಲಿಸಿದ್ದಾರೆ. ಅಷ್ಟು ಹೊತ್ತಿಗಾಗಲೇ ಹರ್ಷನದೀಪ್ ಮೃತಪಟ್ಟಿದ್ದರು ಎಂದು ವೈದ್ಯರು ತಿಳಿಸಿದ್ದಾರೆ.

# 'ಐ ಲವ್ ಯು ಬೆಂಗಳೂರು' ಅಂತ ಕನ್ನಡದಲ್ಲೇ ಮಾತನಾಡಿದ ಸನ್ನಿ ಲಿಯೋನ್

ಬಾಲಿವುಡ್ ಬೆಡಗಿ ಸನ್ನಿ ಲಿಯೋನ್ ಅವರು ಡಿ.7ರಂದು ಬೆಂಗಳೂರಿಗೆ ಆಗಮಿಸಿದ್ದು, ಈ ವೇಳೆ ಕನ್ನಡದಲ್ಲಿ ಮಾತನಾಡಿದ್ದಾರೆ. ಈ ವೇಳೆ, ಐ ಲವ್ ಯು ಬೆಂಗಳೂರು ಎಂದು ನಟಿ ಜೋರಾಗಿ ಕೂಗಿದ್ದಾರೆ. ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಸನ್ನಿ ಲಿಯೋನ್ ಆಗಮಿಸಿದರು. ಆಗ ಕನ್ನಡ ಕಲಿಯುತ್ತೇನೆ ಎಂದು ಮಾತು ಆರಂಭಿಸಿದ ಸನ್ನಿ ಲಿಯೋನ್, ಐ ಲವ್ ಯು ಬೆಂಗಳೂರು ಎಂದು ಜೋರಾಗಿ ಕೂಗಿದ್ದಾರೆ. ಅಷ್ಟೇ ಅಲ್ಲದೆ, ನನಗೆ ಸ್ವಲ್ಪ ಕನ್ನಡ ಬರುತ್ತದೆ. ಇನ್ನೂ ಕಲಿಯುತ್ತೇನೆ ಎಂದು ಹೇಳಿ ಗಮನ ಸೆಳೆದಿದ್ದಾರೆ. ಅಂದಹಾಗೆ, ಲವ್ ಯೂ ಆಲಿಯಾ, ಡಿಕೆ, ಚಾಂಪಿಯನ್ ಸಿನಿಮಾಗಳಲ್ಲಿ ಸ್ಪೆಷಲ್ ಹಾಡಿಗೆ ಸನ್ನಿ ಲಿಯೋನ್ ಹೆಜ್ಜೆ ಹಾಕಿದ್ದಾರೆ. ಹಾಗಾಗಿ ಕರ್ನಾಟಕ ಮತ್ತು ಕನ್ನಡ ಸಿನಿಮಾ ಪ್ರೇಕ್ಷಕರಿಗೆ ಅವರು ಮತ್ತಷ್ಟು ಹತ್ತಿರವಾಗಿದೆ. ಇನ್ನೂ ಈ ಹಿಂದೆ ಮಂಡ್ಯದ ಗ್ರಾಮವೊಂದರಲ್ಲಿ ಸನ್ನಿ ಅಭಿಮಾನಿಗಳ ಬಳಗ, ನಟಿಯ ಹೆಸರಲ್ಲಿ ರಕ್ತದಾನ ಶಿಬಿರ ಮಾಡಿದರು. ಕರ್ನಾಟಕದ ಹಲವೆಡೆ ನಟಿಯನ್ನು ದೇವತೆ ಎಂದು ಅಭಿಮಾನದಿಂದ ಆರಾಧಿಸುತ್ತಾರೆ.



# ಟಾಕ್ಸಿಕ್ ಸಿನಿಮಾದಲ್ಲಿ ಅನಿಲ್ ಕಪೂರ್



ಮಾಸ್ ಆಗಿ ಎಂಟ್ರಿ ಕೊಟ್ಟ ಕಮಲ್ ಹಾಸನ್

ಬಾಲಿವುಡ್ ನಟ ಅನಿಲ್ ಕಪೂರ್ ಅವರ ಮುಂದಿನ ಸಿನಿಮಾ ಕುರಿತು ಬಿಗ್ ಅಪ್‌ಡೇಟ್‌ವೊಂದು ಸಿಕ್ಕಿದೆ. ಯಶ್ ನಟನೆಯ 'ಟಾಕ್ಸಿಕ್' ಸಿನಿಮಾದಲ್ಲಿ ಅನಿಲ್ ಕಪೂರ್ ಅವರು ನಟಿಸಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ನೆಟ್ಟಿಗರ ಚರ್ಚೆಗೆ ಗ್ರಾಸವಾಗಿದೆ. ಮುಂಬೈನಲ್ಲಿ 'ಟಾಕ್ಸಿಕ್' ಸಿನಿಮಾ ಶೂಟಿಂಗ್ ನಡೆಯುತ್ತಿರುವ ಸ್ಥಳದಲ್ಲಿ ಕಿಯಾರಾ ಅಡ್ವಾಣಿ ಜೊತೆ ಅನಿಲ್ ಕಪೂರ್ ಕಾಣಿಸಿಕೊಂಡಿದ್ದಾರೆ. ಆ ನಂತರ ಇಬ್ಬರೂ ಬೋಟ್‌ನಲ್ಲಿ ಕುಳಿತು ತೆರಳಿದ್ದಾರೆ. ಹಾಗಾಗಿ ಅನಿಲ್ ಕಪೂರ್ ಕೂಡ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ಫ್ಯಾನ್ಸ್ ಊಹಿಸಿದ್ದಾರೆ.

ಅಂದಹಾಗೆ, 1983ರಲ್ಲಿ 'ಪಲ್ಲವಿ ಅನುಪಲ್ಲವಿ' ಸಿನಿಮಾದಲ್ಲಿ ಅನಿಲ್ ಕಪೂರ್ ನಟಿಸಿದ್ದರು. ಈ ಚಿತ್ರವನ್ನು ಕನ್ನಡ ಮತ್ತು ತಮಿಳಿನಲ್ಲಿ ಖ್ಯಾತ ನಿರ್ದೇಶನ ಮಣಿರತ್ನಂ ನಿರ್ದೇಶಿಸಿದರು.

ಒಂದು ವೇಳೆ, 'ಟಾಕ್ಸಿಕ್'ನಲ್ಲಿ ಅನಿಲ್ ನಟಿಸಿದ್ದೇ ಆದರೆ 41 ವರ್ಷಗಳ ಬಳಿಕ ಮತ್ತೆ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಂತಾಗುತ್ತದೆ.

ಇನ್ನೂ 'ಟಾಕ್ಸಿಕ್' ಸಿನಿಮಾದಲ್ಲಿ ಯಶ್ ಜೊತೆ ಕಿಯಾರಾ, ನಯನತಾರಾ, ಹುಮಾ ಖುರೇಶಿ ಸೇರಿದಂತೆ ಅನೇಕರು ಹೆಸರು ಸದ್ದು ಮಾಡುತ್ತಿದೆ. ಆದರೆ ಚಿತ್ರತಂಡದಿಂದ ಅಧಿಕೃತ ಮಾಹಿತಿ ಸಿಗುವವರೆಗೂ ಕಾದುನೋಡಬೇಕಿದೆ.

# ಶ್ರೀಲೀಲಾಗೆ ಮದುವೆ ಮಾಡುವ ಜವಾಬ್ದಾರಿ ನನ್ನದು



ದಾಖಲೆ ಮುರಿದ ಬುಮ್ರಾ

ಕನ್ನಡತಿ ಶ್ರೀಲೀಲಾ ಅವರು ಟಾಲಿವುಡ್ ಟಾಪ್ ನಟಿಯರಲ್ಲಿ ಒಬ್ಬರಾಗಿದ್ದಾರೆ. ಅಪಾರ ಅಭಿಮಾನಿಗಳ ಬಳಗ ಹೊಂದಿರುವ ಶ್ರೀಲೀಲಾ ಅವರು ಬಾಲಯ್ಯ ನಿರೂಪಣೆಯ ಶೋಗೆ ಗೆಸ್ಟ್ ಆಗಿ ಹೋಗಿದ್ದರು. ಈ ವೇಳೆ, ಶ್ರೀಲೀಲಾಗೆ ಮದುವೆ ಮಾಡುವ ಹೊಣೆ ನನ್ನದು ಎಂದು ಬಾಲಯ್ಯ ತಿಳಿಸಿದ್ದಾರೆ.

ಸದ್ಯ 'ಕಿಸ್ಸಿಕ್' ಹೀರೋಯಿನ್ ಆಗಿ ಸದ್ದು ಮಾಡುತ್ತಿರುವ ಶ್ರೀಲೀಲಾ ಅವರ ಮದುವೆ ಬಗ್ಗೆ ಭಾರೀ ಚರ್ಚೆ ನಡೆಯುತ್ತಿದೆ. ನಟಿಯ ಕುರಿತು ಬಾಲಯ್ಯ ನೀಡಿರುವ ಹೇಳಿಕೆ ಸಖತ್ ಸದ್ದು ಮಾಡುತ್ತಿದೆ. 'ಅನ್‌ಸ್ಟಾಪೆಬಲ್ ವಿತ್ ಬಾಲಯ್ಯ' ಕಾರ್ಯಕ್ರಮಕ್ಕೆ ನವೀನ್ ಪೋಲಿಶೆಟ್ಟಿ ಜೊತೆ ಶ್ರೀಲೀಲಾ ಅತಿಥಿಯಾಗಿ ಆಗಮಿಸಿದರು. ಈ ವೇಳೆ, ಶ್ರೀಲೀಲಾ ನನ್ನ ಮಗಳಿದ್ದಂತೆ, ಆಕೆಯನ್ನು ನೋಡಿದರೆ ನನ್ನ ಮಗಳು ನೆನಪಾಗುತ್ತಾಳೆ. ತಂದೆಯ ಸ್ಥಾನದಲ್ಲಿದ್ದು, ಆಕೆಗೆ ಮದುವೆ ಮಾಡಿಸುವ ಜವಾಬ್ದಾರಿ ನನ್ನದು ಎಂದು ಬಾಲಯ್ಯ ಮಾತನಾಡಿದ್ದಾರೆ.

ಕಳೆದ ವರ್ಷ ತೆರೆಕಂಡ 'ಭಗವಂತ ಕೇಸರಿ' ಸಿನಿಮಾದಲ್ಲಿ ಬಾಲಯ್ಯ ಮಗಳಾಗಿ ಶ್ರೀಲೀಲಾ ನಟಿಸಿದರು. ಹಾಗಾಗಿ ಇಬ್ಬರ ನಡುವೆ ಉತ್ತಮ ಒಡನಾಟವಿದೆ. ತೆರೆಯ ಹಿಂದೆ ಕೂಡ ತಂದೆ ಮತ್ತು ಮಗಳಂತೆಯೇ ಬಾಂಧವ್ಯ ಹೊಂದಿದ್ದಾರೆ. ಹಾಗಾಗಿ ನಟಿಯ ಮೇಲೆ ನಂದಮೂರಿ ಬಾಲಕೃಷ್ಣಗೆ ವಿಶೇಷ ಪ್ರೀತಿಯಿದೆ.

ಅಂದಹಾಗೆ, ಡಿ.5ರಂದು ತೆರೆಕಂಡ 'ಪುಷ್ಪ 2' ಸಿನಿಮಾದಲ್ಲಿ ನಟಿ ಐಟಂ ಹಾಡಿಗೆ ಹೆಜ್ಜೆ ಹಾಕಿದ್ದರು. ಈ ಸಾಂಗ್ ಸೋಶಿಯಲ್ ಮೀಡಿಯಾದಲ್ಲಿ ಸೆನ್ಸೇಷನ್ ಕ್ರಿಯೇಟ್ ಮಾಡಿದೆ. ಇನ್ನೂ ನಿತಿನ್ ಜೊತೆಗಿನ ಶ್ರೀಲೀಲಾ ನಟನೆಯ 'ರಾಬಿನ್‌ಹುಡ್' ಸಿನಿಮಾ ಡಿ.25ರಂದು ರಿಲೀಸ್‌ಗೆ ಸಜ್ಜಾಗಿದೆ. ಈ ಚಿತ್ರದ ಪ್ರಚಾರ ಕಾರ್ಯದಲ್ಲಿ ನಟಿ ಬ್ಯುಸಿಯಾಗಿದ್ದಾರೆ.



# 500 ಕೋಟಿ ಬಾಚಿದ ಪುಷ್ಪ 2

ಐಕಾನ್ ಸ್ಟಾರ್ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ ನಟನೆಯ 'ಪುಷ್ಪ 2' ಡಿ.5ರಂದು ರಿಲೀಸ್ ಆಗಿ ಗಲ್ಲಾಪೆಟ್ಟಿಗೆಯಲ್ಲಿ 500 ಕೋಟಿ ರೂ. ಕಲೆಕ್ಷನ್ ಮಾಡಿದೆ. ಸಿನಿಮಾ ರಿಲೀಸ್ ಆಗಿ 3 ದಿನಕ್ಕೆ ಬಂಗಾರದ ಬೆಳೆ ತೆಗೆಯುತ್ತಿರುವ 'ಪುಷ್ಪ 2' ಚಿತ್ರ 500 ಕೋಟಿ ರೂ. ಗಳಿಕೆ ಮಾಡಿ ಮುನ್ನುಗ್ಗುತ್ತಿದೆ. ಈ ವಿಚಾರವನ್ನು ಸ್ವತಃ ನಿರ್ಮಾಣ ಸಂಸ್ಥೆ ತಿಳಿಸಿದೆ. ಬಹುಭಾಷೆಗಳಲ್ಲಿ 'ಪುಷ್ಪ 2' ಸಿನಿಮಾವನ್ನು ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡಿದೆ. ಇದೀಗ ಈ ಚಿತ್ರ ವಿಶ್ವಾದ್ಯಂತ 500 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿದೆ ಎಂದು ಸೋಶಿಯಲ್ ಮೀಡಿಯಾದಲ್ಲಿ ನಿರ್ಮಾಣ ಸಂಸ್ಥೆ ತಿಳಿಸಿದೆ. ಇನ್ನೂ ಅಲ್ಲು ಅರ್ಜುನ್ ನಟನೆ ಮತ್ತು ಭರ್ಜರಿ ಆಯಕ್ಷನ್ ಸೀಕ್ವೆನ್ಸ್ ಫ್ಯಾನ್ಸ್‌ಗೆ ಇಷ್ಟವಾಗಿದೆ. ಶ್ರೀವಲ್ಲಿಯಾಗಿ ರಶ್ಮಿಕಾ ನಟನೆಯನ್ನು ಅಭಿಮಾನಿಗಳು ಕೊಂಡಾಡಿದ್ದಾರೆ. ಶ್ರೀಲೀಲಾ ಕಿಸ್ಸಿಕ್ ಸಾಂಗ್, ಫಹಾದ್ ಫಾಸಿಲ್ ನಟನೆ, ಪುಷ್ಪರಾಜ್ ಜೊತೆಗಿನ ತಾರಕ್ ಪೊನ್ನಪ್ಪ ಸಂಘರ್ಷ ಇವೆಲ್ಲವೂ ಸಿನಿಮಾದಲ್ಲಿ ಹೈಲೆಟ್ ಆಗಿದೆ. ಸುಕುಮಾರ್ ನಿರ್ದೇಶನವನ್ನು ಅಭಿಮಾನಿಗಳು ಮೆಚ್ಚಿಕೊಂಡಿದ್ದಾರೆ. ಅಂದಹಾಗೆ, ಚಿತ್ರದಲ್ಲಿ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ, ಶ್ರೀಲೀಲಾ, ಡಾಲಿ, ತಾರಕ್, ಅನಸೂಯ, ಜಗಪತಿ ಬಾಬು ಸೇರಿದಂತೆ ಅನೇಕರು ನಟಿಸಿದ್ದಾರೆ.

# ಗರ್ಲ್‌ಫ್ರೆಂಡ್ ಪರಿಚಯಿಸಲಿದ್ದಾರೆ ದೇವರಕೊಂಡ



ದೀಕ್ಷಿತ್ ಪವರ್ ಫುಲ್ ರೋಲ್

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಅವರು 'ಪುಷ್ಪ 2' ಸಿನಿಮಾದ ಸಕ್ಸಸ್ ಬೆನ್ನಲ್ಲೇ ಗುಡ್ ನ್ಯೂಸ್ ಕೊಟ್ಟಿದ್ದಾರೆ. ರಶ್ಮಿಕಾರನ್ನು ಗರ್ಲ್‌ಫ್ರೆಂಡ್ ಆಗಿ ಪರಿಚಯಿಸಲು ಮುಹೂರ್ತ ಫಿಕ್ಸ್ ಆಗಿದೆ. 'ಪುಷ್ಪ 2' ಬಳಿಕ ರಶ್ಮಿಕಾ ಮಂದಣ್ಣ ನಟನೆಯ ಮುಂದಿನ ಸಿನಿಮಾ ಅಪ್‌ಡೇಟ್‌ವೊಂದು ಸಿಕ್ಕಿದೆ. ರಶ್ಮಿಕಾ ನಟನೆಯ 'ದಿ ಗರ್ಲ್‌ಫ್ರೆಂಡ್' ಸಿನಿಮಾದ ಟೀಸರ್ ರಿಲೀಸ್ ಅನ್ನು ವಿಜಯ್ ದೇವರಕೊಂಡ ಬಿಡುಗಡೆ ಮಾಡಲಿದ್ದಾರೆ. ಡಿ.9ರಂದು ಬೆಳಗ್ಗೆ 11:07ಕ್ಕೆ ಟೀಸರ್ ಅನ್ನು ವಿಜಯ್ ರಿವೀಲ್ ಮಾಡಲಿದ್ದಾರೆ. ನಿರ್ಮಾಪಕ ಅಲ್ಲು ಅರವಿಂದ್ ಅವರು 'ದಿ ಗರ್ಲ್‌ಫ್ರೆಂಡ್' ಚಿತ್ರವನ್ನು ಬಹುಭಾಷೆಗಳಲ್ಲಿ ನಿರ್ಮಾಣ ಮಾಡಲಿದ್ದಾರೆ. ವಿಶೇಷ ಅಂದರೆ ಈ ಚಿತ್ರದಲ್ಲಿ ಕನ್ನಡದ ನಟ ದೀಕ್ಷಿತ್ ಶೆಟ್ಟಿ ಪವರ್‌ಫುಲ್ ರೋಲ್‌ನಲ್ಲಿ ನಟಿಸಿದ್ದಾರೆ. ಈ ಸಿನಿಮಾ ಮೇಲೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ.

# ಸೋತ ಭಾರತ; ಸತತ 2ನೇ ಬಾರಿಗೆ ಏಷ್ಯನ್ ಕಿರೀಟ ತೊಟ್ಟ ಬಾಂಗ್ಲಾದೇಶ

ದುಬೈನಲ್ಲಿ ನಡೆದ ಅಂಡರ್-19 ಏಷ್ಯಾಕಪ್ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡ ಭಾರತವನ್ನು ಸೋಲಿಸಿ ಸತತ ಎರಡನೇ ಬಾರಿಗೆ ಪ್ರಶಸ್ತಿ ಗೆದ್ದುಕೊಂಡಿತು. ಬಾಂಗ್ಲಾದೇಶ ನೀಡಿದ 198 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ಕೇವಲ 139 ರನ್‌ಗಳಿಗೆ ಆಲೌಟ್ ಆಯಿತು. ಯುವ ಪಡೆಯ ಈ ಸೋಲಿಗೆ ಬ್ಯಾಟಿಂಗ್ ವೈಫಲ್ಯವೇ ಪ್ರಮುಖ ಕಾರಣವಾಯಿತು. ಭಾರತ ಮತ್ತು ಬಾಂಗ್ಲಾದೇಶ ತಂಡಗಳ ನಡುವೆ ದುಬೈ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ 19 ವರ್ಷದೊಳಗಿನವರ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಬಾಂಗ್ಲಾದೇಶ ತಂಡ, ಭಾರತ ತಂಡವನ್ನು ಸೋಲಿಸುವುದರೊಂದಿಗೆ ಸತತ ಎರಡನೇ ಬಾರಿಗೆ ಪ್ರಶಸ್ತಿ ಗೆದ್ದುಕೊಂಡಿದೆ. ಅಂದರೆ ಬಾಂಗ್ಲಾದೇಶ ತಂಡ ತನ್ನ ಪ್ರಶಸ್ತಿಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಉಭಯ ತಂಡಗಳ ನಡುವಿನ ಈ ಪಂದ್ಯ ಅತ್ಯಂತ ಕಡಿಮೆ ಸ್ಕೋರಿಂಗ್ ಆಗಿದ್ದು, ಬಾಂಗ್ಲಾದೇಶ ತಂಡ ಅದ್ಭುತ ಪ್ರದರ್ಶನ ನೀಡಿ ಪಂದ್ಯ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

**ಇತಿಹಾಸ ನಿರ್ಮಿಸಿದ ಬಾಂಗ್ಲಾ**

ಬಾಂಗ್ಲಾದೇಶ ತಂಡ ಸತತ ಎರಡನೇ ಬಾರಿಗೆ ಅಂಡರ್-19 ಏಷ್ಯಾಕಪ್ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದೆ. ಈ ಪಂದ್ಯಾವಳಿಯನ್ನು 1989 ರಿಂದ ಆಡಲಾಗುತ್ತಿದ್ದು ಬಾಂಗ್ಲಾದೇಶ ತಂಡ ಅಂಡರ್-19 ಏಷ್ಯಾಕಪ್ ಇತಿಹಾಸದಲ್ಲಿ ಎರಡನೇ ಬಾರಿಗೆ ಪ್ರಶಸ್ತಿ ಗೆದ್ದ ಎರಡನೇ ತಂಡವಾಗಿದೆ. ಉಳಿದಂತೆ ಟೀಂ ಇಂಡಿಯಾ 8 ಬಾರಿ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದೆ ಈ ಎರಡು ತಂಡಗಳನ್ನು ಹೊರತುಪಡಿಸಿ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ತಲಾ 1 ಬಾರಿ ಈ ಪಂದ್ಯಾವಳಿಯನ್ನು ಗೆದ್ದಿವೆ. ಒಂದೆಡೆ ಬಾಂಗ್ಲಾದೇಶ ಸತತ 2ನೇ ಬಾರಿಗೆ ಏಷ್ಯನ್ ಕಿರೀಟ ತೊಟ್ಟಿದ್ದರೆ, ಇತ್ತ ಟೀಂ ಇಂಡಿಯಾ ಇದೇ ಮೊದಲ ಬಾರಿಗೆ ಫೈನಲ್‌ನಲ್ಲಿ ಸೋಲು ಕಂಡಿದೆ. ಈ ಹಿಂದೆ ಭಾರತ ತಂಡ 19 ವರ್ಷದೊಳಗಿನವರ ಏಷ್ಯಾಕಪ್‌ನಲ್ಲಿ ಆಡಿದ ಪ್ರತಿ ಫೈನಲ್ ಪಂದ್ಯದಲ್ಲೂ ಪ್ರಶಸ್ತಿ ಜಯಿಸಿತ್ತು.



ಮೋಹಕ ತಾರೆ ಫ್ಯಾನ್ಸ್‌ಗೆ ಗುಡ್ ನ್ಯೂಸ್

**198 ರನ್ ಟಾರ್ಗೆಟ್ ನೀಡಿದ ಬಾಂಗ್ಲಾ**

ಈ ಪಂದ್ಯದಲ್ಲಿ ಭಾರತ ತಂಡ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿತು. ನಾಯಕ ನಿರ್ಧಾರವನ್ನು ಸರಿ ಎಂದು ಸಾಭೀತುಪಡಿಸಿದ ಭಾರತದ ಬೌಲರ್‌ಗಳು ಬಾಂಗ್ಲಾದೇಶ ತಂಡವನ್ನು 198 ರನ್‌ಗಳಿಗೆ ನಿರ್ಬಂಧಿಸುವಲ್ಲಿ ಯಶಸ್ವಿಯಾದರು. ತಂಡದ ಪರ ಯುಧಾಜಿತ್ ಗುಹಾ, ಚೇತನ್ ಶರ್ಮಾ ಮತ್ತು ಹಾರ್ದಿಕ್ ರಾಜ್ ತಲಾ 2 ವಿಕೆಟ್ ಪಡೆದರೆ, ಕಿರಣ್ ಚೋರ್ಮಲೆ, ಕೆಪಿ ಕಾರ್ತಿಕೇಯ ಮತ್ತು ಆಯುಷ್ ಮ್ಹಾತ್ರೆ ತಲಾ 1 ವಿಕೆಟ್ ಪಡೆದರು. ಮತ್ತೊಂದೆಡೆ, ಬಾಂಗ್ಲಾದೇಶ ಪರ ರಿಜಾನ್ ಹಸನ್ ಗರಿಷ್ಠ 47 ರನ್ ಗಳಿಸಿದರೆ, ಮೊಹಮ್ಮದ್ ಶಿಹಾಬ್ ಜೇಮ್ಸ್ ಕೂಡ 40 ರನ್ ಕೊಡುಗೆ ನೀಡಿದರು. ಫರೀದ್ ಹಸನ್ ಕೂಡ 39 ರನ್ ಗಳ ಇನಿಂಗ್ಸ್ ಆಡಿದರು.

**ಭಾರತದ ಬ್ಯಾಟಿಂಗ್ ವಿಫಲ**

**199 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ತಂಡದ ಆರಂಭ ಅತ್ಯಂತ ಕಳಪೆಯಾಗಿತ್ತು. ಆರಂಭಿಕ ಆಯುಷ್ ಮ್ಹಾತ್ರೆ 4 ರನ್ ಕಲೆ ಹಾಕಿ ಪೆವಿಲಿಯನ್ ಸೇರಿಕೊಂಡರು. ಇದಾದ ನಂತರ ಸತತವಾಗಿ ತಂಡದ ವಿಕೆಟ್‌ಗಳು ಬೀಳುತ್ತಲೇ ಸಾಗಿದವು. ಇದರಿಂದಾಗಿ ಭಾರತ ತಂಡವು ಪಂದ್ಯದಲ್ಲಿ ಪುನರಾಗಮನ ಮಾಡಲು ಸಾಧ್ಯವಾಗಲಿಲ್ಲ. ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಕೂಡ ಕೇವಲ 9 ರನ್ ಗಳಿಸಲಷ್ಟೇ ಶಕ್ತರಾದರು. ಇವರಲ್ಲದೆ ಕೆಪಿ ಕಾರ್ತಿಕೇಯ 21 ರನ್ ಗಳಿಸಿದರೆ, ಆಂಡ್ರೆ ಸಿದ್ಧಾರ್ಥ ಕೂಡ 20 ರನ್‌ಗಳಿಗೆ ಸುಸ್ತಾದರು. ನಿಖಿಲ್ ಕುಮಾರ್‌ಗೆ ಖಾತೆ ತೆರೆಯಲೂ ಸಾಧ್ಯವಾಗಲಿಲ್ಲ. ನಾಯಕ ಮೊಹಮ್ಮದ್ ಅಮಾನ್ ಖಂಡಿತವಾಗಿಯೂ ಹೋರಾಟದ ಇನ್ನಿಂಗ್ಸ್ ಆಡಿದರಾದರೂ ಅವರಿಂದಲೂ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಸಾಧ್ಯವಾಗಲಿಲ್ಲ.**

# ಸುಳ್ಳು ಹೇಳುತ್ತಿದ್ದಾರೆ

ಅಡಿಲೇಡ್‌ನಲ್ಲಿ ನಡೆದ ಡೇ ನೈಟ್ ಟೆಸ್ಟ್‌ನಲ್ಲಿ ಟೀಂ ಇಂಡಿಯಾ 10 ವಿಕೆಟ್‌ಗಳ ಹೀನಾಯ ಸೋಲು ಕಂಡಿದೆ. ಹೀಗಾಗಿ ಉಭಯ ತಂಡಗಳ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿ 1-1 ರಿಂದ ಸಮಬಲಗೊಂಡಿದೆ. ಆಸೀಸ್ ವಿರುದ್ಧ ಟೀಂ ಇಂಡಿಯಾದ 10 ವಿಕೆಟ್‌ಗಳ ಸೋಲು ಸಾಕಷ್ಟು ಚರ್ಚೆ ಹುಟ್ಟುಹಾಕಿದೆ. ಆದರೆ ಈ ಸೋಲಿನ ಹೊರತಾಗಿಯೂ ಈ ಟೆಸ್ಟ್ ಪಂದ್ಯದಲ್ಲಿ ಹೆಚ್ಚು ಚರ್ಚೆಯಾದ ವಿಷಯವೆಂದರೆ ಅದು ಮೊಹಮ್ಮದ್ ಸಿರಾಜ್ ಮತ್ತು ಟ್ರಾವಿಸ್ ಹೆಡ್ ನಡುವಿನ ಮಾತಿನ ಚಕಮಕಿ. ವಾಸ್ತವವಾಗಿ ಆಸ್ಟ್ರೇಲಿಯಾದ ಮೊದಲ ಇನ್ನಿಂಗ್ಸ್‌ನಲ್ಲಿ ಹೆಡ್ ಅ ರನ್ನು ಔಟ್ ಮಾಡಿದ ನಂತರ, ಸಿರಾಜ್ ಆಕ್ರಮಣಕಾರಿಯಾಗಿ ಸಂಭ್ರಮಿಸಿದ್ದರು. ಇದರಿಂದಾಗಿ ಅಸಮಾಧಾನಗೊಂಡಿದ್ದ ಹೆಡ್, ದಿನದಾಟ ಮುಗಿದ ಬಳಿಕ ನಾನು ಸಿರಾಜ್‌ಗೆ ಉತ್ತಮವಾಗಿ ಬೌಲ್ ಮಾಡಿದೆ ಎಂದು ಹೇಳಿದೆ. ಆದರೆ, ಸಿರಾಜ್ ಅದನ್ನು ತಪ್ಪಾಗಿ ಅರ್ಥೈಸಿಕೊಂಡು ಪೆವಿಲಿಯನ್‌ಗೆ ಹೋಗುವಂತೆ ಕೈಸನ್ನೆ ಮಾಡಿದರು. ಇದರಿಂದ ನನಗೆ ಬೇಸರವಾಯಿತು ಎಂದಿದ್ದರು. ಇದೀಗ ಹೆಡ್ ಹೇಳಿಕೆಯ ಬಗ್ಗೆ ಸಿರಾಜ್ ಪ್ರತಿಕ್ರಿಯೆ ನೀಡಿದ್ದು, ಅವರು ಸುಳ್ಳು ಹೇಳುತ್ತಿದ್ದಾರೆ ಎಂದಿದ್ದಾರೆ.



ಅಡಿಲೇಡ್ ಟೆಸ್ಟ್‌ನ ಮೂರನೇ ದಿನದಾಟಕ್ಕೂ ಮುನ್ನ ಈ ಬಗ್ಗೆ ಮಾತನಾಡಿದ ಸಿರಾಜ್, ಹೆಡ್ ಸುಳ್ಳು ಹೇಳುತ್ತಿದ್ದಾರೆ. ಭಾರತ ತಂಡವು ಪ್ರತಿಯೊಬ್ಬ ಆಟಗಾರನನ್ನು ಗೌರವಿಸುತ್ತದೆ. ಹೆಡ್ ಅವರೇ ನನ್ನನ್ನು ನಿಂದಿಸಿದ್ದಾರೆ.

# ಬಿಸಿಸಿಐಗೆ ಹಂಗಾಮಿ ಕಾರ್ಯದರ್ಶಿಯ ನೇಮಕ

ಜಯ್ ಶಾ ಅವರು ಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬಿಸಿಸಿಐನ ಕಾರ್ಯದರ್ಶಿ ಸ್ಥಾನ ಖಾಲಿಯಾಗಿತ್ತು. ಇದೀಗ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ದೇವಜಿತ್ ಸೈಕಿಯಾ ಅವರನ್ನು ಹಂಗಾಮಿ ಕಾರ್ಯದರ್ಶಿಯಾಗಿ ನೇಮಿಸಿದ್ದಾರೆ. ಸೆಪ್ಟೆಂಬರ್ 2025 ರವರೆಗೆ ದೇವಜಿತ್ ಈ ಹುದ್ದೆಯನ್ನು ನಿರ್ವಹಿಸಲಿದ್ದಾರೆ. ಅವರು ಪ್ರಥಮ ದರ್ಜೆ ಕ್ರಿಕೆಟ್ ಆಟಗಾರರಾಗಿದ್ದು, ಅಸ್ಸಾಂ ತಂಡವನ್ನು ಪ್ರತಿನಿಧಿಸಿದ್ದಾರೆ. ಜಯ್ ಶಾ ಐಸಿಸಿ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ನಂತರ ಖಾಲಿಯಾಗಿದ್ದ ಬಿಸಿಸಿಐ ಕಾರ್ಯದರ್ಶಿ ಸ್ಥಾನಕ್ಕೆ ಹಂಗಾಮಿ ಕಾರ್ಯದರ್ಶಿಯನ್ನು ನೇಮಕ ಮಾಡಲಾಗಿದೆ. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ತಮ್ಮ ಸಾಂವಿಧಾನಿಕ ಅಧಿಕಾರವನ್ನು ಬಳಸಿಕೊಂಡು ದೇವ್‌ಜಿತ್ ಸೈಕಿಯಾ ಅವರನ್ನು ಹಂಗಾಮಿ ಕಾರ್ಯದರ್ಶಿಯಾಗಿ ನೇಮಿಸಿದ್ದಾರೆ. ಇದೀಗ ಜಯ್ ಶಾ ಸ್ಥಾನಕ್ಕೆ ಬಂದಿರುವ ದೇವ್‌ಜಿತ್ ಸೈಕಿಯಾ ಅವರು ಟೀಂ ಇಂಡಿಯಾ ಪರ ಯಾವುದೇ ಪಂದ್ಯವನ್ನಾಡಿಲ್ಲ. ಆದರೆ ಅವರು ಪ್ರಥಮ ದರ್ಜೆ ಪಂದ್ಯಗಳನ್ನಾಡಿದ್ದು, ಅಸ್ಸಾಂ ತಂಡದ ಪರ ರಣಜಿ ಆಡಿದ್ದಾರೆ. ಹಂಗಾಮಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ದೇವ್‌ಜಿತ್ ಸೈಕಿಯಾ ಅವರ ಅಧಿಕಾರಾವಧಿ ಮುಂದಿನ ವರ್ಷದ ಸೆಪ್ಟೆಂಬರ್‌ವರೆಗೆ ಇರಲಿದೆ. 2019 ರಂದು ಬಿಸಿಸಿಐ ಕಾರ್ಯದರ್ಶಿ ಸ್ಥಾನವನ್ನು ಅಲಂಕರಿಸಿದ್ದ ಜಯ್ ಶಾ ಐದು ವರ್ಷಗಳ ಕಾಲ ಈ ಹುದ್ದೆಯನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಇದೀಗ ಐಸಿಸಿಯ ಅಧ್ಯಕ್ಷರಾಗಿ ಜಯ್ ಶಾ ಅಧಿಕಾರ ಸ್ವೀಕರಿಸಿದ ಕೂಡಲೇ ಬಿಸಿಸಿಐ ಕಾರ್ಯದರ್ಶಿ ಹುದ್ದೆಯನ್ನು ತೊರೆಯಬೇಕಾಯಿತು.



ಈ ಸಂದರ್ಭದಲ್ಲಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ತಮ್ಮ ಸಾಂವಿಧಾನಿಕ ಅಧಿಕಾರವನ್ನು ಬಳಸಿಕೊಂಡು ದೇವಜಿತ್ ಸೈಕಿಯಾ ಅವರನ್ನು ಈ ಹುದ್ದೆಗೆ ನೇಮಿಸಿದ್ದಾರೆ. ಆದರೆ, ದೇವಜಿತ್ ಸೈಕಿಯಾ ಅವರನ್ನು ಹಂಗಾಮಿ ಕಾರ್ಯದರ್ಶಿಯನ್ನಾಗಿ ಮಾಡಲಾಗಿದ್ದು, ಅವರಿಗೆ ಈ ಹುದ್ದೆಯ ಖಾಯಂ ಜವಾಬ್ದಾರಿ ನೀಡಿಲ್ಲ. ಅವರು ಸೆಪ್ಟೆಂಬರ್ 2025 ರವರೆಗೆ ಅಂದರೆ ಸುಮಾರು 10 ತಿಂಗಳವರೆಗೆ ಬಿಸಿಸಿಐ ಕಾರ್ಯದರ್ಶಿ ಹುದ್ದೆಯನ್ನು ನಿರ್ವಹಿಸಲಿದ್ದಾರೆ.

# ಮೊಹಮ್ಮದ್ ಶಮಿ ಬಗ್ಗೆ ಶಾಕಿಂಗ್ ಮಾಹಿತಿ ನೀಡಿದ ರೋಹಿತ್ ಶರ್ಮಾ

ಚಿತ್ರತಂಡಕ್ಕೆ ಸಾಥ್ ಕೊಡ್ತಾರಾ ಶಿವಣ್ಣ

ಎರಡನೇ ಟೆಸ್ಟ್‌ನಲ್ಲಿ ಅನುಭವಿ ವೇಗಿಯ ಕೊರತೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಇದೀಗ ತಂಡದ ಅನುಭವಿ ವೇಗಿ ಮೊಹಮ್ಮದ್ ಶಮಿ ಟೀಂ ಇಂಡಿಯಾವನ್ನು ಕೂಡಿಕೊಳ್ಳುವ ಬಗ್ಗೆ ನಾಯಕ ರೋಹಿತ್ ಶರ್ಮಾ ಆಘಾತಕ್ಕಾರಿ ಮಾಹಿತಿ ನೀಡಿದ್ದಾರೆ. ವಾಸ್ತವವಾಗಿ ಕಳೆದೆರಡು ದಿನಗಳಿಂದ ಮೊಹಮ್ಮದ್ ಶಮಿ ಇಷ್ಟರಲ್ಲೇ ಟೀಂ ಇಂಡಿಯಾವನ್ನು ಕೂಡಿಕೊಳ್ಳಲಿದ್ದಾರೆ ಎಂಬ ಸುದ್ದಿ ಸೋಶಿಯಲ್ ಮೀಡಿಯಾಗಳಲ್ಲಿ ಹರಿದಾಡುತ್ತಿದೆ. ಎಲ್ಲಾವೂ ಅಂದುಕೊಂಡತೆ ನಡೆದರೆ ಶಮಿ ಉಭಯ ತಂಡಗಳ ನಡುವಿನ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ತಂಡದ ಪರ ಕಣಕ್ಕಿಳಿಯಬಹುದು ಎಂದು ಹೇಳಲಾಗುತ್ತಿದೆ. ಆದರೀಗ ಶಮಿಯ ಲಭ್ಯತೆಯ ಬಗ್ಗೆ ಮಾಹಿತಿ ನೀಡಿರುವ ರೋಹಿತ್, ಅಭಿಮಾನಿಗಳ ಆತಂಕವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಶಮಿ ಫಿಟ್ನೆಸ್ ಬಗ್ಗೆ ರೋಹಿತ್ ಮಾಹಿತಿ ಸದ್ಯಕ್ಕೆ ಸಿಕ್ಕಿರುವ ಮಾಹಿತಿ ಪ್ರಕಾರ ಶಮಿ ಮೂರನೇ ಟೆಸ್ಟ್‌ನಲ್ಲಿ ಆಡುವುದು ಬಹುತೇಕ ಅಸಾಧ್ಯ. ಆದರೆ ಅವರು ಯಾವಾಗ ಟೀಂ ಇಂಡಿಯಾಕ್ಕೆ ಮರಳುತ್ತಾರೆ ಎಂಬುದು ಎಲ್ಲಾರ ಮನಸ್ಸಿನಲ್ಲಿರುವ ಪ್ರಶ್ನೆ. ಅಡಿಲೇಡ್‌ನಲ್ಲಿನ ಸೋಲಿನ ನಂತರ, ರೋಹಿತ್‌ಗೆ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಕೇಳಲಾಯಿತು. ಇದಕ್ಕೆ ಉತ್ತರಿಸಿದ ನಾಯಕ ರೋಹಿತ್, ಶಮಿ ಸರಣಿಯ ಮಧ್ಯದಲ್ಲಿ ತಂಡವನ್ನು ಸೇರಿಕೊಳ್ಳಲು ಬಾಗಿಲು ತೆರೆದಿದೆ. ಆದರೆ ತಂಡವು ಅವರ ಮೇಲೆ ಯಾವುದೇ ರೀತಿಯ ಒತ್ತಡವನ್ನು ಹಾಕಲು ಬಯಸುವುದಿಲ್ಲ.

ಏಕೆಂದರೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯ ಆಡುವಾಗ ಶಮಿ ಮೊಣಕಾಲಿನಲ್ಲಿ ಊತ ಕಂಡುಬಂದಿದೆ. ಹೀಗಾಗಿ ಬಿಸಿಸಿಐ ವೈದ್ಯಕೀಯ ತಂಡ ಶಮಿ ಮೇಲೆ ನಿರಂತರವಾಗಿ ನಿಗಾ ವಹಿಸುತ್ತಿದ್ದು, ಅವರ ಸಲಹೆಯ ಮೇರೆಗೆ ಟೀಂ ಇಂಡಿಯಾ ಮುಂದಿನ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಿದೆ. ಶಮಿ ಸಂಪೂರ್ಣ ಫಿಟ್ ಆಗಿ ಬಂದರೆ ತಂಡಕ್ಕೆ ಮತ್ತು ಬೌಲಿಂಗ್ ವಿಭಾಗಕ್ಕೆ ಬಲ ಬರಲಿದೆ ಎಂದು ರೋಹಿತ್ ಹೇಳಿದ್ದಾರೆ. ಸುಮಾರು ಒಂದು ವರ್ಷ ಕ್ರಿಕೆಟ್ ಮೈದಾನದಿಂದ ಹೊರಗುಳಿದ ಶಮಿ ಕಳೆದ ತಿಂಗಳಷ್ಟೇ ರಣಜಿ ಟ್ರೋಫಿ ಪಂದ್ಯ ಆಡುವ ಮೂಲಕ ತಂಡಕ್ಕೆ ಮರಳಿದ್ದರು. ಅಂದಿನಿಂದ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಸತತ 7 ಪಂದ್ಯಗಳನ್ನು ಆಡಿದ್ದಾರೆ. ಇಲ್ಲಿ ಶಮಿ ಅವರ ಪ್ರದರ್ಶನ ಅಮೋಘವಾಗಿದ್ದು, ತಂಡವನ್ನು ಪ್ರಿ ಕ್ವಾರ್ಟರ್‌ಫೈನಲ್‌ಗೆ ಕೊಂಡೊಯ್ದಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966